ಸಂಪುಟ 22 ಸಂಚಿಕೆ 15
ಏಪ್ರಿಲ್ 9, 2000 ಬೆಲೆ ರೂ. 3.00


ದುಡಿವ ಜನರ ಪ್ರಾಣಮಿತ್ರ

ಪೆಕ್ಷ್ಯಾರರಗ



ಬಜೆಟ್ ಎಂಬ ಆರ್ಥಿಕ ಧಾಳಿ

ಮಾರಿಕೊಂಡ ಶಾಸಕರು



ಆಲಮಟ್ಟಿ: ವಿಫಲ ಕರಸೇವೆ

ಫಿರ್‌ಭಿ
ದಿಲ್ ಹೈ
ಹಿಂದೂಸ್ತಾನಿ

ಗ್ರಾಹಕ ಸಂಸ್ಕೃತಿ
ಖಾಸಗೀ ಟಿ.ವಿ.
ಚಾನಲ್‌ಗಳ
ಪ್ರಬಲ ಲೇವಡಿ



ಇತಿಹಾಸದ ಪುಟಗಳಿಂದ

ಇಎಂಎಸ್ ಅವರ ಶಿಕ್ಷಣದ ಸಮಯದಲ್ಲಿ ನೆನಪುಗಳು

ನಾವು ಮೇಲ್ಜಾತಿಯ ಮತ್ತು ಸಂಪ್ರದಾಯವಾದಿ ಬ್ರಾಹ್ಮಣರಾಗಿದ್ದೆವು. ಹಾಗೂ ಆಧುನಿಕತೆಯ ಯಾವುದೇ ವಾಸನೆಯೂ ನಮಗೆ ನಿಷಿದ್ಧವಾಗಿತ್ತು. ಆಧುನಿಕ ಶಾಲಾ ಶಿಕ್ಷಣದ ಕುರಿತು ಆಲೋಚಿಸಲೂ ಸಾಧ್ಯವಿರದ ಒಂದು ವಾತಾವರಣದಲ್ಲಿ ನನ್ನ ಸಹೋದರರೊಂದಿಗೆ ನನ್ನನ್ನು ಬೆಳಸಲಾಗಿತ್ತು. ಋಗ್ವೇದದಂತಹ ಧರ್ಮ ಗ್ರಂಥಗಳನ್ನು ಅಭ್ಯಾಸ ಮಾಡುವುದು, ಸಾತ್ವಿಕ ಜೀವನವನ್ನು ನಡೆಸುವುದು, ದೇವತೆಗಳನ್ನು ಪೂಜಿಸುವುದು ಹಾಗೂ ತಲೆಮಾರುಗಳಿಂದ ಬಳುವಳಿಯಾಗಿ ಬಂದ ಸಮಾಜದ ಸಂಪ್ರದಾಯಗಳನ್ನೂ ನಡೆತೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು ಇವುಗಳು ನಮಗಾಗಿ ನಿಗದಿಗೊಳಿಸಲಾದ ಕರ್ತವ್ಯಗಳಾಗಿದ್ದವು.

ಆದರೆ ಎಲ್ಲೆಡೆ ಹೊಸಗಾಳಿ ಬೀಸುತ್ತಿತ್ತು ಮತ್ತು ಇದರಿಂದಾಗಿ ಸಮಾಜದ ಆಯ್ದ ಕೆಲವು ವ್ಯಕ್ತಿಗಳು ಆಧುನಿಕ ಶಾಲಾ ಶಿಕ್ಷಣಕ್ಕೆ ಹೋಗುವಂತಾಯಿತು. " ಎಲ್ಲಾ ಮತ್ತು ಒಟ್ಟಾರೆ" ಅಂದರೆ, "ಕೆಳ" ಜಾತಿಗಳ ಹುಡುಗರು "ಮೇಲ್ಜಾತಿ"ಯ ಹುಡುಗರ ಬುಜಕ್ಕೆ ಭುಜತಾಗಿಸುವ ಸಾಮಾನ್ಯ ಶಾಲೆಗಳಲ್ಲಿ ಅಲ್ಲ. ನಂಬೂದಿರಿ ಹುಡುಗರಿಗೆ ಮಾತ್ರ ಪ್ರವೇಶ ನೀಡುವ ಹಾಗೂ ಈ ಸಮುದಾಯದ ಹುಡುಗರಿಗೆ "ವಿಶೇಷವಾಗಿ ಅಗತ್ಯ ವಿರುವ" ವಿಷಯಗಳೆಂದು ಪರಿಗಣಿಸಲ್ಪಟ್ಟವುಗಳು ಶಿಕ್ಷಣದಲ್ಲಿ ಒಳಗೊಂಡಿರುವ ಒಂದು "ವಿಶೇಷ ಶಾಲೆಯಲ್ಲಿ". ನನ್ನ ಅಣ್ಣಂದಿರ ಪೈಕಿ ಇಬ್ಬರು ಈ ವಿಶೇಷ ಶಾಲೆಯಲ್ಲಿ ಕೆಲವು ತಿಂಗಳುಗಳನ್ನು ಕಳೆದರು. ಆದರೆ ನನ್ನನ್ನು "ತುಂಬಾ ಬುದ್ದಿವಂತ"ನೆಂದ ಪರಿಗಣಿಸಲಾಯಿತು ಮತ್ತು ಆ ಕಾರಣಕ್ಕಾಗಿ ನನ್ನನ್ನು ಇಂತಹ ಕೀಳು ಮಟ್ಟದ ಶಿಕ್ಷಣ"ಕ್ಕೆ ತಳ್ಳದೆ ಋಗ್ವೇದದಿಂದ ಆರಂಭಿಸಿ ಸಂಸ್ಕೃತ ಕಾವ್ಯಗಳನ್ನು ಅಭ್ಯಾಸ ಮಾಡುವುದಕ್ಕೆ ಸೀಮಿತಗೊಳಿಸಬೇಕೆಂದು ನಿರ್ದೇಶಿಸಲಾಯಿತು.

ನಮ್ಮ ಕುಟುಂಬವು ಜಾತಿ ವ್ಯವಸ್ಥೆಯ ಅತ್ಯಂತ ಮೇಲಿನ ಸ್ತರದಲ್ಲಿತ್ತು ಮಾತ್ರವಲ್ಲದೆ ಅದಕ್ಕೆ ತನ್ನದೇ ಆದ ವಿಶಾಲ ಭೂಮಿ ಇತ್ತು. ಆದರೆ ಅದರ ಒಂದು ಚದರ ಇಂಚು ಕೂಡಾ ನಾವು ಕೃಷಿ ಮಾಡುತ್ತಿರಲಿಲ್ಲ. ಇಡೀ ಭೂಮಿಯನ್ನು ಒಕ್ಕಲುಗಳಿಗೆ ಗೇಣಿಗೆ ಕೊಡಲಾಗಿತ್ತು ಮತ್ತು ಅವರು ನಮಗೆ, ಬಹುತೇಕ ವಸ್ತುಗಳ ರೂಪದಲ್ಲಿ ಗೇಣಿ ಕೊಡುತ್ತಿದ್ದರು. ಅವರು (ಒಕ್ಕಲುಗಳು) ಸಾಮಾಜಿಕ ಸಮಾರಂಭಗಳ ಸಂದರ್ಭಗಳಲ್ಲಿ ಜನನಗಳು ಅಥವಾ ಮರಣಗಳು, ಮದುವೆಗಳು ಅಥವಾ ಇತರ ಸಂದರ್ಭಗಳನ್ನು ಆಚರಿಸುವಾಗ ನಮಗೆ ಉಡುಗೊರೆಗಳನ್ನು ಕೊಡಬೇಕಾಗಿದ್ದಿತು ಹಾಗೂ ಅದಕ್ಕೆ ಬದಲಾಗಿ ನಾವು ಕೂಡಾ ಏನಾದರೂ ಕೊಡಬೇಕಾಗಿತ್ತು. ಓಣಂ ಮತ್ತು ವಿಷುವಿನಂತಹ ಹಬ್ಬಗಳ ಸಂದರ್ಭಗಳಲ್ಲಿ ನಾವು ಹುಡುಗರು ಜಗಲಿಯಲ್ಲಿ ಕುಳಿತುಕೊಂಡು ಒಕ್ಕಲುಗಳಿಂದ ಉಡುಗೊರೆಗಳನ್ನು ಸ್ವೀಕರಿಸುತ್ತಿದ್ದು ಹಾಗೂ ಕೆಲವೊಮ್ಮೆ ಅವರಿಗೆ ಮರಳಿ ಏನಾದರೂ ಕೊಡುತ್ತಿದ್ದುದು ನನಗೆ ಸ್ಪಷ್ಟವಾಗಿ ನೆನಪಿದೆ. ಚುಟುಕಿನಲ್ಲಿ ಅವರೊಂದಿಗೆ ನಮಗಿದ್ದ ಸಂಬಂಧವು ಆಧುನಿಕ ಭೂಮಾಲಿಕರ ಮತ್ತು ಒಕ್ಕಲುಗಳದ್ದಾಗಿರದೆ, ಮಧ್ಯ ಯುಗದ ಅರ್ಥದಲ್ಲಿ ಒಡೆಯರ ಮತ್ತು ದಾಸರ ನಡುವಿನ ಸಂಬಂಧವಾಗಿತ್ತು

ಶಾಲಾ ಶಿಕ್ಷಣ ಮತ್ತು ಸಾರ್ವಜನಿಕ ಜೀವನ

1925ರ ಜೂನ್ ತಿಂಗಳಿನಲ್ಲಿ ನಾನು ಶಾಲೆಗೆ ಸೇರಿದೆ. ನನ್ನ ಸಹೋದರ (ಆತ ನನ್ನ ತಂದೆಯ ಎರಡನೇ ಹೆಂಡತಿಯ ಮಗ; ನಾನು ಮೊದಲನೇ ಹೆಂಡತಿಯ ಮಗ) ಕೂಡಾ ಅದೇ ತರಗತಿಗೆ ದಾಖಲಿಸಲ್ಪಟ್ಟನು. ನಮ್ಮಿಬ್ಬರಿಗೂ ಆ ತನಕ ಯಾವುದೇ ಶಾಲಾ ಶಿಕ್ಷಣ ಇರದಿದ್ದುದರಿಂದ (ನಮಗೆ ಒಬ್ಬರು ಖಾಸಗಿ ಶಿಕ್ಷಕರು ಪಾಠ ಹೇಳಿಕೊಡುತ್ತಿದ್ದರು) ಗಣಿತದಲ್ಲಿ ಒಂದುವಿಶೇಷ ಪರೀಕ್ಷೆ ನಡೆಸಿದರು. ಅವರು ನನ್ನನ್ನು ಒಂಭತ್ತನೇ ತರಗತಿಗೆ ದಾಖಲಾಗಲು ಅರ್ಹನೆಂದು ಪರಿಗಣಿಸಿದರಾದರೂ, ನಮ್ಮಿಬ್ಬರನ್ನೂ ಎಂಟನೇ ತರಗತಿಗೆ ಸೇರಿಸಿದರು. ಅಂದಿನಿಂದ ನಾಲ್ಕು ವರ್ಷಗಳ ತನಕ ನಾವಿಬ್ಬರೂ ಶಾಲೆಯಲ್ಲಿ ಒಟ್ಟಿಗೆ ಇದ್ದೆವು. 1929 ಮಾರ್ಚ್ ತಿಂಗಳಲ್ಲಿ ಜರುಗಿದ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ನಾನು ಉತ್ತೀರ್ಣನಾದೆ, ನನ್ನ ಸಹೋದರ ಅನುತ್ತೀರ್ಣನಾದ.

ಶಾಲೆಯ ವಾತಾವರಣವು ನಮ್ಮಿಬ್ಬರಿಗೂ ಇನ್ನೂ ಒಂದು ರೀತಿಯಲ್ಲಿ ಹೊಸದಾಗಿತ್ತು. ನಮ್ಮ ಜೀವನದಲ್ಲಿ ಪ್ರಥಮ ಬಾರಿಗೆ ನಾವು ನಂಬೂದಿರಿ (ಮೇಲ್ಜಾತಿ ಹಾಗೂ ಜೆನ್ನಿ) ಸ್ನೇಹಿತರಿಂದಲೂ ಸಂಬಂಧಿಕರಿಂದಲೂ ಪ್ರತ್ಯೇಕಿಸಲ್ಪಟ್ಟಿದ್ದೆವು; ನಮಗಿಂತ ಕೆಳಗಿನವರು" ಎಂಬುದಾಗಿ ನೋಡಲು ನಮಗೆ ಮನೆಯಲ್ಲಿ ತರಬೇತಿ ನೀಡಲಾಗಿದ್ದಂತಹ ವಿವಿಧ ಜಾತಿಗಳ ಹುಡುಗರ ಮಧ್ಯದಲ್ಲಿ ನಮ್ಮನ್ನು ಹಾಕಲಾಗಿತ್ತು. ನಿಜವಾಗಿ ಅವರಲ್ಲಿ ಅನೇಕರು ನಮ್ಮ ಬಗ್ಗೆ ತಾತ್ಸಾರ ಭಾವನೆ ಹೊಂದಿದ್ದರು ಹಾಗೂ ನಮ್ಮ ಕುರಿತು ವ್ಯಂಗ್ಯದ ಮಾತುಗಳನ್ನು ಆಡುತ್ತಿದ್ದರು. ಯಾಕೆಂದರೆ ಅವರ ಸಮುದಾಯವು ಅನುಭವಿಸುತ್ತಿದ್ದ ಸಾಮಾಜಿಕ ಸಾಂಸ್ಕೃತಿಕ ಹಿಂದುಳಿದಿರುವಿಕೆಯು ಅದನ್ನು ತೀವ್ರ ಅಪಹಾಸ್ಯಕ್ಕೆ ಗುರಿಪಡಿಸಿತ್ತು. ಆದರೆ ಅದೊಂದು ತಾತ್ಕಾಲಿಕ ಸನ್ನಿವೇಶವಾಗಿತ್ತು. ನಾವು ನಮ್ಮ ಸಹಪಾಠಿಗಳ ಜತೆಗೆ ಸ್ಥಾಪಿಸಿದ ಮುಕ್ತ ಮತ್ತು ಸೌಹಾರ್ದ ಸಂಪರ್ಕಗಳು ನಮ್ಮ ಮತ್ತು ಇತರ ಹುಡುಗರ ನಡುವಿನ ಹಿಂದಿನ ಎಲ್ಲಾ ತಡೆಗೋಡೆಗಳನ್ನೂ ಒಡೆದವು. ವಿದ್ಯಾಭ್ಯಾಸದಲ್ಲಿ ನನ್ನ ಪ್ರೌಢಿಮೆಯ ದಾಖಲೆಯು ಇದಕ್ಕೆ ಪೂರಕವಾಯಿತು. ನನ್ನ ಪ್ರಥಮ ಶಾಲೆಯಲ್ಲಿ ತಾಲ್ಲೂಕು ಕೇಂದ್ರದ ಜಿಲ್ಲಾ ಬೋರ್ಡ್ ಶಾಲೆ-ನಾನು ಕಳೆದ ಮೂರು ವರ್ಷಗಳು ನನಗೆ ಜಾತಿ, ಕೋಮು ಮತ್ತು ಇತರ ತಡೆಗಳನ್ನು ದಾಟಿ, ಸಹಕಾರಿ ಸಾಮಾಜಿಕ ಪ್ರಯತ್ನಗಳನ್ನು ನಡೆಸುವುದರಲ್ಲಿ ಪ್ರಥಮ ಪಾಠವನ್ನು ಒದಗಿಸಿತು.

ನಮ್ಮ ಶಾಲೆಯ ವಿದ್ಯಾರ್ಥಿಗಳ ಮತ್ತು ಅಧ್ಯಾಪಕರ ಸಂಯೋಜನೆಯ ಆಧಾರದಲ್ಲಿ ಅಂದಿನ ದಿನಗಳ ಶಿಕ್ಷಣದ ಮತ್ತು ಸಮಾಜದ ಪರಿಸ್ಥಿತಿಯ ಕುರಿತು ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಅದೊಂದು ಮಿಶ್ರಶಾಲೆಯಾಗಿದ್ದು ಪ್ರತಿಯೊಂದು ತರಗತಿಯಲ್ಲೂ ಹುಡುಗರನ್ನೂ ಹುಡುಗಿಯರನ್ನೂ ಸೇರಿಸಲು ಅವಕಾಶವಿದ್ದರೂ, ನಮ್ಮ ತರಗತಿಯಲ್ಲಾಗಲೀ ಅಥವಾ ಮೇಲಟ್ಟದ ಮೂರು ತರಗತಿಗಳಲ್ಲಿ ಯಾವುದರಲ್ಲೇ ಆಗಲೀ, ಒಂದೇ ಒಂದು ಹುಡುಗಿಯೂ ಇರಲಿಲ್ಲ. ಆ ಶಾಲೆಯ ಮೇಲಟ್ಟದ 6 ತರಗತಿಗಳ ಪೈಕಿ ನಮಗಿಂತ ಕೆಳಗಿನ ಎರಡು ತರಗತಿಗಳಲ್ಲಿ ಎರಡೋ ಮೂರೋ ಹುಡುಗಿಯರಿದ್ದರು. ವಿದ್ಯಾರ್ಥಿ ಜನಸಂಖ್ಯೆಯಲ್ಲಿ ಮಹಿಳೆಯರಿಗಿದ್ದ ಪಾಲು ಅಷ್ಟೇ ಆಗಿತ್ತು. ಇಷ್ಟಾದರೂ ಇದ್ದದ್ದು ಹಿಂದೂ ಹುಡುಗಿಯರು ಮಾತ್ರ ಎಂಬುದನ್ನು ಗಮನಿಸಬೇಕು. ಮುಸ್ಲಿಮರೇ ಬಹು ಸಂಖ್ಯಾತರಾಗಿದ್ದ ಆ ಪ್ರದೇಶದಲ್ಲಿ ವಿದ್ಯಾರ್ಥಿಗಳ ಪೈಕಿ ಮುಸ್ಲಿಂ ಹುಡುಗರ ಸಂಖ್ಯೆ ತೀರಾ ಅಲ್ಪವಾಗಿತ್ತು. (29 ಅಥವಾ 30 ಹುಡುಗರಿದ್ದ ನಮ್ಮ ತರಗತಿಯಲ್ಲಿ ಬರೇ ಮೂವರು ಮುಸ್ಲಿಮರಿದ್ದರು.) ದಲಿತ ವರ್ಗದ (ಅವರನ್ನು ಆತನಕ " ಹರಿಜನರು" ಅಥವಾ "ಪರಿಶಿಷ್ಟ ಜಾತಿಗಳು" ಎಂಬ ಸ್ಥಾನಕ್ಕೆ " ಭಡ್ತಿ" ಗೊಳಿಸಿರಲಿಲ್ಲ.) ಹುಡುಗರೂ ತೀರಾ ಅಪರೂಪ. (ನಮ್ಮ ತರಗತಿಯಲ್ಲಿ ಒಬ್ಬನೂ ಇರಲಿಲ್ಲ) ತಮಿಳು ಬ್ರಾಹ್ಮಣರು (ಅಯ್ಯರ್), ನಾಯರ್ ಮತ್ತು ತೀಯಾ ಹುಡುಗರು ಬಹು ಸಂಖ್ಯಾತರಾಗಿದ್ದರು. ನಾಲ್ಕು ಮಂದಿ ನಂಬೂದಿರಿ ಹುಡುಗರು (ನಾವು ಇಬ್ಬರು ಸೇರಿ) ನಮ್ಮ ಸಮುದಾಯದಿಂದ ಇತರ ಎಲ್ಲಾ ಜಾತಿಗಳ ಹುಡುಗರೊಂದಿಗೆ ಆಧುನಿಕ ಶಾಲಾ ಶಿಕ್ಷಣ ಪಡೆಯಲು ಬಂದ ಪ್ರಥಮ ಪೀಳಿಗೆಯಾಗಿದ್ದರು. ಅಧ್ಯಾಪಕರ ಮಧ್ಯದಲ್ಲೂ ಪರಿಸ್ಥಿತಿ ಹೀಗೆಯೇ ಇತ್ತು. ○

ಬೆಲೆ ಏರಿಕೆ ವಿರುದ್ಧ ಜನರ ನಡುವೆ ಪ್ರಚಾರಾಂದೋಲನ

ಜನಸಾಮಾನ್ಯರು ಬಳಸುವ ಅಗತ್ಯ ವಸ್ತುಗಳು, ರೈತರ ಕೃಷಿಗೆ ಅಗತ್ಯವಾದ ಗೊಬ್ಬರ, ಬೀಜಗಳು ಮುಂತಾದವುಗಳ ಬೆಲೆಗಳು ಹೆಚ್ಚುತ್ತಲೇ ಇವೆ. ಬಜೆಟ್‌ಗೆ ಮೊದಲು ಬೆಲೆ ಹೆಚ್ಚಳ, ಬಜೆಟ್‌ನಲ್ಲಿಯ ಬೆಲೆ ಹೆಚ್ಚಳದ ಹೊರೆ, ಬಜೆಟ್ ನಂತರವೂ ಬೆಲೆ ಹೆಚ್ಚಳ...... ಇದು ಕೇಂದ್ರದ ವಾಜಪೇಯಿ ಸರ್ಕಾರ ಹಾಗೂ ರಾಜ್ಯದ ಎಸ್.ಎಂ.ಕೃಷ್ಣರ ಸರ್ಕಾರಗಳು ಕೊಡುತ್ತಿರುವ ಕೊಡುಗೆಗಳು.

ಕಠಿಣ ನಿರ್ಧಾರಗಳನ್ನು ಭರಿಸಲು ತಯಾರಿನಡೆಸಬೇಕೆಂದೇ ಹೇಳುತ್ತಾ ಕೆಂಡದ ಉಂಡೆಗಳನ್ನು ಜನಸಾಮಾನ್ಯರ ಒಡಲಿಗೆ ಹಾಕುತ್ತಿದ್ದಾರೆ. ರೇಷನ್ ಅಂಗಡಿಗಳಲ್ಲಿ ಪಡಿತರ ವಸ್ತುಗಳಾದ ಗೋಧಿ, ಅಕ್ಕಿ, ಸೀಮೆಎಣ್ಣೆ ಮುಂತಾದ ಸಾಮಾನುಗಳ ಬೆಲೆ, ಹೊರಗಿನ ಮಾರುಕಟ್ಟೆ ದರಗಳ ಹತ್ತಿರ ತುಲುಪಿದೆ. ಅಡಿಗೆ ಗ್ಯಾಸ್ ಬೆಲೆಯಂತೂ ಸಿಲಿಂಡರಿಗೆ 51 ರೂ. ಹೆಚ್ಚಳ ಆಗಿದೆ. ಬಡತನ ರೇಖೆಯ ಕೆಳಗಿರುವವರಿಗೆ ಗೋಧಿ ರೂ. 2.50 ರಿಂದ 4.50, ಅಕ್ಕಿ 3.50 ರೂ. ದಿಂದ 5.90 ಕ್ಕೆ ಹೆಚ್ಚಿಸಲಾಗಿದೆ. ಸರ್ಕಾರವೇ ಗುರುತಿಸಿರುವ ಸುಮಾರು 38 ಕೋಟಿ ಜನ ಬಡತನ ರೇಖೆ ಕೆಳಗೆ ಇರುವವರು ಅರ್ಥಾತ್ ದಿನಕ್ಕೆ ರೂ. 3.00 ಸಹ ಆದಾಯವಿಲ್ಲದವರು. ಇನ್ನೊಂದೆಡೆ ಕೆಳಮಧ್ಯಮವರ್ಗಕ್ಕೆ 12 ರೂ.ಗಳೆಂದೂ ಸಕ್ಕರೆ ಬೆಲೆ 1 ರೂ. ಹೆಚ್ಚಿಸಲಾಗಿದೆ. ಈ ಗುಣಮಟ್ಟದ ಧಾನ್ಯಗಳು ಬಹುತೇಕವಾಗಿ ಅಂಗಡಿ-ಮಾರುಕಟ್ಟೆಯಲ್ಲಿ ಇರುವ ಬೆಲೆಗಳಷ್ಟೇ ಇವೆ. ಅಂತೂ ಸರ್ಕಾರ ಪೂರ್ಣವಾಗಿ ಪಡಿತರ ಆಹಾರ ವಸ್ತುಗಳಿಗೆ ನೀಡುತ್ತಿರುವ ಸಬ್ಸಿಡಿಯನ್ನು ಕಡಿತಗೊಳಿಸುತ್ತಾ, ಒಂದು ದಿನ ಪೂರ್ತಿಯಾಗಿ ಈ ಪದ್ಧತಿಯನ್ನು ರದ್ದುಪಡಿಸಲಿದೆ. ಅಂತಿಮವಾಗಿ ಜನ ಸರಿಯಾದ ಆಹಾರವಿಲ್ಲದೇ ಎಲುಬಿನ ಗೂಡಾಗಿ ರೋಗಗಳಿಂದ ನರಳುವುದು, ಇಲ್ಲವೇ ಹಸಿವಿನಿಂದ ಸಾಯುವುದು.... ಇಂತಹ ಧಾರುಣ ಸ್ಥಿತಿಯ ಬಗ್ಗೆ ಪಾರ್ಲಿಮೆಂಟ್‌ನಲ್ಲಿ ಪ್ರತಿಭಟಿಸಬೇಕು. ಜೊತೆಗೆ ರಾಜ್ಯ ಸರ್ಕಾರ ಕೇಂದ್ರಕ್ಕೆ ಪತ್ರ ಬರೆದು, ಕೈಚೆಲ್ಲಿ ಕೂಡುವುದಲ್ಲ. ಬದಲಾಗಿ, ಕೇಂದ್ರದ ಧೋರಣೆ ನಿರ್ಧಾರಗಳ ವಿರುದ್ಧ ಸೆಣಸಾಟಕ್ಕೆ ಇಳಿಯಬೇಕಿತ್ತು.

ರಾಜ್ಯ ಸರ್ಕಾರವೂ ಇನ್ನೂ ಕೆಲವು ಕ್ರಮಕೈಗೊಂಡು ಕೇಂದ್ರದ ಮಾತು ಪಾಲಿಸುತ್ತಿದೆ. ವಿಶ್ವಬ್ಯಾಂಕ್-ವಿಶ್ವವ್ಯಾಪಾರ ಸಂಸ್ಥೆಗಳ ಅಡಿಯಾಳು ಎಂಬುದನ್ನು ವಾಜಪೇಯಿ ಸರಕಾರ ತೋರಿದೆ.



ಈ ಜನರ ಮೇಲೆ ವಿಪರೀತ ಸಂಕಷ್ಟ ಹೇರುವ ಆರ್ಥಿಕ ನೀತಿಗಳು, ಬೆಲೆ ಏರಿಕೆ ವಿರುದ್ಧ ರಾಜ್ಯದಾದ್ಯಂತ ವ್ಯಾಪಕ ಜನಾಂದೋಲನವನ್ನು ಸಂಘಟಿಸಲು ಇತ್ತೀಚೆಗೆ ಮಾರ್ಚ್ 30 ರಂದು ಬೆಂಗಳೂರಿನಲ್ಲಿ ಸಿಪಿಐ(ಎಂ) ರಾಜ್ಯ ಸಮಿತಿಯು ನಿರ್ಧರಿಸಿದೆ.

ಏಪ್ರಿಲ್ 24 ರಿಂದ 29 ರವರೆಗೆ ಪ್ರಚಾರ ಸಪ್ತಾಹವನ್ನು ಹಮ್ಮಿಕೊಂಡಿದೆ. ಈ ಅವಧಿಯಲ್ಲಿ ಕಾರ್ಯಕರ್ತರು ಮನೆ ಮನೆಗೆ ತೆರಳಿ ಕರಪತ್ರ ಹಂಚಿಕೆ, ಪಾದಯಾತ್ರೆ, ಮೆರವಣಿಗೆ ನೂರಾರು ಬಹಿರಂಗ ಸಭೆಗಳನ್ನು ನಡೆಸಿ ಜನತೆಯನ್ನು ಬಾಧಿಸುತ್ತಿರುವ ಬೆಲೆ ಏರಿಕೆ ಹಾಗೂ ಬಿಜೆಪಿ ನೇತೃತ್ವದ ಎನ್.ಡಿ.ಎ ಸರ್ಕಾರದ ದೇಶ ಮಾರುವ ಹಾಗೂ ಕೋಮುವಾದಿ ನೀತಿಗಳು ಆರ್ಥಿಕ ನೀತಿಗಳನ್ನು ವಿವರಿಸಲಿದ್ದಾರೆ.

ಜನರ ಬದುಕನ್ನು ಹಾಗೂ ದೇಶವನ್ನು ಉಳಿಸುವ ಈ ಕರೆಗೆ ಎಲ್ಲರೂ ಸ್ಪಂದಿಸಬೇಕಿದೆ, ಯಶಸ್ವಿಗೊಳಿಸಬೇಕಿದೆ. ○

ರಾಜ್ಯಸಭಾ ಚುನಾವಣೆಗಳು: ಮಾರಾಟದ ವಸ್ತುಗಳಾಗಿರುವ ಶಾಸಕರು

"ಶಾಸಕರ ಬೆನ್ನು ಹತ್ತಿದ ಕಾವಲು ಪಡೆ, ಕಳೆದುಹೋದ ರಾತ್ರಿಗಳ ಸ್ಮರಣೆ, ಅಭ್ಯರ್ಥಿಯಿಂದ ಬಾದಾಮಿ-ದ್ರಾಕ್ಷಿ ಹಂಚಿಕೆ, ಒಂದು ಕಡೆ ದುಗುಡ, ಆಂತಂಕ: ಮತ್ತೊಂದು ಕಡೆ ಕಾತರ, ಕುತೂಹಲ..........." ರಾಜ್ಯಸಭೆ ಚುನಾವಣಾ ಸಂದರ್ಭದಲ್ಲಿ ಬುಧವಾರ(29.3.00) ವಿಧಾನಸೌಧದಲ್ಲಿ ಕಂಡುಬಂದ ಚಿತ್ರಣದ ವರದಿ. ಇಲ್ಲಿನ ಮತದಾರರು ಸಾಮಾನ್ಯರೇನೂ ಅಲ್ಲ. ಕೋಟಿ ಕೋಟಿ ಜನರಿಂದ ಆಯ್ಕೆಯಾಗಿ, ಶಾಸನ ರಚಿಸುವ, ರಾಜ್ಯದ ಭವಿಷ್ಯ ಬದಲಿಸುವ ವಿಧಾನಸಭೆಯ ಸದಸ್ಯರು.

ಈ ಸಲ ಕರ್ನಾಟಕದಿಂದ ತೆರವಾದ ರಾಜ್ಯಸಭೆಗೆ ನಾಲ್ಕು ಸದಸ್ಯರು ಆಯ್ಕೆಯಾಗಬೇಕಿತ್ತು. ಸ್ಪರ್ಧಿಸಿದವರು ಒಟ್ಟು ಐದು ಜನ. ಹೀಗಾಗಿ ಸ್ಪರ್ಧೆ ಬರೀ ಸ್ಪರ್ದೆಯಾಗದೇ ಜಾತಿ ಮತ್ತು ಹಣದ ದೊಡ್ಡ ಜೂಜಾಟವಾಗಿ ಮಾರ್ಪಟ್ಟಿದೆ. ಅತ್ಯಂತ ಕುತೂಹಲ, ಹಾಗೂ ಕಾವೇರಿಸಿಕೊಂಡಿದ್ದ ಈ ಚುನಾವಣಾ ಫಲಿತಾಂಶ ಪ್ರಕಟವಾಗಿದೆ. ಕಾಂಗ್ರೆಸ್‌ನ ಮೂರು ಜನ(ಬಿಂಬಾರಾಯ್ಕರ್, ಕೃಷ್ಣಮೂರ್ತಿ, ರಹಮಾನ್ ಖಾನ್) ಬಿಜೆಪಿಯ ರಾಜಶೇಖರ್ ಮೂರ್ತಿ ಆಯ್ಕೆಯಾಗಿದ್ದಾರೆ. ಎಲ್ಲರಲ್ಲಿ ಆತಂಕ ತಲ್ಲಣವನ್ನುಂಟು ಮಾಡಿದ ಜೆ.ಡಿ.ಯು. ನ ಬೆಂಬಲದಿಂದ ಸ್ಪರ್ಧಿಸಿದ್ದ ವಿಜಯಮಲ್ಯ ಸೋತಿದ್ದಾರೆ.

ರಾಜ್ಯಸಭೆಗೆ ವಿವಿಧ ಕ್ಷೇತ್ರಗಳ ಗಣ್ಯರು, ಅನುಭವಿಗಳು, ಮುತ್ಸದ್ದಿಗಳನ್ನು ಆರಿಸಿ ಕಳುಹಿಸಬೇಕೆಂಬ ಆಶಯವಿದೆ. ಅದರಲ್ಲಿಯೂ ಭಾರತದ ವೈವಿಧ್ಯಮಯ ಸನ್ನಿವೇಶದ ಹಿನ್ನೆಲೆಯಲ್ಲಿ ಆಯಾ ರಾಜ್ಯಗಳನ್ನು ಪ್ರತಿನಿಧಿಸಬೇಕು ಎಂದಿದೆ. ಈಗಿನ ಚುನಾವಣೆಗಳು ಮತ್ತು ಸ್ಪರ್ಧಿಗಳು ಬಹುತೇಕವಾಗಿ ಈ ಆಶಯಗಳನ್ನು ಉಲ್ಲಂಘಿಸುತ್ತಲೇ ಬಂದಿರುವ ಉದಾಹರಣೆ ಎಡಪಕ್ಷಗಳನ್ನು ಹೊರತುಪಡಿಸಿದರೆ ಉಳಿದ ಬಹುತೇಕ ಎಲ್ಲಾ ಪಕ್ಷಗಳನ್ನು ಹಲವು 'ಲಾಬಿ'ಗಳಿಗೆ ಇಲ್ಲವೇ ರಾಜಕೀಯ ನಿರಾಶ್ರಿತರಿಗೆ ಅಥವಾ ಅತೃಪ್ತರಿಗೆ ಆಶ್ರಯವನ್ನಾಗಿಸಿಬಿಟ್ಟಿದೆ. ಹೀಗಾಗಿ ಸಂವಿಧಾನದ ಆಶಯವನ್ನು ನೇಣುಗೇರಿಸುತ್ತಿರುವ ಕೃತ್ಯಕ್ಕೆ ದಶಕಗಳೇ ಸಂದಿವೆ. ಸದಾ ಮೌಲ್ಯಗಳ ಬಗ್ಗೆ ಮಾತನಾಡುವ ಬಿಜೆಪಿ ಕಳೆದ ಬಾರಿ ಆಂಧ್ರಪ್ರದೇಶದ ವೆಂಕಯ್ಯ ನಾಯ್ಡು ಎಂಬ ಬಾಯ್ಬಡುಕ ವಕ್ತಾರನನ್ನು ಕರ್ನಾಟಕದಿಂದ ಆರಿಸಿ ಕಳುಹಿಸಿತು.


'ಇದು ಅಂತ್ಯವಲ್ಲ ಆರಂಭ' ಎನ್ನುತ್ತಿರುವ ವಿಜಯ್ ಮಲ್ಯ

ಈ ಫಲಿತಾಂಶಗಳನ್ನು ಜಾತಿ ಮತ್ತು ರೊಕ್ಕದ ಚೀಲದ ನಡುವಿನ ಹೋರಾಟ ಎಂದು ವ್ಯಾಖ್ಯಾನಿಸಲಾಗುತ್ತಿದೆ. ಬಿಜೆಪಿಯಿಂದ ಗೆದ್ದಿರುವ ರಾಜಶೇಖರ ಮೂರ್ತಿ ಜಾತಿ ರಾಜಕಾರಣದ ಪ್ರತೀಕವೆಂದೂ, ಹೆಂಡದ ದೊರೆ, ಉದ್ಯಮಿ ವಿಜಯ ಮಲ್ಯ ಹಣದ ಪ್ರತಿನಿಧಿಯೆಂದು ಸಾಂಕೇತಿಕರಿಸಲಾಗುತ್ತಿದೆ. ಇದು ಒಂದರ್ಥದಲ್ಲಿ ಕಟು ಸತ್ಯ. ಆದರೆ ಉಳಿದವರು ಜಾತಿ ಹಾಗೂ ಹಣದ ರಾಜಕಾರಣ ಮಾಡಿಲ್ಲವೆಂದು ಅರ್ಥವಲ್ಲ. ಶಾಸಕರ 'ಮತಾಂತರ' ಮಾಡಿಸಲು ಅಥವಾ ತಮ್ಮ ಪಕ್ಷದಲ್ಲೇ ಉಳಿಸಿಕೊಳ್ಳಲು ನಡೆಸಿದ ಕಸರತ್ತಿಗೆ ಲೆಕ್ಕವಿಲ್ಲ. ಈ ಚುನಾವಣೆಯಲ್ಲಿ ಜಾತಿ ಮತ್ತು ಹಣ ಎರಡೂ ಪ್ರಧಾನ ಪಾತ್ರವಹಿಸಿದೆ.

ಈ ಚುನಾವಣೆಯಲ್ಲಿ ರಾಜ್ಯಸಭೆಗೆ ಕನಿಷ್ಠ 45 ಶಾಸಕರ ಮತ ಪಡೆದವರು ಆಯ್ಕೆಯಾಗುವ ಅವಕಾಶವಿತ್ತು. ಅಂದರೆ ಕಾಂಗ್ರೆಸ್ ತನ್ನ ಮೂರು ಅಭ್ಯರ್ಥಿಗಳನ್ನು ಗೆಲ್ಲಿಸಿಕೊಳ್ಳುವುದಲ್ಲದೇ ಇನ್ನೂ 12 ಅಧಿಕ ಮತಗಳು ಉಳಿಯುತ್ತಿತ್ತು. ಬಿಜೆಪಿ ಯ 43 ಶಾಸಕರಿದ್ದು, ತನ್ನ ಅಭ್ಯರ್ಥಿ ಗೆಲ್ಲಲು ಇನ್ನೂ ಕನಿಷ್ಠವೆಂದರೆ 2-3 ಶಾಸಕರ ಅಗತ್ಯವಿತ್ತು. ಬಿಜೆಪಿಯ ಮಿತ್ರನಾಗಿದ್ದ ಸಂಯುಕ್ತ ಜನತಾದಳ ಬಹಿರಂಗವಾಗಿ ವಿಜಯಮಲ್ಯರನ್ನು ಬೆಂಬಲಿಸಿತು. ಮಂತ್ರಿಯಾಗದೇ ಅವಮಾನ ಅನುಭವಿಸುತ್ತಿದ್ದ ಹೆಗಡೆ ಬಿಜೆಪಿಗೆ ಒಂದು ಕೈ ತೋರಿಸಲು ಈಗಲೇ ನಿರ್ಧರಿಸಿದ್ದರು. ಕಾಲಕ್ರಮೇಣ ಉದ್ಯಮಿ ವಿಜಯ ಮಲ್ಯರವರ [illegible] ಜನತಾದಳ(ಯು) ವಿನಲ್ಲದೇ, ಕಾಂಗ್ರೆಸ್, ಬಿಜೆಪಿ ಮತ್ತು ಪಕ್ಷೇತರ ಶಾಸಕರೂ ಸಹ ಖರೀದಿಯಾಗುವ ಸ್ಪಷ್ಟ ಸೂಚನೆಗಳು ಗೋಚರಿಸಿದವು.


ಗೆದ್ದು........,ಬಿಟ್ಟವರು......

ಆರಂಭದಲ್ಲಿ ತನ್ನ ಅಭ್ಯರ್ಥಿಗಳು ಗೆಲ್ಲುವರೆಂಬ ವಿಶ್ವಾಸವಿದ್ದ ಎಸ್.ಎಂ.ಕೃಷ್ಣರವರು ತನ್ನ **ಶಾಸಕರುಗಳೇ ಖರೀದಿಗೊಳಗಾಗುತ್ತಿದ್ದರಿಂದ ಆತಂಕಗೊಂಡು ತರಾತುರಿಯಲ್ಲಿ ಜಾತ್ಯಾತೀತ ಜನತಾದಳದ ಆರು ಶಾಸಕರನ್ನು, ಎಲ್ಲೂ ಸಲ್ಲದೇ ಆಳುವ ಪಕ್ಷದ ಬಾಗಿಲಿಗೆ ಎಡತಾಕುತ್ತಿದ್ದ ಸುಮಾರು 12 ಪಕ್ಷೇತರ ಶಾಸಕರನ್ನು ಕಾಂಗ್ರೆಸ್‌ಗೆ ಸೇರಿಸಿಕೊಳ್ಳಲಾಯಿತು. ಗುತ್ತೇದಾರರಂತಹ ಕುಖ್ಯಾತಿ ಸುಪಾರಿ ಕೊಲೆಪಾತಕ, ಕ್ರಿಮಿನಲ್‌ಗಳು ಆ ಪಕ್ಷದಲ್ಲಿ ಸ್ಥಳ ಗಿಟ್ಟಿಸಿದರು.** ಏನೇ ಆಗಲಿ ಕಾಂಗ್ರೆಸ್ ಟಿಕೇಟ್ ನೀಡುವುದು ಅಸಾಧ್ಯವೆಂದು ತಿರಸ್ಕರಿಸಿದ್ದಲ್ಲದೇ, ನಾಮಪತ್ರ ಸಲ್ಲಿಕೆ ಕಾಲಕ್ಕೆ ಘರ್ಷಣೆಯೂ ಏರ್ಪಟ್ಟು ಹೊರದೂಡಲ್ಪಟ್ಟಿದ್ದ ಬಾಗೇಪಲ್ಲಿ ಶಾಸಕ ಸಂಪಂಗಿಯಂತಹವರಿಗೆ ಮಣೆ ಹಾಕಲಾಯಿತು. ಇವರೆಲ್ಲರ ಸೇರ್ಪಡೆಗೆ ಪಕ್ಷದೊಳಗೆ ತೀವ್ರ ಭಿನ್ನಾಭಿಪ್ರಾಯವಿದ್ದಾಗ್ಯೂ ಅದನ್ನು ಲೆಕ್ಕಿಸದೆ ಕೃಷ್ಣ ಸಂದರ್ಭ-ಸಾಧಕತನ ಮೆರೆದರು. ಅತ್ತ ಬಿಜೆಪಿಯೂ ಸಹ ಓಟಿನ ಬೇಟೆಗಾಗಿ ತೊಡಗಿ ಕೊನೆಗೆ ಪಕ್ಷೇತರರಾಗಿದ್ದ ಆರು ಶಾಸಕರನ್ನು ತನ್ನ ಬೆಂಬಲಕ್ಕೆ ಸೆಳೆಯಿತು.

ಒಂದು ಕಡೆ ಈ ಪಕ್ಷಗಳು ಒಬ್ಬೊಬ್ಬರನ್ನೂ, 'ಖರೀದಿಸ್ಸಿ' 'ಮತಾಂತರ'ಗೊಳಿಸಲು ಎಗ್ಗಿಲ್ಲದೇ ಹಣ ಸುರಿದಿದ್ದರೆ, ತಮ್ಮ ಪಕ್ಷದ ಶಾಸಕರನ್ನೇ ಹಿಡಿದಿಟ್ಟುಕೊಳ್ಳಲು ಹೆಣಗಿದ್ದಾರೆ. ಸ್ವತಃ ರಾಜಶೇಖರಮೂರ್ತಿಯವರ ಅಭ್ಯರ್ಥಿತನದ ಬಗ್ಗೆಯೇ ಬಿಜೆಪಿಯಲ್ಲಿ ತೀವ್ರ ಭಿನ್ನಾಭಿಪ್ರಾಯ ಉಂಟಾಗಿ, ತಮ್ಮ ಶಾಸಕರೇ ಕೈಕೊಡಬಹುದು ಎಂಬ ಆತಂಕ ಹುಟ್ಟಿದೆ. ಲಿಂಗಾಯತರು ಒಪ್ಪುತ್ತಾರೋ-ಇಲ್ಲವೋ ತಾವು ಮಾತ್ರ ಲಿಂಗಾಯತರ ಪ್ರತಿನಿಧಿಯೆಂದೂ ಮುಖ್ಯಮಂತ್ರಿಯನ್ನಾಗಿ ತಮ್ಮನ್ನೇ ಮಾಡಬೇಕೆಂದು ವಾದ ಹೂಡಿ, ಕೊನೆಗೆ ಕಾಂಗ್ರೆಸ್‌ನಿಂದ ಬಿಜೆಪಿ ಡೇರೆ ಸೇರಿದ್ದ ಮೂರ್ತಿಯವರಿಗೆ ಬಿಜೆಪಿ ಕೂಟ ಅನುಭವಿಸಿದ ಸೋಲಿನಿಂದ, ಇದ್ದ ಕನಸು ಹಾರಿಹೋಗಿತ್ತು. ಇವರನ್ನೇ ಮುಂದಿಟ್ಟು ಲಿಂಗಾಯತ ಓಟು ಪಡೆಯಲು ಬಿಜೆಪಿ ಅಹೋರತ ಯತ್ನಿಸಿದ್ದು ಎಲ್ಲರಿಗೂ ನೆನಪಿದೆ. ಇಂತಹ 'ಅಮೋಘ ಬಳಕೆ'ಗೆ ಕಿಂಚಿತ್ತಾದರೂ ಕಾಣಿಕೆ ನೀಡಲೆಂದೇ ರಾಜಶೇಖರ ಮೂರ್ತಿಯವರನ್ನು ದೆಹಲಿಯತ್ತ ಹಾರಿಸಲು ಅಭ್ಯರ್ಥಿ ಮಾಡಲಾಗಿತ್ತು.

ರಾಜಶೇಖರಮೂರ್ತಿಯವರು ಗೆಲುವಿಗೆ ಬಳಸಿಕೊಂಡಿದ್ದು ಜಾತಿಯನ್ನೇ. ದೊರೆತಿರುವ ಮಾಹಿತಿಯಂತೆ ಬೇರೆ ಪಕ್ಷಗಳಲ್ಲಿರುವ ಲಿಂಗಾಯತ ಶಾಸಕರೂ ಸಹ ಹಲವಾರು ಸಭೆ ಸೇರಿ ಅವರ ಗೆಲುವಿಗೆ ಮನಸ್ಸು ಮಾಡಿದ್ದರಂತೆ. ಅಂತೂ ರಾಜಶೇಖರ ಮೂರ್ತಿ ಗೆಲುವನ್ನು ಸರಳವಾಗಿ ಊಹಿಸಿರಲಿಲ್ಲ. ಅಂತೂ ಲೆಕ್ಕಾಚಾರಗಳು ಕೆಟ್ಟುಹೋದ ಆಚಾರಗಳಿಂದ ಮೂರ್ತಿ ಆಯ್ಕೆಯಾದರು. ಪಕ್ಷೇತರನಾಗಿ 35 ಶಾಸಕರ ಮತಗಳನ್ನು ಗಳಿಸಿದ ವಿಜಯಮಲ್ಯರ ಹಣದ ತಾಕತ್ತು ಅಷ್ಟು ಸುಲಭವಾಗಿ ನಿರ್ಲಕ್ಷಿಸುವಂತಿಲ್ಲ. **ಇಂದಿನ ಸ್ಥಿತಿ ಒಂದುಕಡೆ ಹಣದ ಹೊಳೆ, ಇನ್ನೊಂದುಕಡೆ ಜಾತಿಯ ಕೊಳೆ ಹೆಪ್ಪುಗಟ್ಟುತ್ತಿದೆ.** ಒಂದು ಪಕ್ಷವನ್ನು ಅದರ ಧೋರಣೆಗಳನ್ನು ಪ್ರತಿನಿಧಿಸಿ ಆಯ್ಕೆಯಾಗಿರುವ ಶಾಸಕರ ಇಂತಹ ವರ್ತನೆಗಳು ಜನತೆಯ ವಿಶ್ವಾಸಕ್ಕೆ ಬಗೆವ ದ್ರೋಹ. ಹೀಗೆ **ಜಾತಿ ಮತ್ತು ಹಣ ಬಲದಿಂದ ಆರಿಸಿಹೋದ ಈ 'ಮುತ್ಸದ್ದಿ'ಗಳು ಕಂಬಾಲಪಲ್ಲಿಯಂತಹ ಬರ್ಬರ ಘಟನೆಗಳನ್ನು ಮಾನವೀಯವಾಗಿ ನೋಡುವುದಾಗಿ ಹೇಗೆ? ದುರ್ಬಲರನ್ನು ರಕ್ಷಿಸುವುದಾದರೂ ಹೇಗೆ? ಎಂಬ ಪ್ರಶ್ನೆ ಏಳುತ್ತದೆ.** ತಮ್ಮ ವ್ಯವಹಾರ - ಅವ್ಯವಹಾರಗಳನ್ನು ರಕ್ಷಿಸಿಕೊಳ್ಳಲು ರಾಜಕೀಯ ಅಧಿಕಾರ ಬಯಸುವ ಸಂದರ್ಭಸಾಧಕ ರಾಜಕಾರಣವೇ ಈಗ ಮೇಲುಗೈ ಪಡೆಯುತ್ತಿದೆ. ಇಂತಹವುಗಳಲ್ಲಿ ಮುಳುಗೆದ್ದೂ, ತಮ್ಮ ಪಾವಿತ್ರ್ಯತೆ ಉಳಿಸಿಕೊಂಡ ಬಗ್ಗೆ ಬಿಜೆಪಿಯ ನಾಮಕಾವಸ್ಥೆ ವಿರೋಧ ಪಕ್ಷದ ನಾಯಕ ಜಗದೀಶ್ ಶೆಟ್ಟರ್ ಹೇಳಿಕೆ ಹಾಸ್ಯಾಸ್ಪದವಾಗಿದೆ.

ಈ ವಿದ್ಯಮಾನಗಳು ಕೇವಲ ಕರ್ನಾಟಕಕ್ಕೆ ಮಾತ್ರವಲ್ಲ ಈ ದಿನದಂದೇ ನಡೆದ ಪ.ಬಂಗಾಳ, ಒರಿಸ್ಸಾ, ಹಿಮಾಚಲ ಪ್ರದೇಶ, ಉತ್ತರ ಪ್ರದೇಶಗಳಲ್ಲಿ ವ್ಯಾಪಕ ಹಣದ ಬಳಕೆ ನಡೆದಿರುವುದು ವರದಿಯಾಗಿವೆ. ಪಕ್ಷ ಬಿಟ್ಟು ಪಕ್ಷಕ್ಕೆ ಹಾರಿದವರಿದ್ದಾರೆ. ಉತ್ತರ ಪ್ರದೇಶದಲ್ಲಿನ ವಿದ್ಯಮಾನಗಳಿಂದ ಪ್ರಧಾನಿ ಚಿಂತಿತರಾಗಿದ್ದಾರೆಂದು ವಾರ್ತಾಸಂಸ್ಥೆ ಉಸುರಿದೆ. ಪ.ಬಂಗಾಳದಲ್ಲಿ ಎಡರಂಗದ ಅಭ್ಯರ್ಥಿಗಳಿಗೆ ಸಿಗಬೇಕಾದ ಮತಗಳು ಸರಿಯಾಗಿಯೇ ದೊರೆತಿವೆ. ಅಭ್ಯರ್ಥಿಗಳೂ ಗೆದ್ದಿದ್ದಾರೆ. ಆದರೆ 69 ಶಾಸಕರನ್ನು ಹೊಂದಿರುವ ಪ್ರದೇಶ ಕಾಂಗ್ರೆಸ್ ಅಭ್ಯರ್ಥಿ ಡಿ.ಪಿ.ರಾಯ್ ಸೋಲನ್ನು ಅನುಭವಿಸಿದ್ದಾರೆ. ಸ್ವತಃ ಸೋನಿಯಾಗಾಂಧಿಯವರೇ ನಿಂತು, ಹೈಕಮಾಂಡ್ ಮೂಲಕ ಆಜ್ಞೆ ನೀಡಿದ್ದರೂ ಪಕ್ಷದ ಅಭ್ಯರ್ಥಿ ಕೇವಲ 36 ಮತಗಳನ್ನು ಪಡೆದರು. ಉಳಿದ ಓಟುಗಳನ್ನು ತೃಣಮೂಲ ಕಾಂಗ್ರೆಸ್‌ನ ಅಭ್ಯರ್ಥಿ ರಾಜ್ಯಸಭಾ ಸ್ಥಾನ ಗಳಿಸಿದೆ. ಪ್ರದೇಶ ಕಾಂಗ್ರೆಸ್ ನಾಯಕ ಸೋಮೆನ್ ಮಿತ್ರ ಅಭ್ಯರ್ಥಿಯಾಗದೇ ಇದ್ದದ್ದು ಈ ಸ್ಥಿತಿಗೆ ಒಂದು ಕಾರಣವೆನ್ನಲಾಗುತ್ತಿದೆ. ಆದರೆ ಎಡರಂಗದ ವಿರುದ್ಧ ನಿಜವಾಗಿಯೂ ಹೋರಾಟದ ಬಣ ಎಂದೇ ಬಣ್ಣಿಸಿಕೊಳ್ಳುವ ಟಿ.ಎಂ.ಸಿ. ಮತ್ತು ಸೋಮೇನ್ ಮಿತ್ರ ಬಣದ ನಡುವಿನ ಈಗಿನ ವ್ಯವಹಾರ ಗುಟ್ಟೇನಲ್ಲ. ಹಿಂದೆ ಮಮತಾ ಬ್ಯಾನರ್ಜಿಯವರು ಮಿತ್ರ ಅವರ ನಾಯಕತ್ವದ ವಿರುದ್ಧ ಬಂಡೆದ್ದು ಟಿ.ಎಂ.ಸಿ. ರಚಿಸಿದ್ದರು. ಆಗ ಹಿಗ್ಗಾಮುಗ್ಗ ಬೈದಿದ್ದರು. ಈಗ ಇಬ್ಬರೂ 'ಹೊಸ ವಿಶಾಲ ಮೈತ್ರಿ' ಎಂಬ ತಾಳ ಹಾಕುತ್ತಿದ್ದಾರೆ. ಇದಲ್ಲದೇ ಉಳಿದ ರಾಜ್ಯಗಳಲ್ಲಿಯೂ ವ್ಯಾಪಕವಾದ 'ಮತಾಂತರ'ಗಳು ನಡೆದಿವೆ. ಇದಕ್ಕೆ ಕೆಲವೆಡೆ ಕಾಂಗ್ರೆಸ್, ಬಿಜೆಪಿಗಳು ಒಳಗಾಗಿವೆ. ಇವುಗಳನ್ನು ಗ್ರಹಿಸಿಯೇ ಚುನಾವಣೆಯಲ್ಲಿ ಹಣದ ಬಳಕೆಗೆ ಕಡಿವಾಣ ಹಾಕಬೇಕೆಂದು ಚುನಾವಣಾ ಆಯೋಗ ಎಚ್ಚರಿಸಿತ್ತು.

ಪ.ಬಂಗಾಳದಿಂದ ಎಡರಂಗದ ಸಿಪಿಐ(ಎಂ) ಅಭ್ಯರ್ಥಿ ಡಾ|| ಬಿಪ್ಲವ್ ದಾಸ್ ಗುಪ್ತಾ(53), ನಿಲೋತ್ಪಲ ಬಸು, ದೀಪಂಕರ ಮುಖರ್ಜಿ(ಇಬ್ಬರೂ ಸಿಪಿಐ(ಎಂ) ಮತ್ತು ಆರ್.ಎಸ್.ಪಿ.ಯ ಮನೋರಂಜನ್ ಭಟ್ಟಾಚಾರ್ಯರವರು ತಲಾ 52 ಪ್ರಥಮ ಪ್ರಾಶಸ್ತ್ಯದ ಮತ ಗಳಿಸಿ ಆಯ್ಕೆಯಾಗಿದ್ದಾರೆ. ಎಡರಂಗದ ಈ ನಿಚ್ಚಳ ಪ್ರಾಮಾಣಿಕ ಗೆಲುವಿನ ಬಗ್ಗೆ ಬಾಯಿಬಡುಕ ಪತ್ರಿಕೆಗಳೂ ಸಹ ಮೆಚ್ಚಿ ಬರೆಯಬೇಕಾಗಿದೆ ಬಂದಿದೆ.

ಒಟ್ಟಾರೆ ಈ ಚುನಾವಣೆಗಳಲ್ಲಿ ಹೆಚ್ಚುತ್ತಿರುವ ಜಾತಿ, ಹಣದ ಯಥೇಚ್ಛ ಬಳಕೆ ಪ್ರಜಾಪ್ರಭುತ್ವಕ್ಕೆ ಗಂಡಾಂತರಕಾರಿಯಾಗಿದೆ ಎಂಬುದು.

ಎಸ್.ವೈ.ಗುರುಶಾಂತ್

ಮಾಸದ ನೆನಪುಗಳು
(ಒಂದು ರಾಜಕೀಯ ಆತ್ಮಕಥನ)



ಜ್ಯೋತಿಬಸು ಆತ್ಮಕಥನ

ಕನ್ನಡಕ್ಕೆ: ವಿಶ್ವಕುಂದಾಪುರ

ಧಾರವಾಹಿ:

ಕಳೆದ ಸಂಚಿಕೆಯಲ್ಲಿ ಗೋವಾ ವಿಮೋಚನೆಗಾಗಿ ಕೇಂದ್ರದ ನೆಹರೂ ಸರ್ಕಾರದ ಮೇಲೆ ತಂದ ಒತ್ತಡ ಹಾಗೂ ರಾಜ್ಯ ವಿಧಾನಸಭೆಯಲ್ಲಿ ಮಂಡಿಸಿದ ಗೊತ್ತುವಳಿ, ಕಾಂಗ್ರೆಸ್ ನಿಲುವುಗಳ ಬಗ್ಗೆ ಓದಿದ್ದೀರಿ. ಈ ವಾರ ಎರಡನೇ ಮಹಾಚುನಾವಣೆಗಳು, ಬಿಹಾರ-ಪ.ಬಂಗಾಳ ವಿಲೀನ ವಿರೋಧಿ ಆಂದೋಲನ ಮತ್ತು ಅದನ್ನು ಬೆಂಬಲಿಸಿ ವಿದ್ಯಾರ್ಥಿಗಳ ಯಶಸ್ವಿ ಮುಷ್ಕರಗಳ ಕುರಿತು ಓದಿ......

ವಿಲೀನ ಪ್ರಸ್ತಾವದಿಂದ ಹಿಂಜರಿದ ಕಾಂಗ್ರೆಸ್

ಶರ್ಮಾ ಮತ್ತು ನಾನು ನೀಡಿದ ಜಂಟಿ ಹೇಳಿಕೆ ವಿಲೀನದ ವಿರುದ್ಧದ ನಮ್ಮ ನಿಲುವನ್ನು ವಿವರಿಸಿತ್ತು. ಈ ವಿಲೀನದಿಂದ ರಾಷ್ಟ್ರೀಯ ಏಕತೆಗೆ ಭಂಗ ಬರುತ್ತದೆ ಮಾತ್ರವೇ ಅಲ್ಲ ಎಲ್ಲೆಡೆಯಿರುವ ಬಿಹಾರಿಗಳು ಮತ್ತು ಬಂಗಾಳಿಗಳನ್ನು ವಿಭಜಿಸುತ್ತದೆ ಎಂದು ಹೇಳಿಕೆ ತಿಳಿಸಿತು. ಬಂಗಾಳಕ್ಕಿಂತ ಕಡಿಮೆ ಅಭಿವೃದ್ಧಿ ಹೊಂದಿದ ಬಿಹಾರವು ಕಲ್ಕತ್ತದ ದೊಡ್ಡ ಉದ್ಯಮಿಗಳ ಬೇಟೆಯ ಸುಲಭ ಕಾರ್ಯವಾಗುತ್ತದೆ ಎಂಬುದನ್ನು ಅರಿಯುವುದೂ ಮುಖ್ಯವಾಗಿತ್ತು. ಅದೇ ಹೊತ್ತಿಗೆ ಬಂಗಾಳದಲ್ಲಿ ಆಗಲೇ ಬಲಗೊಂಡ ಎಡ ಕಾರ್ಮಿಕ ಶಕ್ತಿಗಳನ್ನು ಬಿಹಾರದ ಪ್ರತಿಗಾಮಿ ಶಕ್ತಿಗಳು ನಾಶಮಾಡಲಿದ್ದವು. ಬಂಗಾಳಿಗಳು ಮತ್ತು ಬಿಹಾರಿಗಳ ಮಧ್ಯೆ ಕಡು ಪ್ರತಿಸ್ಪರ್ಧೆಯಿತ್ತು; ಸಹಜನ್ಯಾಯಕ್ಕೆ ತಿಲಾಂಜಲಿ ನೀಡಲಾಗುತ್ತಿತ್ತು.

ಭಾಷೆಯ ಆಧಾರದಲ್ಲಿ ರಾಜ್ಯಗಳನ್ನು ರಚಿಸಲು ದೇಶದ ಬೇರೆ ಭಾಗಗಳಲ್ಲಿ ಪ್ರಯತ್ನ ನಡೆಯುತ್ತಿದ್ದರೆ, ವಿಲೀನದ ಈ ಕ್ರಮ ಒಂದು ಹಿನ್ನಡೆಯ ಕ್ರಮವಾಗಿತ್ತು.

ಈ ಎರಡು ರಾಜ್ಯಗಳ ಅಭಿವೃದ್ಧಿಗೆ ಕಾಂಗ್ರೆಸ್ ನಾಯಕರು ಯಾವತ್ತೂ ವಿರುದ್ಧವಾಗಿದ್ದರು ಎಂದು, ವಿಲೀನಕ್ಕೆ ನಮ್ಮ ವಿರೋಧವೇಕೆ ಎಂಬುದನ್ನು ಆರ್ಥಿಕದ ಕಾರಣಗಳನ್ನು ನೀಡಿದೆವು. ಬ್ರಿಟಿಷ್ ಸಾಮ್ರಾಜ್ಯಶಾಹಿಗಳು ಜನರನ್ನು ವಿಭಜಿಸಲು ಬಹುತೇಕ ಇದೇ ರೀತಿಯ ವಾರ ಮುಂದಿಟ್ಟದ್ದರು ಎಂದೂ ಹೇಳಿಕೆ ತಿಳಿಸಿತು. ಹೇಳಿಕೆಯ ಮಹತ್ವವನ್ನು ಗಮನದಲ್ಲಿಟ್ಟುಕೊಂಡು ನಾನು ಬಹುತೇಕ ಇಡೀ ಹೇಳಿಕೆಯನ್ನು ಓದಿದೆ. ದೇಶಾದ್ಯಂತ ಕೋಮುವಾದದ ವಿಷಬೀಜ ಬಿತ್ತಲು ಕಾಂಗ್ರೆಸ್ ಯತ್ನಿಸುತ್ತಿದ್ದಾಗ ರಾಷ್ಟ್ರೀಯ ಏಕತೆ ಮತ್ತು ಸಮಗ್ರತೆಯನ್ನು ಕಾಪಾಡಲು ಎರಡೂ ರಾಜ್ಯಗಳ ಕಮ್ಯುನಿಸ್ಟರು ತಮ್ಮಿಂದಾದ ನಿಷ್ಠ ಪ್ರಯತ್ನ ಮಾಡಿದರು.

ರಾಜ್ಯಗಳ ಪುನರ್ ಘಟನೆ ಕುರಿತು ಪರಿಶೀಲನೆಗೆ ರಚಿಸಲಾದ ಪ್ರತಿಪಕ್ಷ ಸದಸ್ಯರುಳ್ಳ ಸಮಿತಿ ಜನವರಿ 14 ರಂದು ತನ್ನ ವಿಶೇಷ ಸಭೆಯ ಕೊನೆಯಲ್ಲಿ ಈ ಕೆಳಗಿನಂತೆ ಹೇಳಿಕೆ ನೀಡಿತು.

"ಇದು ಪೂರ್ಣ ಅನ್ಯಾಯ ಹಾಗೂ ಕಾಂಗ್ರೆಸ್ ಪಕ್ಷದ ವಿಶ್ವಾಸದ್ರೋಹವಾಗಿದೆ. ಇದು ಪಶ್ಚಿಮ ಬಂಗಾಳ ಜನರ ಮುಂದೆ ದೊಡ್ಡ ಸವಾಲಾಗಿದೆ. ಜನರು ಸರಿಯಾದ ಉತ್ತರ ಕೊಡುತ್ತಾರೆ" 1956 ಜನವರಿ 26 ರಂದು ಪ್ರತಿಭಟನೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವಂತೆ ನಾವು ಜನತೆಗೆ ಕರೆ ನೀಡಿದೆವು.

ಫೆಬ್ರವರಿ 14 ರಂದು ವಿಧಾನ ಸಭೆಯಲ್ಲಿ ರಾಜ್ಯಪಾಲರ ಭಾಷಣಕ್ಕೆ ವಂದನೆ ಸಲ್ಲಿಸುವ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ನಾನು, ಪ್ರಥಮ ಪಂಚವಾರ್ಷಿಕ ಯೋಜನೆ ಅವಧಿಯಲ್ಲಿ ಬದಲಾವಣೆ ಆಗಲ್ಲ ಎಂದು ಹೇಳಿದೆ. ರೈತರು ಕಾರ್ಮಿಕರು ಮತ್ತು ವೇತನದಾರ ಮಧ್ಯಮವರ್ಗದ ಜನರ ಬವಣೆ ಮುಂದುವರಿದೇ ಇದೆ ಎಂದೆ. ವಿಲೀನ ವಿಚಾರ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪವಾಗಿರಲಿಲ್ಲ ಹೀಗಾಗಿ ಬಂಗಾಳದ ಈ ಅಳಿವು ಉಳಿವಿನ ಪ್ರಶ್ನೆಯನ್ನು ರಾಜ್ಯಪಾಲರು ನಿರ್ಲಕ್ಷಿಸಿದ್ದಾರೆಯೇ ಅಥವಾ ಅವರು ವಿಲೀನಕ್ಕೆ ವಿರೋಧವಾಗಿದ್ದಾರೆಯೇ ಎಂದು ನಾನು ಪ್ರಶ್ನಿಸಿದೆ.

ವಿಶ್ವಾಸ ಮತ್ತು ಸ್ಥೈರ್ಯ ಗುಣದೊಂದಿಗೆ ರಾಜ್ಯದ ಜನರು ಇನ್ನು ಜೀವಂತ ವಿರುವುದು ಪಶ್ಚಿಮ ಬಂಗಾಳದ ಭಾಗ್ಯ ಮತ್ತು ಡಾ. ರಾಯ್ ಅವರ ದೌರ್ಬಲ್ಯ ಎಂದೂ ನಾನು ಹೇಳಿದೆ- ಇದಕ್ಕೆ ಬೇಕಾದರೆ ಅಸೆಂಬ್ಲಿ ಕಲಾಪದ ದಾಖಲೆಗಳನ್ನು ಪರಿಶೀಲಿಸಬಹುದು.

ಜನರು 50 ವರ್ಷಗಳಿಂದ ಬೆಳೆಸಿಕೊಂಡು ಬಂದಿದ್ದ ಆಶೋತ್ತರಗಳಿಗೆ ಕಾಂಗ್ರೆಸ್ ಪಕ್ಷ ತಿಲಾಂಜಲಿ ನೀಡಿತು. ವಿಲೀನ ವಿರೋಧಿ ಚಳವಳಿ ಪಶ್ಚಿಮ ಬಂಗಾಳ ಮಾತ್ರವಲ್ಲದೆ ಇನ್ನು ಕೆಲವು ರಾಜ್ಯಗಳಲ್ಲಿ ಕಾಡ್ಗಿಚ್ಚಿನಂತೆ ಹಬ್ಬಿತು. ಅದು ನಿಶ್ಚಿತವಾಗಿಯೂ ಒಂದು ರಾಷ್ಟ್ರೀಯ ಆಂದೋಳನದ ಸ್ವರೂಪ ಪಡೆಯುತ್ತಿತ್ತು.

ಆಘಾತದ ಸುದ್ದಿ

ಈ ಎಲ್ಲದರ ನಡುವೆ ಡಾ. ಮೇಘನಾದ ಸಹಾ ಹೃದಯಾಘಾತದಿಂದ ನಿಧನರಾದ ಆಘಾತದ ಸುದ್ದಿ ದೆಹಲಿಯಿಂದ ಬಂತು. ಡಾ. ಸಹಾ ಕಲ್ಕತ್ತ ವಾಯುವ್ಯ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ಎಡಪಕ್ಷಗಳ ಬೆಂಬಲದೊಂದಿಗೆ ಲೋಕಸಭೆಗೆ ಆಯ್ಕೆಯಾಗಿದ್ದರು. ಅವರು ವಿಲೀನದ ಕಡು ವಿರೋಧಿ ಆಗಿದ್ದರು. ಚಳವಳಿಯಲ್ಲಿ ಸಕ್ರಿಯ ಪಾತ್ರ ನಿರ್ವಹಿಸಿದ್ದರು.

ಮಾರ್ಚ್ 18 ರಂದು ಸುಮಾರು 50 ಸಾವಿರ ಜನರು ಮೈದಾನದಲ್ಲಿ ಜಮಾಯಿಸಿ ಯಾವ ಬೆಲೆ ತೆತ್ತಾದರೂ ವಿಲೀನವನ್ನು ವಿರೋಧಿಸುವುದಾಗಿ ಪಣತೊಟ್ಟರು. ಹಿರಿಯ ಕ್ರಾಂತಿಕಾರಿ ನಾಯಕ, ಶಾಸಕ ಜ್ಯೋತಿಷ್ ಗೋಷ್ ರ್‍ಯಾಲಿಯ ಅಧ್ಯಕ್ಷತೆ ವಹಿಸಿದ್ದರು. ಚಳವಳಿ ಯಾವುದೇ ರಾಜ್ಯದ ಜನರ ವಿರುದ್ಧ ಅಲ್ಲ. ಆದರೆ ಎರಡು ರಾಜ್ಯಗಳ ಜನರನ್ನು ಒಡೆಯುವ ಸರಕಾರದ ನೀತಿಗಳು ಮತ್ತು ಪಿತೂರಿಯ ವಿರುದ್ಧ ಈ ಹೋರಾಟ ಎಂದು ಲೋಹಿತ ಸೇನ್ ಮಂಡಿಸಿದ ಗೊತ್ತುವಳಿ ಸ್ಪಷ್ಟಪಡಿಸಿತು. ಭಾಷೆ ಆಧಾರದಲ್ಲಿ ರಾಜ್ಯಗಳ ಮರುವಿಂಗಡಣೆ ಆಗಬೇಕೆಂದು ಪ್ರತಿಪಾದಿಸಿತು.

ಇದು ನಮಗೆ ಒಂದು ಸಂತೋಷದ ದಿನ. ವಿಲೀನದ ವಿಷಯವನ್ನು ಪ್ರಸಕ್ತ ಅಧಿವೇಶನದಲ್ಲಿ ಮಂಡಿಸುವುದಿಲ್ಲ ಎಂದು ಜನರ ಒತ್ತಡದಿಂದಾಗಿ ಮುಖ್ಯಮಂತ್ರಿ ಸದನದಲ್ಲಿ ಪ್ರಕಟಿಸಬೇಕಾಯಿತು ಎಂದು ನಾನು ಹೇಳಿದೆ.

ಡಾ. ಸಹಾರ ನಿಧನದಿಂದಾಗಿ ಅಗತ್ಯವಾಗಿರುವ ಉಪಚುನಾವಣೆಯಲ್ಲಿ ಮುಖ್ಯಮಂತ್ರಿ ಯವರಿಗೆ ಸವಾಲು ಎಸೆದಿದ್ದಾರೆ ಅದನ್ನು ನಾವು ಅಂಗೀಕರಿಸಿದ್ದೇವೆ ಎಂದೂ ನಾನು ರ್‍ಯಾಲಿಯಲ್ಲಿ ಪ್ರಕಟಿಸಿದೆ.

ಚಳವಳಿಯ ಪರವಾಗಿ ನಾನು ನ್ಯಾಯಾಲಯಗಳ ಮುಂದೆ ಧರಣಿ ನಡೆಸಲು ಮತ್ತು ಮಾರ್ಚ್ 23 ರೊಳಗೆ 15 ಲಕ್ಷ ಜನರ ಸಹಿ ಸಂಗ್ರಹಿಸಲು ಈ ಮಧ್ಯೆ ನಿರ್ಧರಿಸಲಾಯಿತು.

ಸರಕಾರ ಮಣಿಯದಿದ್ದರೆ ನಮ್ಮನ್ನು ತಡೆಯಲು ಯಾರಿಗೂ ಸಾಧ್ಯವಾಗದು ಎಂದು ನಾವು ಸರಕಾರಕ್ಕೆ ಗಡುವು ನೀಡಿದೆವು. ಆದರೆ ಡಾ. ರಾಯ್ ಎಂದಿನಂತೆ ಹಠಮಾರಿಯಾಗಿಯೇ ಉಳಿದರು. ನಾನಿದ್ದರೂ ಇದರಿಂದ ಚಳುವಳಿಗೆ ಪೆಟ್ರೋಲ್ ಸುರಿದಂತಾಯಿತು.

ಕಾಂಗ್ರೆಸ್ ಪಕ್ಷ ಮತ್ತು ಸರಕಾರ ಜನರಿಂದ ಇನ್ನಷ್ಟು ದೂರ ಸರಿಯುತ್ತಿರುವುದು ಇನ್ನೊಂದು ಉಪಚುನಾವಣೆಯ ಫಲಿತಾಂಶ ತೋರಿಸಿಕೊಟ್ಟಿತು. ಮಿಡ್ನಾಪುರದ ಖೆಜುರಿ ವಿಧಾನಸಭೆ ಕ್ಷೇತ್ರದಲ್ಲಿ ನಡೆದ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಭಿಕಾರಿ ಮಂಡಲ್ ಎಡ ಪಕ್ಷ ಬೆಂಬಲಿತ ಪಿ.ಎಸ್. ಪಿ. ಅಭ್ಯರ್ಥಿ ಲಾಲ್ ದಾಸ್ ಕೈಯಲ್ಲಿ 20,000 ಕ್ಕೂ ಅಧಿಕ ಮತಗಳಿಂದ ಸೋತರು. ಕಾಂಗ್ರೆಸ್ ಶಾಸಕ ಕೌಸ್ತವ ಕಾಂತಿ ಕರಾಲ್‌ರ ನಿಧನದಿಂದಾಗಿ ಈ ಸ್ಥಾನ ತೆರವಾಗಿತ್ತು. ಎಡ ಪಕ್ಷ ಭಾರೀ ಬಹುಮತದ ಅಂತರದಲ್ಲಿ ಕಾಂಗ್ರೆಸ್ ಪಕ್ಷದಿಂದ ಒಂದು ಸ್ಥಾನವನ್ನು ಕಿತ್ತು ಕೊಂಡಿತ್ತು ಎನ್ನುವುದು ಈ ಫಲಿತಾಂಶದ ಅರ್ಥವಾಗಿತ್ತು.

ಚಳುವಳಿಯ ಮುಖಂಡರನ್ನು ಸನ್ಮಾನಿಸಲು ಎಪ್ರಿಲ್ 30 ರಂದು ವೆಲ್ಲಿಂಗ್ಟನ್ ಚೌಕದಲ್ಲಿ ಒಂದು ರ್‍ಯಾಲಿ ನಡೆಯಿತು. ವಿಲೀನ ಪ್ರಸ್ತಾವವನ್ನು ಪಶ್ಚಿಮ ಬಂಗಾಳದ ಜನತೆ ತಿರಸ್ಕರಿಸಿರುವುದು ಖೆಜುರಿ ಉಪ ಚುನಾವಣೆ ಫಲಿತಾಂಶ ಸ್ಪಷ್ಟವಾಗಿ ಸಾಬೀತು ಪಡಿಸಿದೆ ಎಂದು ರ್‍ಯಾಲಿಯಲ್ಲಿ ಮತನಾಡಿದ ಎಲ್ಲರೂ ಹೇಳಿದರು. ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಸೋತ ಹಿನ್ನೆಲೆಯಲ್ಲಿ ಮರುದಿನವೇ ಮುಖ್ಯಮಂತ್ರಿರಾಯ್ ಮೇಲಿನ ಪ್ರಸ್ತಾವವನ್ನು ವಾಪಸ್ ಪಡೆಯಬೇಕಾಯಿತು.

"ವಿಲೀನ ಪ್ರಸ್ತಾವದಂಥ ಒಂದು ವಿಷಯದ ಬಗ್ಗೆ ಜನರ ಭಾವನೆಗಳು ಏನು ಎಂಬುದಕ್ಕೆ ಚುನಾವಣೆ ಯಾವತ್ತೂ ಒಂದು ಒಳ್ಳೆಯ ಮಾನದಂಡ. ಖೆಜುರಿ ಫಲಿತಾಂಶ ವಿಲೀನದ ಬಗ್ಗೆ ಇಡೀ ಪಶ್ಚಿಮ ಬಂಗಾಳ ಜನರ ಆಲೋಚನೆ ಏನೆಂಬುದರ ನಿಜವಾದ ಪ್ರತಿಫಲ ಆಗಿರಬಹುದು ಅಥವಾ ಅಲ್ಲದಿರಬಹುದು. ಆದರೆ ವಿಲೀನ ಪ್ರಸ್ತಾವದ ವಿರುದ್ಧ ರಚಿಸಲಾದ ಸಮಿತಿಯ ಕಾರ್ಯದರ್ಶಿ ಮೋಹಿತ್ ಮೈತ್ರರಿಗೆ ಚುನಾವಣೆಯ ಕಲ್ಕತ್ತ ಜನರು ನೀಡದ ಅಭೂತಪೂರ್ವ ಬೆಂಬಲದಿಂದ ನಗರದ ಜನರು ಪ್ರಸ್ತಾವವನ್ನು ಅಂಗೀಕರಿಸಲು ಸಿದ್ಧವಿಲ್ಲ ಎಂಬುದನ್ನು ತೋರಿಸುತ್ತದೆ. ಬೇರೆ ರಾಜ್ಯದಿಂದ ಕೆಲವು ಎಕರೆ ಪ್ರದೇಶ ತಂದರೆ ಬಂಗಾಳದ ಸಮಸ್ಯೆಗಳು ಪರಿಹಾರವಾಗುವುದಿಲ್ಲ ಎಂಬುದನ್ನು ಜನತೆ ಸ್ಪಷ್ಟ ನಿರ್ಧಾರಕ್ಕೆ ಬಂದಿದೆ ಎಂದು ಮುಖ್ಯಮಂತ್ರಿ ರಾಯ್ ಹೇಳಿಕೆಯೊಂದರಲ್ಲಿ ತಿಳಿಸಿದರು.

ಮೋಹಿತ ಮೈತ್ರ ತಮ್ಮ ಅಂತಿಮ ದಿನದವರೆಗೂ ಪಕ್ಷದ ಸಕ್ರಿಯ ಸದಸ್ಯರಾಗಿದ್ದರು ಮತ್ತು ನಮ್ಮ ಉದ್ದೇಶ ಸಾಧನೆಗಾಗಿ ಕೆಲಸ ಮಾಡಿದರು. ಕಾಂಗ್ರೆಸ್ ಪಕ್ಷವನ್ನು ಸೋಲಿಸಿದ ಕಲ್ಕತ್ತ ಜನತೆಯನ್ನು ಎಡಪಕ್ಷಗಳು ಸಂಯುಕ್ತವಾಗಿ ಅಭಿನಂಧಿಸಿದವು.

(ಹಣದುಬ್ಬರದ ಬಿಕ್ಕಟ್ಟು ಮುಂದಿನ ಸಂಚಿಕೆಯಲ್ಲಿ)

ಅಮೇರಿಕಾದ ಕೈಗೊಂಬೆಯಾಗುತ್ತಿದೆ ಭಾರತದ ಸರಕಾರ

ಕ್ಲಿಂಟನ್ ಭೇಟಿ ಕಾಲದಲ್ಲಿ ಹೊರಡಿಸಿದ ಜಂಟಿ ಹೇಳಿಕೆಯಲ್ಲಿ ಅಮೇರಿಕಾ ಭಾರತ ತನ್ನ ಅರ್ಥಿಕವನ್ನು ತೆರೆದಿಡುವಲ್ಲಿ ಯಶಸ್ವಿಯಾಗಿದೆ ಎಂದು ಹೊಗಳಿದೆ. ಬಿಜೆಪಿ ನೇತೃತ್ವದ ಸರಕಾರದ ಆರ್ಥಿಕ ನೀತಿಗಳಿಂದ ಅಮೇರಿಕನ್ನರು ಸಂತೋಷ ಪಡುವುದು ಸಹಜ. ಭಾರತದ ನೀತಿ ನಿರ್ಧಾರಗಳು ಮತ್ತು ಅಮೇರಿಕನ್ ವ್ಯಾಪಾರೀ ಹಿತಾಸಕ್ತಿಗಳು ಹೆಚ್ಚೆಚ್ಚಾಗಿ ಜೊತೆಗೂಡುತ್ತಿದ್ದಾರೆ ಎಂಬುದು ಕ್ಲಿಂಟನ್ ಭೇಟಿ ಕಾಲದಲ್ಲ ಎದ್ದು ಕಂಡಿರುವ ಸಂಗತಿ. ಈ ದ್ವಿಪಕ್ಷೀಯ ಮಾತುಕತೆಗಳ ಫಲಶ್ರುತಿಯೆಂದರೆ ಅರ್ಥಿಕ ವಲಯದಲ್ಲಿ ಭಾರತ ಮತ್ತು ಅಮೇರಿಕಾದ ಅಧಿಕೃತ ನೀತಿ ನಿರ್ಧಾರ ವ್ಯವಸ್ಥೆಗಳನ್ನು ಒಂದುಗೂಡಿಸುವ ಹಲವಾರು ನಿರ್ಣಯಗಳು ಆಗಿವೆ. ಭಾರತದ ಹಣಕಾಸು ಮಂತ್ರಿ ಮತ್ತು ಅಮೇರಿಕನ್ ಹಣಕಾಸು ಮಂತ್ರಿ ಸೇರಿಕೊಂಡು ಹಣಕಾಸು, ಬಂಡವಾಳ ಹೂಡಿಕೆ ಬಗ್ಗೆ ಒಂದು ವೇದಿಕೆ ರಚಿಸುತ್ತಾರಂತೆ. ಇದರಲ್ಲಿ ರಿಝರ್ವ್ ಬ್ಯಾಂಕ್, ಸ್ಟಾಕ್ ಎಕ್ಸ್‌ಚೇಂಜ್ ಮಂಡಳಿ, ಅಮೇರಿಕಾದ ಫೆಡರಲ್ ರಿಸರ್ವ್, ಮತ್ತಿತರ ಪ್ರತಿನಿಧಿಗಳು ಭಾಗವಹಿಸುತ್ತಾರಂತೆ. ಅದೇ ರೀತಿ ಭಾರತದ ವಾಣಿಜ್ಯ ಮಂತ್ರಿ ಮತ್ತು ಅಮೇರಿಕಾ ವಾಣಿಜ್ಯ ಕಾರ್ಯದರ್ಶಿ ನೇತೃತ್ವದಲ್ಲಿ ಇನ್ನೊಂದು ವೇದಿಕೆ ರಚಿಸಲಾಗುತ್ತಿದೆಯಂತೆ. ಇದರಲ್ಲಿ ಸರಕಾರದ ಮತ್ತು ಖಾಸಗೀವಲಯದ ಪ್ರತಿನಿಧಿಗಳಿರುತ್ತಾರಂತೆ, ಇದಲ್ಲದೆ ವ್ಯಾಪಾರ ನೀತಿಗಳನ್ನು ರೂಪಿಸಲು ವೇದಿಕೆ, ವಿಜ್ಞಾನ- ತಂತ್ರಜ್ಞಾನ ವೇದಿಕೆ, ವಿಜ್ಞಾನ ಮತ್ತು ಪರಿಸರ ಕುರಿತಾದ ಜಂಟಿ ಸಮಾಲೋಚನಾ ಗುಂಪು ರಚಿಸಲಾಗುತ್ತದೆಯಂತೆ.

ಇವೆಲ್ಲಾ ವಿವಿಧ ವಲಯಗಳಲ್ಲಿ ಸರಕಾರಕ್ಕೆ ಪ್ರೋತ್ಸಾಹ ನೀಡುವ ಅಮಾಯಕ ವೇದಿಕೆಗಳೆಂದು ಮೇಲ್ನೋಟಕ್ಕೆ ಎನಿಸಬಹುದು. ಆದರೆ ವಾಸ್ತವ ಸಂಗತಿಯೇ ಬೇರೆ. ಅಮೇರಿಕಾ ವ್ಯಾಪಾರದ ವಿಷಯಗಳಲ್ಲಿ ಕಾರ್ಮಿಕ ಕಾನೂನು ಪರಿಸರ ವಿಷಯಗಳನ್ನು ತಂದು ಎಲ್ಲಾ ಮೂರನೇ ಜಗತ್ತಿನ ದೇಶಗಳ ಹಿತಾಸಕ್ತಿಗಳ ವಿರುದ್ಧ ನಿರಂತರ ಪ್ರಯತ್ನ ನಡೆಸಿದೆ. ಮೂರು ದಶಕಗಳಿಂದ ಭಾರತ ವಿರುದ್ಧ ಹಲವು ತಂತ್ರಜ್ಞಾನ ನಿರ್ಬಂಧಗಳನ್ನು ಅಮೇರಿಕಾ ಹೇರಿರುವ ಹಿನ್ನೆಲೆಯಲ್ಲಿ ಈಗ ರಚಿಸುವ ವಿಜ್ಞಾನ-ತಂತ್ರಜ್ಞಾನ ವೇದಿಕೆಯ ಮೂಲಕ ಭಾರತ ಒಂದು ಅಮೇರಿಕನ್ ಹತೋಟಿಯ ಅಸಮಾನ ವ್ಯವಸ್ಥೆಯನ್ನು ಒಪ್ಪಿಕೊಳ್ಳುತ್ತಿದೆ.


ಈ ಭೇಟಿ ಕಾಲದಲ್ಲಿ ಸಹಿ ಮಾಡಿದ ಪರಿಸರ ಒಪ್ಪಂದ ಒಂದು 'ಭಾರೀ ಪ್ರಮಾದ" ಎಂದು ಒಬ್ಬ ತಜ್ಞರು ವರ್ಣಿಸಿದ್ದಾರೆ. ಟಾಟಾ ಎನರ್ಜಿ ಇನ್ಸ್‌ಟ್ಯೂಟಿನ ನಿರ್ದೇಶಕ ಡಾ। ಆರ್.ಕೆ.ಪಚೌರಿ "ನಾವು ಅಮೇರಿಕಾದ ಮೋಸಕ್ಕೆ ಬಲಿಯಾಗಿದ್ದೇವೆ" ಎಂದಿದ್ದಾರೆ. ಈ ಒಪ್ಪಂದದ ಪ್ರಕಾರ ಭಾರತ ಪುನರ್‌ನವೀಕರಿಸಬಲ್ಲ ಮೂಲಗಳಿಂದ ವಿದ್ಯುತ್ ಉತ್ಪಾದನೆಯನ್ನು ಶೇ. 10 ವರೆಗೆ ಏರಿಸಬೇಕಾಗುತ್ತದೆ. ಇದು ನಮ್ಮ ದೇಶಕ್ಕೆ ಅಪಾರ ಖರ್ಚಿನ ಬಾಬತ್ತು. ಕ್ಯೂಟೋ ಒಪ್ಪಂದದ ಪ್ರಕಾರ ಅಮೇರಿಕಾ 2012 ಇಸ್ವಿಯೊಳಗೆ ವಿಶ್ವದ ವಾತಾವರಣವನ್ನು ಬಿಸಿಯೇರಿಸುವ ಅನಿಲಗಳ ವಿಸರ್ಜನೆಯನ್ನು ಶೇ. 7 ಕ್ಕೆ ಇಳಿಸಬೇಕು ಎಂಬ ಕರಾರನ್ನು ಅನುಮೋದಿಸುವ ಬಗ್ಗೆ ಏನೂ ಹೇಳದೆ ಭಾರತ ಮಾತ್ರ ಅದಕ್ಕೆ ಒಪ್ಪುವಂತೆ ಮಾಡಿದೆ. ಇದು ಭಾರತದ ಇನ್ನೊಂದು ಶರಣಾಗತಿ.

ಆರ್ಥಿಕ ರಂಗದಲ್ಲಿ ಈ ಶರಣಾಗತಿಗಳೊಂದಿಗೆ ಅಧ್ಯಕ್ಷ ಕ್ಲಿಂಟನ್ ನವದೆಹಲಿಯಲ್ಲಿ ಏಶ್ಯನ್ ಪ್ರಜಾಪ್ರಭುತ್ವ ಆಡಳಿತ ಕೇಂದ್ರ ರೂಪಿಸುವುದಾಗಿ ಪ್ರಕಟಿಸಿದ್ದಾರೆ. ಇದಕ್ಕೆ ಅಮೇರಿಕನ್ ವಿದೇಶಾಂಗ ಇಲಾಖೆಯ ಹಣಕಾಸು ನೆರವು ಪಡೆವ ರಾಷ್ಟ್ರೀಯ ಪ್ರಜಾಪ್ರಭುತ್ವ ದತ್ತಿ (National and ownent for democracy) ಹಣಕಾಸು ನೆರವು ನೀಡುತ್ತಾರಂತೆ. ಇದರಲ್ಲಿನ ಭಾರತೀಯ ಪಾಲುದಾರರೆಂದರೆ ಸಿ.ಐ.ಐ. - ಭಾರತೀಯ ಉದ್ಯಮಿಗಳ ಒಕ್ಕೂಟ, ಇದು ಸಹಜವೇ ಏಕೆಂದರೆ ಭಾರತದಲ್ಲಿ ಅಮೇರಿಕನ್ ಮಾದರಿ ಪ್ರಜಾಪ್ರಭುತ್ವ ಮತ್ತು ಮುಕ್ತ ಮಾರುಕಟ್ಟೆಯ ಪರಾಕು ಹಾಕುವ ಸಂಸ್ಥೆ ತಾನೇ ಇದು.

ಈ ಕ್ಲಿಂಟನ್ ಭೇಟಿ ಕಾಲದಲ್ಲಿ ಎಷ್ಟು ಸುಲಭವಾಗಿ ಅಮೇರಿಕಾದ ಆರ್ಥಿಕ ಕಾರ್ಯಕ್ರಮವನ್ನು ನಾವು ಅಂಗೀಕರಿಸಿಬಿಟ್ಟಿದ್ದೇವೆ ಎಂಬುದನ್ನು ಮಾಧ್ಯಮಗಳು ನಿರ್ಲಕ್ಷಿಸಿವೆ. ಪ್ರಮುಖ ಮಾಧ್ಯಮ ಕಂಪನಿಗಳ ಮಾಲಿಕರ, ಅವುಗಳ ಮೇಲೆ ಹತೋಟಿ ಹೊಂದಿರುವವರ ವ್ಯಾಪಾರ ಮತ್ತು ವಾಣಿಜ್ಯ ಹಿತಾಸಕ್ತಿಗಳನ್ನು ಅತ್ಯಂತ ವಿಧೇಯತೆಯಿಂದ ಬಿಂಬಿಸುವ ಈ ಮಾಧ್ಯಮಗಳು ಕ್ಲಿಂಟನ್ ಭೇಟಿಯ ಈ ಆಯಾಮವನ್ನು ಉಪೇಕ್ಷಿಸಿವೆ.

ಭಾರತದಲ್ಲಿ ದೈನ್ಯ ಸೇವಕ ಭಾವನೆಯ ಪ್ರದರ್ಶನಕ್ಕೆ ತದ್ವಿರುದ್ಧವಾಗಿ ಬಾಂಗ್ಲಾ ದೇಶ ಸರಕಾರ ಸ್ವಾಭಿಮಾನದ ಪ್ರದರ್ಶನ ನೀಡಿದೆ. ಅಮೇರಿಕಾ ಎಷ್ಟೇ ಪುಸಲಾಯಿಸಿದರೂ ಕೂಡಾ ನೈಸರ್ಗಿಕ ಅನಿಲದ ತನ್ನ ಅಗತ್ಯಗಳನ್ನು ಹಾಗೂ 50 ವರ್ಷಗಳ ಮೀಸಲು ದಾಸ್ತಾನನ್ನು ಪೂರೈಸುವವರೆಗೆ ಭಾರತಕ್ಕೆ ಅದನ್ನು ರಫ್ತು ಮಾಡಲು ಅಮೇರಿಕನ್ ಕಂಪನಿಗಳೊಂದಿಗೆ ಕಂಟ್ರಾಕ್ಟ್‌ಗಳನ್ನು ಮಾಡಿಕೊಳ್ಳುವುದಿಲ್ಲ ಎಂದು ಬಾಂಗ್ಲಾದೇಶದ ಪ್ರಧಾನ ಮಂತ್ರಿ ದೃಢವಾಗಿ ಸಾರಿದರು. ಬಿಜೆಪಿ ಅನುಸರಿಸುವ ರಾಷ್ಟ್ರೀಯ ಸ್ವಾಭಿಮಾನದ ಇಂತಹ ಅಭಿವ್ಯಕ್ತಿಯನ್ನು ನಿರೀಕ್ಷಿಸುವಂತಿಲ್ಲ.

ಜಾಗೃತರಾಗಿ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಬೇಕಾದ ಸಮಯವಿದು



ಕ್ಲಿಂಟನ್‌ರ ಭೇಟಿ ಬಗ್ಗೆ ಸುರ್ಜಿತ್ ವಿಶ್ಲೇಷಣೆ

ಅಮೇರಿಕಾದ ಅಧ್ಯಕ್ಷ ಕ್ಲಿಂಟನ್‌ರ ಭಾರತ ಭೇಟಿ ಕುರಿತಂತೆ ಎಬ್ಬಿಸಿದ್ದ ಭಾವೋನ್ಮಾದ ಈಗ ಇಳಿದಿದೆ. ಒಬ್ಬರಿಂದ ಈಗ ಖಂಡಿತವಾಗಿ ಈ ಭೇಟಿಯ ಬಗ್ಗೆ ಸಮಚಿತ್ತದಿಂದ ವಿಶ್ಲೇಷಣೆ ಮಾಡಲು ಸಾಧ್ಯವಾಗಿದೆ. ಹಾಗೆಯೇ ನಮ್ಮ ಜನಗಳಲ್ಲಿ ಗಮನಾರ್ಹ ಭಾಗ ಹಾಗೂ ಎಡಪಕ್ಷಗಳು ಏಕೆ ಈ ಭೇಟಿಯನ್ನು ವಿರೋಧಿಸಿದವು ಎಂದು ಅರಿಯಲೂ ಈಗ ಸಾಧ್ಯ.

ಒಂದು ವಿಷಯವಂತೂ ಆರಂಭದಿಂದಲೇ ಬಹಳ ಜನರ ಗಮನಕ್ಕೆ ಬಂತು. ಕ್ಲಿಂಟನ್ ಭಾರತದ ಅಧಿಕೃತ ಭೇಟಿ ಆರಂಭಿಸುವ ಮೊದಲು ಬಾಂಗ್ಲಾದೇಶಕ್ಕೆ ಭೇಟಿ ನೀಡಿ ಬಂದರು. ಆ ಭೇಟಿಯ ಕಾಲದಲ್ಲಿ ಅವರು 1971ರ ಬಾಂಗ್ಲಾ ದೇಶದ ವಿಮೋಚನಾ ಸಮರದ ಹುತಾತ್ಮರ ಸ್ಮಾರಕ್ಕೆ ಹೋಗಿ ಶ್ರದ್ಧಾಂಜಲಿ ಅರ್ಪಿಸಲಿಲ್ಲ. ಇದು ಕೇವಲ ಔಚಿತ್ಯ ಅನೌಚಿತ್ಯದ ಪ್ರಶ್ನೆಯಾಗಿರಲಿಲ್ಲ. ಅಲ್ಲಿ ಹೋಗಿ ಶ್ರದ್ಧಾಂಜಲಿ ಅರ್ಪಿಸಿದ್ದರೆ 1971ರಲ್ಲಿ ಅಮೇರಿಕಾ ನಮ್ಮ ಉಪಖಂಡದಲ್ಲಿ ವಹಿಸಿದ ಪಾತ್ರದ ಬಗ್ಗೆ ವಿಷಾದ ವ್ಯಕ್ತಪಡಿಸಿದಂತಾಗುತ್ತಿತ್ತು. ಸಾಮ್ರಾಜ್ಯಶಾಹಿ ವಿಷಾದ ವ್ಯಕ್ತಪಡಿಸುವುದೇ? ಅದು ಹೇಗೆ ಸಾಧ್ಯ? ಮೂರನೇ ಜಗತ್ತಿನ ದೇಶಗಳ ಭಾವನೆಗಳಿಗೆ ಗೌರವ ಕೊಟ್ಟರೆ ಅದು ಸಾಮ್ರಾಜ್ಯಶಾಹಿಯಾಗಿ ಹೇಗೆ ಉಳಿಯಲು ಸಾಧ್ಯ? ಅಯಾ ಸಾಮ್ರಾಜ್ಯಶಾಹಿ ತನ್ನ ಬಣ್ಣವನ್ನು ಕಿಂಚಿತ್ತೂ ಬದಲಿಸಿಲ್ಲ ಎಂಬ ಸಂಕೇತದೊಂದಿಗೆ ಕ್ಲಿಂಟನ್ ಭಾರತ ಭೇಟಿ ಆರಂಭಿಸಿದರು.

ಬಾರತದಲ್ಲೂ ಈ ಬೇಟಿಯ ಮೊದಲು ಮತ್ತು ನಂತರ ಅಮೇರಿಕನ್ ಭದ್ರತಾ ಸಿಬ್ಬಂದಿ ಮತ್ತು ಶ್ವೇತ ಭವನದ ಅಧಿಕಾರಿಗಳ ವರ್ತನೆಯೂ ಸಾಮ್ರಾಜ್ಯಶಾಹಿ ಧಿಮಾಕಿನ ಮೇಲೆ ಬೆಳಕು ಚೆಲ್ಲಿತು. ಜನ ಸಾಮಾನ್ಯರನ್ನು ಬಿಡಿ, ರಾಜಾಸ್ತಾನದ ಮುಖ್ಯಮಂತ್ರಿಗಳನ್ನೂ, ರಾಜ್ಯಪಾಲರನ್ನೂ ಅಮೇರಿಕನ್ ಭದ್ರತಾಸಿಬ್ಬಂದಿ ಛೇಡಿಸದೆ ಬಿಡಲಿಲ್ಲ. ಈ ಬಗ್ಗೆ ಪತ್ರಿಕೆಗಳಲ್ಲಿ ಸಾಕಷ್ಟು ವರದಿಯಾಗಿದೆಯಾದ್ದರಿಂದ ಇಲ್ಲಿ ಅದನ್ನು ಚರ್ಚಿಸುವುದಿಲ್ಲ.

ನಿಜ ಉದ್ದೇಶ

ಈ ಭೇಟಿಯನ್ನು ಈಗಿನ ಅಂತರ್ರಾಷ್ಟ್ರೀಯ ಸನ್ನಿವೇಶದಲ್ಲಿ ಕಾಣಬೇಕು. ಸೋವಿಯತ್ ಒಕ್ಕೂಟದ ಪತನದ ನಂತರ ವಿಶ್ವದಲ್ಲಿ ಅಮೇರಿಕಾ ನೇತೃತ್ವದ ಸಾಮ್ರಾಜ್ಯಶಾಹಿ ಬಣವನ್ನು ಸರಿತೂಗಿಸುವ ಬೇರೆ ಶಕ್ತಿಯಿಲ್ಲವಾಗಿದೆ. ಮೂರನೇ ಜಗತ್ತಿನ ದೇಶಗಳ ಮೇಲೆ ಇದರ ಪರಿಣಾಮವನ್ನು ಯುಗೋಸ್ಲೋವಿಯಾ, ಇರಾಕ್‌ನಲ್ಲಿ ಅವರ ವರ್ತನೆಯಲ್ಲಿ, ಸೋಮಾಲಿಯಾದಲ್ಲಿ ಅವರ ಮಧ್ಯಪ್ರವೇಶದಲ್ಲಿ, ಉತ್ತರ ಕೋರಿಯಾದ ರೈತರು ಚೀನಾ ಪ್ರಯತ್ನದಲ್ಲಿ (ಅಣು ಸ್ಥಾವರದ ಪ್ರಶ್ನೆಯಲ್ಲಿ), ಅರಬ್ ದೇಶಗಳು ಮತ್ತು ಪ್ಯಾಲೆಸ್ಟೆನಿಯನ್ನರ ಮೇಲೆ ಒತ್ತಡ ಹಾಕಿದ ರೀತಿಯಲ್ಲಿ, ಸೂಡಾನ್, ಅಫಘಾನಿಸ್ತಾನಿಗಳ ಮೇಲೆ ಭಯೋತ್ಪಾದಕರನ್ನು ಎದುರಿಸುವ ಹೆಸರಲ್ಲಿ ಬಾಂಬ್ ಧಾಳಿ ನಡೆಸಿ ದಬ್ಬಾಳಿಕೆಗಳಲ್ಲಿ ಕಂಡಿದ್ದೇವೆ. ಇಲ್ಲೂ ನಮ್ಮ ದೇಶಕ್ಕೆ ರಾಕೆಟ್ ತಂತ್ರಜ್ಞಾನ ನಮಗೆ ಕೊಡಬಾರದೆಂದು ರಷ್ಯಾದ ಮೇಲೆ ಅದು ಒತ್ತಡ ಹಾಕಿದೆ. ಇವು ಸಾಮ್ರಾಜ್ಯಶಾಹಿಗಳ ಅಟಾಟೋಪಗಳ ದೊಡ್ಡ ಪಟ್ಟಿಯಲ್ಲಿ ಇತ್ತೀಚಿನವಷ್ಟೆ. ಅಮೇರಿಕನ್ ನಿಷೇಧದಿಂದ ಕ್ಯೂಬಾದ ಸಂಗತಿ ಇನ್ನೂ ಮುಂದುವರಿಯುತ್ತಲೇ ಇದೆ. ನಾಟೋ ಕೂಡಾ ಯಾವುದೇ ಕಾರಣವಿಲ್ಲದೆ ಪೂರ್ವದತ್ತ ಕೈಚಾಚುತ್ತಲೇ ಇದೆ.

ಈ ಹಿನ್ನೆಲೆಯಲ್ಲಿ ವಿಶ್ವದ ಮೂರು ದೊಡ್ಡ ದೇಶಗಳಾದ ರಷ್ಯಾ, ಚೀನಾ ಮತ್ತು ಭಾರತ ಪರಸ್ಪರ ಸಮೀಪ ಬರುವ ಅಗತ್ಯವನ್ನು, ಪರಸ್ಪರ ಪ್ರಯೋಜನಕ್ಕಾಗಿ ಮತ್ತು ವಿಶ್ವದ ಪ್ರಯೋಜನಕ್ಕಾಗಿ ತಮ್ಮ ಸಂಬಂಧಗಳನ್ನು ಬಲಪಡಿಸುವ ಅಗತ್ಯವನ್ನು ಮನಗಂಡು ಭಾರತದಲ್ಲಿ ಸಂಯುಕ್ತರಂಗ ಅಧಿಕಾರದಲ್ಲಿದ್ದಾಗ ಈ ಪ್ರಕ್ರಿಯೆ ಇನ್ನೂ ಒಂದು ಹೆಜ್ಜೆ ಮುಂದಿದ್ದಿತು. ಚೀನಾದೊಂದಿಗೆ ಮಾತುಕತೆಯಾಗಿ ಉತ್ತರದ ಗಡಿಗಳಲ್ಲಿ ನಾವು ಸುರಿಯಬೇಕಾದ್ದ 4000 ಕೋಟಿ ರೂಗಳನ್ನು ಉಳಿಸಲು ಸಾಧ್ಯವಾಯಿತು. ಶಾಂತಿ, ಅಭಿವೃದ್ಧಿಗಾಗಿ ಈ ಸಂಬಂಧಗಳು ಇನ್ನಷ್ಟು ಗಾಢವಾಗಬೇಕು ಎಂದು ಇಡೀ ವಿಶ್ವ ಜನಾಭಿಪ್ರಾಯವೂ ಬಯಸಿತು.


ಆದರೆ ಅಮೇರಿಕನ್ ಸಾಮ್ರಾಜ್ಯಶಾಹಿಗೆ ಮಾತ್ರ ಇದು ಹಿಡಿಸಲಿಲ್ಲ. ಇದು ತನ್ನ ಜಾಗತಿಕ ಯಜಮಾನಿಕೆಗೆ ಬೆದರಿಕೆ ಎಂದು ಅಂದುಕೊಂಡಿತು. ಆದ್ದರಿಂದ ನವದೆಹಲಿಯಲ್ಲಿ ತಮಗೆ ಆಪ್ತವಾದ ಒಂದು ಸರಕಾರ ಇರಬೇಕು ಎಂದು ಅವರ ಬಯಕೆಯಾಗಿತ್ತು. ಬಿಜೆಪಿ ನೇತೃತ್ವದ ಸರಕಾರ ಅವರ ಆ ಬಯಕೆಯನ್ನು ಈಡೇರಿಸುತ್ತಿದೆ. ಭಾರತ ಸರಕಾರ ಈ ಬೇಟಿಯ ಬಗ್ಗೆ ಭಾವೋನ್ಮಾದವನ್ನು ಎಬ್ಬಿಸಲು ಪ್ರಯತ್ನಿಸುವ ರೀತಿ ಇದನ್ನು ಸಾಬೀತು ಮಾಡಿದೆ. ಅಂದರೆ ಮಾಸ್ಕೋ-ಬೀಜಿಂಗ್-ನವದೆಹಲಿ ಮೈತ್ರಿ ಮೂಡಿಬರುವುದನ್ನು ಅದು ಸಾಮಾಜಿಕವಾಗಿ ಎದುರಾಗಿ ಬಲಿಷ್ಟ ಶಕ್ತಿಯಾಗುವುದನ್ನು ತಡೆಯುವುದು ಈ ಭೇಟಿಯ ಒಂದು ಅಘೋಷಿತ ಉದ್ದೇಶವಾಗಿತ್ತು. ಭಾರತ ಸರಕಾರ ದೇಶದ ಅಲಿಪ್ತ ನೀತಿ, ಸ್ವಾತಂತ್ರ್ಯ, ಶಾಂತಿ, ನಿಶ್ಶಸ್ತ್ರೀಕರಣದ ವಿದೇಶಾಂಗ ಧೋರಣೆಗಳ ವಿರುದ್ಧ ವಿಷಕಾರಿದ್ದು ದಕ್ಷಿಣ ಏಶ್ಯಾದಲ್ಲಿ ಸಾಮ್ರಾಜ್ಯಶಾಹಿಗಳಿಗೆ ಅಪ್ಯಾಯಮಾನವೆನಿಸಿತು.

ಕಾಶ್ಮೀರ ಕುರಿತು ಕ್ಲಿಂಟನ್

ಇಂದು ನವದೆಹಲಿಯಲ್ಲಿ ಕೂತಿರುವ ಸರಕಾರ ಕ್ಲಿಂಟನ್ ಮುಂದೆ ಇಟ್ಟ ಬೇಡಿಕೆ ಒಂದೇ- ಆತ ಪಾಕಿಸ್ತಾನಕ್ಕೆ ಹೋಗುವ ಬಗ್ಗೆ ಯೋಚನೆ ಮಾಡಬಾರದು! ಇದೊಂದು ಹಾಸ್ಯಾಸ್ಪದ ಬೇಡಿಕೆ. ಅದೇನೇ ಇರಲಿ ಕ್ಲಿಂಟನ್‌ಗಂತೂ ಭಾರತ ಸರಕಾರದ ಮೊರೆ ಕೇಳಲಿಲ್ಲ. ಹಿಂದಿರುಗುವಾಗ ಪಾಕಿಸ್ತಾನದಲ್ಲಿ ಸ್ವಲ್ಪ ಕಾಲ ಇಳಿದು ಹೋದರು.

ಇತ್ತ ಭಾರತದಲ್ಲಿದ್ದಾಗ ಕ್ಲಿಂಟನ್ ಕಾಶ್ಮೀರದ ಬಗ್ಗೆ ಜಾಣ್ಮೆಯಿಂದ, ಭಾರತೀಯರ ಭಾವನೆಗಳಿಗೆ ಘಾಸಿಯಾಗದಂತೆ ಮಾತನಾಡಿದರು. ಕಾಶ್ಮೀರ ವ್ಯವಹಾರಗಳಲ್ಲಿ ಮೂಗುತೂರಿಸಿಲ್ಲ ಎಂದು ಸ್ಪಷ್ಟಪಡಿಸಿದರು. ಆದರೆ "ವೈಯಕ್ತಿಕ ಆಸಕ್ತಿ" ಘೋಷಿಸುವುದಾಗಿ ನವಾಜ್ ಷರೀಫರಿಗೆ ಹೇಳಿದ್ದೇಕೆ ಎಂದು ಸ್ಪಷ್ಟಪಡಿಸಲಿಲ್ಲ. ಭಾರತ ಸರಕಾರಕ್ಕೆ ಇವರಿಂದ ತೃಪ್ತಿಯಾಗಿರಬಹುದು. ಆದರೆ ಜನ ಇದನ್ನು ನಂಬಲು ಸಿದ್ಧವಿಲ್ಲ. ಪತ್ರಿಕಾ ವರದಿಗಳನ್ನು ನೋಡಿದರೆ ಅಮೇರಿಕನ್ ಚಿಂತಕರ ವರದಿಗಳಲ್ಲಿ ಕಾಶ್ಮೀರ ವಿವಾದದ "ಪರಿಹಾರ"ದ ರೂಪುರೇಷೆ ತಯಾರಾಗುತ್ತಲೇ ಇದೆ. ಅಮೇರಿಕನ್ ಆಳುವ ವಲಯಗಳು (ಮೆಡಲಿನ್ ಅಲ್‌ಬ್ರೈಟ್ ಕೂಡಾ ಸೇರಿ) ಕಾಶ್ಮೀರ ವಿಶ್ವದ ಸ್ಫೋಟಕ ತಾಣಗಳಲ್ಲಿ ಒಂದು ಎಂದು ವರ್ಣಿಸುತ್ತಲೇ ಇವೆ, ಅಂದರೆ ಅಮೇರಿಕಾದ ಪಾತ್ರ ಅಗತ್ಯ ಎಂದು ಹೇಳುತ್ತಲೇ ಇದೆ. ಈ ವರ್ಷದ ಕೊನೆಗೆ ಕ್ಲಿಂಟನ್ ಅಧಿಕಾರ ಬಿಟ್ಟ ನಂತರ ಹೊಸಬರು ಬಂದಾಗ ಅಮೇರಿಕನ್ ಧೋರಣೆ ಏನಾಗಬಹುದು ಎಂಬ ಬಗ್ಗೆಯೂ ಖಚಿತ ಭರವಸೆಯೇನೂ ಇಲ್ಲ.





ಆದರೆ ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಸಂಗತಿಯೊಂದಿದೆ ಕಾಶ್ಮೀರ ಭಾರತದ ಅವಿಭಾಜ್ಯ ಅಂಗ ಎಂದು ಕ್ಲಿಂಟನ್ ವರ್ಣಿಸಲೇ ಇಲ್ಲ! ಕಾಶ್ಮೀರಿಗಳೇ ಸ್ವತಃ ಭಾರತದೊಡನೆ ಸೇರಿಕೊಳ್ಳಲು ನಿರ್ಧರಿಸಿದರು, ಪಾಕಿಸ್ತಾನಿಗಳು ಶಸ್ತ್ರಾಸ್ತ್ರ ಕೊಟ್ಟು ಕಳಿಸಿದ ಧಾಳಿಕೋರರನ್ನು, ಕಾಶ್ಮೀರಿ ಜನಗಳು ಕೈಯಲ್ಲಿ ಬಂದೂಕು ಹಿಡಿದು ಹಿಂದಕ್ಕಟ್ಟಿದರು ಎಂಬ ಸಂಗತಿ ವಿಶ್ವಕ್ಕೆ ಗೊತ್ತು. ಆದರೆ ಕ್ಲಿಂಟನ್ ಈ ಬಗ್ಗೆ ಏನೂ ಗೊತ್ತಿಲ್ಲದವರಂತೆ ನಟಿಸಿದರು. ಕಾಶ್ಮೀರದ ಪ್ರಶ್ನೆಯನ್ನು ಪರಿಹರಿಸುವಲ್ಲಿ ತನ್ನ ಪಾತ್ರದ ಬಗ್ಗೆ ತಾನೇ ಬೆನ್ನು ತಟ್ಟಿಕೊಂಡ ರೀತಿ ನೋಡಿದರೆ ಈ ಪ್ರದೇಶದಲ್ಲಿ ಮಧ್ಯ ಪ್ರವೇಶಿಸುವ ಆತನ ಆಕಾಂಕ್ಷೆ ಎದ್ದು ಕಾಣುತ್ತಿತ್ತು.

ಅಮೇರಿಕನ್ ಮಧ್ಯಪ್ರವೇಶ - ಒಂದು ಉದಾಹರಣೆ.

ಇಲ್ಲಿ ಕ್ಲಿಂಟನ್ ಆಡಳಿತ ಮಧ್ಯಪೂರ್ವದ ವ್ಯವಹಾರಗಳಲ್ಲಿ ಹೇಗೆ ಮಧ್ಯಪ್ರವೇಶಿಸಿತು ಎಂಬುದನ್ನು ನೆನಪಿಸಿಕೊಳ್ಳಬೇಕು. 1947ರಲ್ಲಿ ವಿಶ್ವಸಂಸ್ಥೆ ಒಂದು ಯಹೂದಿ ಮತ್ತು ಒಂದು ಪ್ಯಾಲೆಸ್ಟೇನ್ ಪ್ರಭುತ್ವ ರಚಿಸಬೇಕು ಎಂದು ಆದೇಶ ನೀಡಿದ್ದರೂ ಅದನ್ನು ಉಲ್ಲಂಘಿಸಿದವರು ಅಮೇರಿಕಾ ಮತ್ತು ಬ್ರಿಟನ್ನಿನವರು ಅವರು ಇಸ್ರೇಲಿನ ಝಿಯೋನಿಸ್ಟರಿಗೆ ಕುಮ್ಮಕ್ಕು ನೀಡಿ ಇಡೀ ಪ್ಯಾಲೆಸ್ತೈನ್‌ನನ್ನು ಆಕ್ರಮಿಸಿಕೊಂಡು ಆ ಜನಗಳನ್ನು ತಮ್ಮ ದೇಶದಲ್ಲೇ ನಿರಾಶ್ರಿತರನ್ನಾಗಿಸಿದರು. ಇನ್ನೊಂದು ಕಡೆ ಬಿಸ್ಲೋ ಮಾತುಕತೆಯಲ್ಲಿ ತಮ್ಮದೇ ಪ್ರಭುತ್ವಬೇಕೆಂಬ ಬೇಡಿಕೆಯನ್ನು ಪ್ಯಾಲೆಸ್ತೈನಿಯನ್ನರು ಬಿಟ್ಟುಕೊಡುವಂತೆ ಒತ್ತಡ ಹಾಕಿದರು. ಪ್ಯಾಲೆಸ್ತೈನಿಯನ್ನರು ತಮ್ಮ ಬೇಡಿಕೆಗಳನ್ನು ಗಮನಾರ್ಹವಾಗಿ ಇಳಿಸಿದರೂ ಇಸ್ರೇಲ್ ಈಗಲೂ ಈಜಿಪ್ಟ್, ಸಿರಿಯಾದಲ್ಲಿ ದಕ್ಷಿಣ ಲೆಬನಾನ್‌ಗಳಲ್ಲಿ ತಾನು ಆಕ್ರಮಿಸಿದ ಪ್ರದೇಶಗಳನ್ನು ತೆರವು ಮಾಡಲು ಸಿದ್ಧವಿಲ್ಲ. ಸರಳವಾಗಿ ಹೇಳುವುದಾದರೆ ಮಧ್ಯ-ಪೂರ್ವದ ಪ್ರಶ್ನೆಯಲ್ಲಿ ಸಾಮ್ರಾಜ್ಯಶಾಹಿಗಳು ಮಧ್ಯಪ್ರವೇಶಿಸಿದ್ದು ಆ ವಿವಾದದ ನ್ಯಾಯಯುತ ಪರಿಹಾರಕ್ಕಾಗಿ ಅಲ್ಲ, ಬದಲಾಗಿ, ಆ ಪ್ರದೇಶದಲ್ಲಿ ತಮ್ಮ ಹಿತಾಸಕ್ತಿ ಈಡೇರಿಸಿಕೊಳ್ಳಲಿಕ್ಕಾಗಿ ಇಂತಹ ಅಮೇರಿಕನ್ ಸಾಮ್ರಾಜ್ಯಶಾಹಿಗಳು ಕಾಶ್ಮೀರದಲ್ಲಿ ಒಂದು ನ್ಯಾಯಯುತ ಪಾತ್ರವಹಿಸುತ್ತಾರೆ ಎಂದು ನಿರೀಕ್ಷಿಸಲು ಸಾಧ್ಯವೇ?

ಕ್ಲಿಂಟನ್ ಭಾರತ ಸರಕಾರಕ್ಕೆ ನೀಡಿದ ಸಲಹೆಯೇನು ಎಂದು ನೆನಪಿಸಿಕೊಳ್ಳೋಣ. ನಿಯಂತ್ರಣ ರೇಖೆಯನ್ನು ಗೌರವಿಸಬೇಕಂತೆ. ಇದರ ಅರ್ಥವೇನು? ಈ ರೇಖೆಯನ್ನು ಶಾಶ್ವತವೆಂದು ಪರಿಗಣಿಸಬೇಕು, ಪಾಕ್ ಆಕ್ರಮಿತ ಕಾಶ್ಮೀರ ಆ ದೇಶದ ಭಾಗ ಎಂದು ಒಪ್ಪಬೇಕು ಎಂದೇ ಅಲ್ಲವೇ? ಮತ್ತೆ-ಮತ್ತೆ ಈ ನಿಯಂತ್ರಣ ರೇಖೆಯನ್ನು ಗೌರವಿಸುವ ಮಾತಿನ ಹಿಂದೆ ಅಮೇರಿಕಾದ ದೀರ್ಘ ಕಾಲದ ಆಶಯವಿದೆ. ಅದೆಂದರೆ ಕಾಶ್ಮೀರವನ್ನು 'ಜನಮತಗಣನೆ'ಯ ಮೂಲಕ ಒಂದು ಸ್ವತಂತ್ರ ದೇಶವಾಗಿ ಪರಿವರ್ತಿಸುವುದು ಅಧಿಕ ಜನ ಭಾರತ ಅಥವಾ ಪಾಕಿಸ್ತಾನ ಸೇರುತ್ತಿರೋ, ಸ್ವಾತಂತ್ರವಾಗಿರುತ್ತಿರೋ ಎಂದು ಕೇಳಿದಾಗ ಸ್ವತಂತ್ರವಾಗುವುದನ್ನು ಆರಿಸಿಕೊಳ್ಳುತ್ತಾರೆ ಎಂಬುದು ಅಮೇರಿಕನ್ನರ ಲೆಕ್ಕಾಚಾರ ಹಾಗಾದಾಗ ಕಾಶ್ಮೀರದಲ್ಲಿ ಕಾಲೂರಲು ತಮಗೆ ಅವಕಾಶವಾಗುತ್ತದೆ ಎಂಬುದೂ ಅವರ ಲೆಕ್ಕಾಚಾರದ ಭಾಗ ಕಾಶ್ಮೀರದ ಭೌಗೋಳಿಕ ಸನ್ನಿವೇಶವನ್ನು ನೆನಪಿಸಿಕೊಳ್ಳಿ. ಇಲ್ಲಿಯ ಭಾರತ, ಚೀನಾ, ಪಾಕಿಸ್ತಾನ, ಇರಾನ್, ಅಫಘಾನಿಸ್ತಾನ, ಮಧ್ಯಏಶ್ಯಾದ ಗಣತಂತ್ರಗಳಲ್ಲಿ ಮಾತ್ರವಲ್ಲ ರಶ್ಯನ್ ಒಕ್ಕೂಟದ ಮೇಲೂ ಸಾಮರಿಕ ಮಹತ್ವದ ಪ್ರಯೋಜನ ಗಿಟ್ಟಿಸಬಹುದು ಎಂಬುದು ಅಮೇರಿಕನ್ ಸಾಮ್ರಾಜ್ಯಶಾಹಿಗಳ ಲೆಕ್ಕಾಚಾರ. ಭಾರತ ಕಾಶ್ಮೀರವನ್ನು ಬಿಟ್ಟುಕೊಡಲು ಸಾಧ್ಯವಿಲ್ಲ ಎಂಬುದು ಕ್ಲಿಂಟನ್‌ಗೆ ಚೆನ್ನಾಗಿ ಗೊತ್ತು. ಪಾಕಿಸ್ತಾನ ಬಲಪ್ರಯೋಗ ಮಾಡಿ ಅದನ್ನು ಕಿತ್ತುಕೊಳ್ಳಲು ಸಾಧ್ಯವಿಲ್ಲ ಎಂದು ಆತನಿಗೆ ಗೊತ್ತು. ಸಹಜವಾಗಿ ಬಾಯಲ್ಲಿ ಮಧ್ಯಪ್ರವೇಶಿಸುವುದಿಲ್ಲ ಎಂದು ಏನೇ ಹೇಳಿಕೊಂಡರೂ ಈಗಲೂ ತನಗೊಂದು ಪಾತ್ರ ವಹಿಸಲು ಅವಕಾಶವಿದೆ, ಇದರಿಂದ ತಾನು ದೀರ್ಘಕಾಲದ ಪ್ರಯೋಜನ ಪಡೆಯಬಹುದು ಎಂಬ ನಿರೀಕ್ಷೆ ಅಮೇರಿಕಾಕ್ಕಿದೆ. ಇದನ್ನು ಭಾರತದ ಜನತೆ ಸಾದ ಗಮನದಲ್ಲಿಟ್ಟುಕೊಳ್ಳಬೇಕು.

ಪರಮಾಣು ಶಸ್ತ್ರಗಳ ಬಗ್ಗೆ ಸಂಯಮದಿಂದಿರಿ ಎಂದು ಕ್ಲಿಂಟನ್ ಸಲಹೆಯ ಮೇಲ್ನೋಟಕ್ಕೆ ಮುಗ್ದವಾಗಿ ಕಂಡರೂ ಸಂಶಯಾತೀತವೇನಲ್ಲ. ಇನ್ನು ಮುಂದೆ ಪರಮಾಣು ಪರೀಕ್ಷೆ ನಡೆಸುವುದಿಲ್ಲ ಎಂದು ಅಮೇರಿಕಾ ಭಾರತ ಸರಕಾರದಿಂದ ಭರವಸೆ ಪಡೆದಿದೆ, ಆದರೆ ತಾನು ಅಂತಹ ಭರವಸೆಯನ್ನೇನೂ ಕೊಟ್ಟಿಲ್ಲ ಎಂದು ಬಿಜೆಪಿ ಸರ್ಕಾರ ಸುಳ್ಳು ಹೇಳುತ್ತಿದೆ. ನಿರೀಕ್ಷಿತ ಸಮಯದೊಳಗೆ ಎಲ್ಲಾ ಪರಮಾಣು ಶಸ್ತ್ರಗಳನ್ನು ನಿರ್ಮೂಲನ ಮಾಡಲು ಒಮ್ಮತ ಬಗ್ಗೆ ಆತ ಏನೂ ಹೇಳಲಿಲ್ಲ. ಕಾಶ್ಮೀರದ ಪ್ರಶ್ನೆಯ ಮೇಲೆ ದಕ್ಷಿಣ ಏಶ್ಯಾದಲ್ಲಿ ಪರಮಾಣು ಯುದ್ಧ ಎದ್ದು ಬರುವ ಅಪಾಯ ಸದಾ ಇದೆ. ಎಂಬುದೇನೊ ನಿಜ. ಎರಡೂ ದೇಶಗಳು ಅತ್ಯಂತ ಸಂಯಮದಿಂದ ವರ್ತಿಸಬೇಕು, ದೇಶಭಕ್ತಿಯ ಹೆಸರಲ್ಲಿ ತಮ್ಮಲ್ಲಿನ ಸಂಕುಚಿತ ದೃಷ್ಟಿಯವರು ಮನೆ ಮಾರಿ ಹೋಗದಂತೆ ನೋಡಿಕೊಳ್ಳಬೇಕಾದ್ದೂ ಅಗತ್ಯ. ಆದರೆ ಇದರಿಂದ ಅಮೇರಿಕನ್ ಪರಮಾಣು ಶಸ್ತ್ರಾಸ್ತ್ರಗಳು ಶಾಂತಿಪ್ರಿಯ ದೇಶಗಳಿಗೆ ಒಡ್ಡಿರುವ ಅಪಾಯ ಎಳ್ಳಷ್ಟೂ ಕಡಿಮೆಯಾಗುವುದಿಲ್ಲ. ಹತ್ತಿರದ ಡಿಗೋಗಾರ್ಸಿಯಾದಲ್ಲಿ ಅಮೇರಿಕನ್ ಪರಮಾಣು ಶಸ್ತ್ರಾಸ್ತ್ರಗಳನ್ನು ಸೇರಿಸಿಡಲಾಗಿದೆ ಎಂಬುದನ್ನು ನಾವು ಭಾರತೀಯರು ಮರೆಯಲು ಸಾಧ್ಯವೇ?

ಪಾಕಿಸ್ತಾನದಲ್ಲಿ ಕ್ಲಿಂಟನ್

ಪಾಕಿಸ್ತಾನದಲ್ಲಿ ಪ್ರಯಾಣದ ವೇಳೆ ಕ್ಲಿಂಟನ್ ಕಾಶ್ಮೀರ ವಿವಾದ ಮತ್ತಿತರ ಭಾರತದೊಂದಿಗಿನ ದ್ವಿಪಕ್ಷೀಯ ವಿವಾದಗಳನ್ನು ಮಾತುಕತೆಗಳ ಮೂಲಕ ಬಗೆಹರಿಸಿಕೊಳ್ಳಲು ಪ್ರಯತ್ನಿಸಬೇಕು ಎಂದು ಮಿಲಿಟರಿ ಸರ್ವಾಧಿಕಾರಿ ಜನರಲ್ ಪರ್ವೆಝ್ ಮುಶರ್ರಫ್‌ಗೆ ಬಿಂಬಿಸಲು ಪ್ರಯತ್ನಿಸಿದರು. ಆದರೂ ಕಾಶ್ಮೀರ ಕುರಿತ ತಮ್ಮ ಬೇಡಿಕೆ ಈಡೇರುವವರೆಗೆ ಮಾತುಕತೆ ಸಾಧ್ಯವಿಲ್ಲ ಎಂಬ ಪಾಕಿಸ್ತಾನೀ ನಿಲುವಿನ ಬಗ್ಗೆ ಅವರು ಮೌನವಾಗಿಯೇ ಇದ್ದರು. ನಿಜ ಸಂಗತಿಯೆಂದರೆ ಪಾಕಿಸ್ತಾನದ ಎಲ್ಲಾ ಪ್ರಮುಖ ಪಕ್ಷಗಳೂ ಈ ನಿಲುವನ್ನು ಬೆಂಬಲಿಸುತ್ತಿವೆ. ಇಲ್ಲವಾದರೆ, ಕಾಶ್ಮೀರದ ಬಗ್ಗೆ ತರ್ಕಸಂಗತವಾಗಿ ಮಾತನಾಡಲಾರಂಭಿಸಿದರೆ ತಮ್ಮನ್ನು ತಿರಸ್ಕರಿಸಲಾಗುತ್ತದೆ ಎಂದವರು ಭಾವಿಸುತ್ತಾರೆ. ಆದ್ದರಿಂದಲೇ ಈ ಪ್ರಶ್ನೆಯ ಮೇಲೆ ಭಾವೋದ್ರೇಕ ಎಬ್ಬಿಸಲು ಪಾಕಿಸ್ತಾನದ ಎಲ್ಲಾ ಪ್ರಮುಖ ಪಕ್ಷಗಳು ಪ್ರಯತ್ನಿಸುತ್ತವೆ.

ಮುಶರ್ರಫ್ ಅಂತೂ 'ಜೆಹಾದ್' (ಧರ್ಮಯುದ್ಧ) ಮತ್ತು ಭಯೋತ್ಪಾದನೆಯ ನಡುವೆ ಭಿನ್ನತೆ ಕಾಣಲು ಪ್ರಯತ್ನಿಸುತ್ತಿದ್ದಾರೆ. ತಾನು ಕಾಶ್ಮೀರದಲ್ಲಿ ಜೆಹಾದ್ ಹೋರಾಟ ನಡೆಸಿದ್ದೇನೆ ಎನ್ನುತ್ತಾರೆ. ಈ ಮೂಲಕ ಅವರು ನಿಯಂತ್ರಣ ರೇಖೆಯಲ್ಲಿ ಹಾಗೂ ಕಾಶ್ಮೀರದ ಒಳಗೆ ಮುಂದುವರಿಯುತ್ತಿರುವ ಭಯೋತ್ಪಾದಕ ಕೃತ್ಯಗಳನ್ನು ಮರೆಮಾಚುತ್ತಿದ್ದಾರೆ.

ಸ್ಥಳೀಯ ಚುನಾವಣೆಗಳನ್ನು ನಡೆಸಲಾಗುವುದೆಂದು ಜನರಲ್ ಮುಶರ್ರಫ್‌ರ ಪ್ರಕಟಣೆಯನ್ನು ಕ್ಲಿಂಟನ್ ಸ್ವಾಗತಿಸಿದರು. ಆದರೆ ಇನ್ನುಮುಂದೆ ಹೋಗಿ ದೇಶದಲ್ಲಿ ಪ್ರಜಾಪ್ರಭುತ್ವವನ್ನು ಮರುಸ್ಥಾಪಿಸಬೇಕು ಎಂದೇನೂ ಮುಶ[illegible]ಗೆ ಹೇಳಲಿಲ್ಲ. ಈ ವಿಷಯದಲ್ಲಿ ವಿಶ್ವಾಸಯುತ ಮಾನವ ಹಕ್ಕುಗಳ ಪ್ರತಿಪಾಲಕ ಎಂದು ಹೇಳಿಕೊಳ್ಳುವ ಕ್ಲಿಂಟನ್ ಪಾಕಿಸ್ತಾನದ ಮಾನವ ಹಕ್ಕು ಆಯೋಗವನ್ನು ನೇರವಾಗಿಯೂ ಮಾತನಾಡಲಿಲ್ಲ. ಅದು ರಾಷ್ಟ್ರೀಯ

ಗ್ರಾಮ-ನಗರ, ಜಿಲ್ಲೆಗಳ ನಡುವೆ ಬಡತನದಲ್ಲೂ ವೈಷಮ್ಯ

ಮೂವರಲ್ಲಿ ಒಬ್ಬ ಕನ್ನಡಿಗ ಬಡವ



ಬಜೆಟ್ ಪ್ರಸ್ತಾಪಗಳು, ಸರ್ಕಾರದ ಎಲ್ಲಾ ಚಟುವಟಿಕೆಗಳ ಉದ್ದೇಶ ಬೆಳವಣಿಗೆ ಸಾಧಿಸುವುದು. ಬೆಳವಣಿಗೆಯ ಉದ್ದೇಶ ಎಲ್ಲಾ ಜನರ ಜೀವನಮಟ್ಟ ಏರಿಸುವುದು. ಎಲ್ಲಾ ಜನರ ಜೀವನ ಮಟ್ಟ ಏರಿಸುವುದು ಎಂದಾಗ ಜೀವನಮಟ್ಟದಲ್ಲಿ - ಆದಾಯದಲ್ಲಿ ಅಸಮಾನತೆ ನಿವಾರಿಸುವುದು, ಅದರಲ್ಲೂ ಬಡತನ ನಿವಾರಿಸುವುದು ಎಲ್ಲಾ ಬೆಳವಣಿಗೆ ಯೋಜನೆಗಳ ಮುಖ್ಯ ಕೇಂದ್ರ ಬಿಂದು ಆಗಬೇಕು. ಆದರೆ ಬಡತನ ನಿವಾರಣೆಯ ಉದ್ದೇಶ ಜಾಗತೀಕರಣದ ಭರದಲ್ಲಿ ಹಿಂದೆ ಸರಿಯುತ್ತದೆ.

ಬಡತನ ಎಂದರೇನು? ಅದನ್ನು ಅಳೆಯುದು ಹೇಗೆ? ಕರ್ನಾಟಕದ 'ಮಾನವ ಅಭಿವೃದ್ಧಿ ವರದಿ' ಕಂಡಂತೆ 90 ರ ದಶಕದ ಪೂರ್ವಾರ್ಧದಲ್ಲಿದ್ದಂತೆ ಕರ್ನಾಟಕದಲ್ಲಿ ಬಡತನ ಎಷ್ಟಿದೆ? ಗ್ರಾಮೀಣ - ನಗರಗಳಲ್ಲಿ, ಜಿಲ್ಲಾವಾರಾಗಿ ಬಡತನದ ಚಿತ್ರ ಏನು? ಆದಾಯದಲ್ಲಿ ಅಸಮಾನತೆಗೂ ಬೆಳವಣಿಗೆಗೂ ಬಡತನಕ್ಕೂ ಏನಾದರೂ ಸಂಬಂಧವಿದೆಯೆ? 'ಕರ್ನಾಟಕ ಮಾನವ ಅಭಿವೃದ್ಧಿ ವರದಿ' ಯ ಅಂಕಿಅಂಶಗಳ ಆಧಾರದ ಮೇಲೆ ಈ ಬಗ್ಗೆ ವಿವರಿಸುವ ಲೇಖನ

ಶರತ್ ಚಂದ್ರ

ಬಡತನವನ್ನು ಅಳೆಯಲು ಹಲವು ಮಾಪಕಗಳನ್ನು ಅಭಿವೃದ್ಧಿಪಡಿಸಲಾಗಿದೆ. ಆದಾಯ ಮತ್ತು ಸರಕು/ಸೇವೆಗಳ ಬಳಕೆ ಇವೆರಡರ ಆಧಾರದ ಮೇಲೆ ಹೆಚ್ಚಿನ ಬಡತನದ ಮಾಪಕಗಳು ರಚಿತವಾಗಿವೆ. ಮಾನವನ ಕನಿಷ್ಠ ಅವಶ್ಯಕತೆಗಳ (ಒಂದು ದೇಶದಲ್ಲಿ, ಪ್ರದೇಶದಲ್ಲಿ) ದೊರಕುವಿಕೆಯ ಆಧಾರದ ಮೇಲೆ ಹೆಚ್ಚಾಗಿ , ಬಡತನವನ್ನು ಅಳೆಯಲಾಗುತ್ತದೆ. ಆಹಾರ, ಬಟ್ಟೆ, ಮನೆ ಅತ್ಯಂತ ಕನಿಷ್ಠ ಅವಶ್ಯಕತೆಗಳು ಎಂದು ಪರಿಗಣಿಸಲ್ಪಡುತ್ತದೆ. ಶಿಕ್ಷಣ, ಆರೋಗ್ಯ ಸೇವೆಗಳು ಅಷ್ಟೇ ಮೂಲಭೂತ ಅವಶ್ಯಕತೆ ಗಳಾದರೂ, ಹೆಚ್ಚಿನ ಬಡತನ ಮಾಪಕಗಳು ಇನ್ನೂ ಅವನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಕನಿಷ್ಠ ಅವಶ್ಯಕತೆಗಳಲ್ಲೂ ಬರಿಯ ಆಹಾರವನ್ನು ಉಪಯೋಗ ಬಳಸುವುದು ಕನಿಷ್ಠ ಆಹಾರದ ಅಗತ್ಯ ಕೊಳ್ಳಲು ಬೇಕಾದ ಆದಾಯದ ಆಧಾರದ ಮೇಲೆ ಬಡತನದ ಅಳೆಯುವಿಕೆಯನ್ನು



ಸರಾಸರಿ ಭಾರತೀಯರಿಗೆ ಗ್ರಾಮೀಣ ಪ್ರದೇಶದಲ್ಲಿ 2435 ಕ್ಯಾಲೋರಿ(ಇದು ಆಹಾರದ ಪೌಷ್ಠಿಕಾಂಶ ಅಳೆಯುವ ಮಾನದಂಡ) ಕನಿಷ್ಠ ಆಹಾರದ ಅವಶ್ಯಕತೆ, ನಗರ ಪ್ರದೇಶದಲ್ಲಿ ಇದು 2095 ಕ್ಯಾಲೋರಿ ಇದನ್ನು ಕೊಳ್ಳಲು ಬೇಕಾದ ಆದಾಯ 'ಬಡತನದ ರೇಖೆ' ಎಂದು ಪರಿಗಣಿಸಲ್ಪಡುತ್ತದೆ. 1993-94 ರಲ್ಲಿ ಕರ್ನಾಟಕದಲ್ಲಿ ಈ ರೇಖೆ ಗ್ರಾಮೀಣ ಪ್ರದೇಶದಲ್ಲಿ ಸುಮಾರು 187 ರೂ. ನಗರ ಪ್ರದೇಶದಲ್ಲಿ 303 ರೂ. ಪ್ರತಿ ಜಿಲ್ಲೆಯಲ್ಲಿ ಅಲ್ಲಿಯ ಆಹಾರ ಧಾನ್ಯಗಳ ಬೆಲೆಗಳ ಆಧಾರದ ಮೇಲೆ ಈ ರೇಖೆಯನ್ನು ನಿಗದಿಗೊಳಿಸಲಾಗಿದೆ.

ಇದರ ಆಧಾರದ ಮೇಲೆ 'ಬಡವರ' ಪ್ರಮಾಣವನ್ನು ಅಳೆಯ ಲಾಗುತ್ತದೆ. ಇಂತಹ ಬಡತನದ ಅಳೆಯುವಿಕೆ ಅತ್ಯಂತ ಸಡಿಲವಾದದ್ದು. ಮಾನವನ ಕನಿಷ್ಠ ಅವಶ್ಯಕತೆಯಾದ ಆಹಾರದ ಕನಿಷ್ಠ ಪ್ರಮಾಣವನ್ನು ಮಾತ್ರ ಇದು ಗಣನೆಗೆ ತೆಗೆದು ಕೊಳ್ಳುತ್ತದೆ. ಈ ರೀತಿ ಅಳೆದ ಬಡತನದ ಪ್ರಮಾಣವೇ ಅಗಾಧವಾಗಿದೆ. ಆಹಾರ, ಬಟ್ಟೆ, ಮನೆ, ಶಿಕ್ಷಣ, ಆರೋಗ್ಯ ಸೇವೆಯ ಕನಿಷ್ಠ ಅಗತ್ಯಗಳನ್ನು ತೆಗೆದುಕೊಂಡರೆ ಬಡವರ ಸಂಖ್ಯೆ ಇನ್ನಷ್ಟು ಹೆಚ್ಚಾದೀತು. ವಿಶ್ವಸಂಸ್ಥೆ ಈ ರೀತಿ ಬಡತನದ ಹೊಸ ಮಾಪಕಗಳನ್ನು ರಚಿಸಿದೆ. ಆದರೆ ಅವರ ಆಧಾರದ ಮೇಲೆ ನಮ್ಮ ರಾಜ್ಯದಲ್ಲಿ /ದೇಶದಲ್ಲಿ ಬಡತನ ಇನ್ನೂ ಅಳೆಯಲಾಗುತ್ತಿಲ್ಲ.

ಮೂವರಲ್ಲಿ ಒಬ್ಬ ಕನ್ನಡಿಗ ಬಡವ

1998-94 ರ ಅಂಕೆಸಂಖ್ಯೆ ಪ್ರಕಾರ ಕರ್ನಾಟಕದಲ್ಲಿ ಬಡತನದ ರೇಖೆಯ (ಅಂದರೆ ಮೇಲೆ ಹೇಳಿದ ಕನಿಷ್ಠ ಆಹಾರ ಕೊಳ್ಳಲು ಬೇಕಾದ ಕನಿಷ್ಠ ಆದಾಯ ಇಲ್ಲದವರಲ್ಲಿ) ಕೆಳಗೆ ಇರುವವರು ಶೇಕಡ 33. ಎರಡು ದಶಕಗಳಲ್ಲಿ (1973-74 ರಿಂದ 1993-94 ರವರೆಗೆ) ಬಡತನ ಕಡಿಮೆಯಾಗಿದೆಯೇನೋ ನಿಜ (ಶೇಕಡಾ 54 ರಿಂದ 33 ಕ್ಕೆ ಇಳಿದಿದೆ). ಆದರೂ ಮೂವರಲ್ಲಿ ಒಬ್ಬ ಕನ್ನಡಿಗ ಬಡವ, ಎನ್ನುವುದು ನಮ್ಮ ಸರ್ಕಾರದ ನಮ್ಮೆಲ್ಲರ ನಿದ್ದೆ ಗೆಡಿಸಬೇಕು.

ಬಡತನ ಎಲ್ಲಾ ಕಡೆಗೂ ಸಮವಾಗಿಲ್ಲ ಎಂದು ಎಲ್ಲರಿಗೂ ಗೊತ್ತು. ಭೂಹೀನ ಕೃಷಿ ಕಾರ್ಮಿಕರಲ್ಲಿ ಶೇಕಡಾ 68 ಜನ ಬಡವರು: ದಲಿತ, ಆದಿವಾಸಿಗಳಲ್ಲಿ ಶೇಕಡಾ 51 ಜನ ಬಡವರು. ಅನಕ್ಷರಸ್ಥ ಕುಟುಂಬಗಳಲ್ಲಿ ಶೇಕಡ 48 ಜನ ಬಡವರು. ಗ್ರಾಮೀಣ ಪ್ರದೇಶದಲ್ಲಿ ಹೆಚ್ಚು ಬಡತನ ಇದೆ ಎಂಬ ಸಾಮಾನ್ಯ ಭಾವನೆ. ಆದರೆ ಅಂಕೆ ಸಂಖ್ಯೆಗಳ ಪ್ರಕಾರ ನಗರ ಪ್ರದೇಶದಲ್ಲಿ ಬಡತನ ಹೆಚ್ಚು. ಗ್ರಾಮೀಣ ಪ್ರದೇಶದಲ್ಲಿ ಬಡವರ ಪ್ರಮಾಣ ಶೇಕಡಾ 30. ನಗರ ಪ್ರದೇಶದಲ್ಲಿ ಬಡವರ ಪ್ರಮಾಣ ಶೇಕಡಾ 40. ಆದರೂ ಬಡವರ ಸಂಖ್ಯೆ ಗ್ರಾಮೀಣ ಪ್ರದೇಶದಲ್ಲೇ ಹೆಚ್ಚು, ಏಕೆಂದರೆ ಗ್ರಾಮಗಳ ಜನಸಂಖ್ಯೆ ನಗರದ್ದಕ್ಕಿಂತ ಹೆಚ್ಚು. ಬಡವರಲ್ಲಿ ಶೇಕಡಾ 61 ಜನ ಗ್ರಾಮ ವಾಸಿಗಳು, ಉಳಿದ ಶೇಕಡಾ 39 ನಗರವಾಸಿ ಗಳು.(ಒಟ್ಟು ಜನ ಸಂಖ್ಯೆ ಯಲ್ಲಿ ಶೇಕಡಾ 69 ಜನ ಗ್ರಾಮೀಣ ವಾಸಿಗಳು, ಶೇಕಡಾ 31 ನಗರವಾಸಿಗಳು)

1993-94 ರ ಅಂಕೆ ಸಂಖ್ಯೆ ಪ್ರಕಾರ ಕರ್ನಾಟಕದಲ್ಲಿ ಒಟ್ಟು 1.56 ಕೋಟಿ ಬಡವರಿದ್ದಾರೆ. 28 ಲಕ್ಷ ಕುಟುಂಬಗಳು ಬಡ ಕುಟುಂಬಗಳು. ಗ್ರಾಮವಾಸಿಗಳಲ್ಲಿ 96 ಲಕ್ಷ ಜನ (17 ಲಕ್ಷ ಕುಟುಂಬಗಳು) ಬಡವರು ನಗರವಾಸಿಗಳಲ್ಲಿ 60 ಲಕ್ಷ (11 ಲಕ್ಷ ಕುಟುಂಬಗಳು) ಬಡವರು. ಈಗಾಗಲೇ ಹೇಳಿದ ಹಾಗೆ ನಿಜವಾದ ಬಡತನ ಇನ್ನು ಹೆಚ್ಚು.

ಬೀದರ ಅತಿ ಹೆಚ್ಚು ಬಡವರಿರುವ ಜಿಲ್ಲೆ

ಜಿಲ್ಲಾವಾರು ಬಡತನದ ಚಿತ್ರಣವನ್ನು ಕೋಷ್ಟಕ 1 ರಲ್ಲಿ ಕೊಡಲಾಗಿದೆ. ಬಡತನದ ರೇಖೆ ಕೆಳಗಿರುವ ಗ್ರಾಮವಾಸಿಗಳ, ನಗರ ವಾಸಿಗಳು, ಒಟ್ಟು ಬಡವರ ಪ್ರಮಾಣ ಮತ್ತು ರ್ಯಾಂಕ್‌ಗಳನ್ನು ಕೊಡಲಾಗಿದೆ. ಅತಿ ಕಡಿಮೆ ಬಡತನವಿರುವ ಜಿಲ್ಲೆಗೆ ಮೊದಲ ರ್ಯಾಂಕ್, ಅತಿ ಹೆಚ್ಚು ಬಡತನ ಇರುವ ಜಿಲ್ಲೆಗೆ 20ನೇ ರ್ಯಾಂಕ್.

ಕೋಷ್ಟಕದಲ್ಲಿರುವ ಜಿಲ್ಲಾವಾರು ಗ್ರಾಮೀಣ-ನಗರದ ಬಡತನ ಪ್ರಮಾಣ ವಿಶ್ಲೇಷಿಸಿದರೆ ಈ ಕೆಳಗಿನ ಅಂಕಗಳ ಕಾಣುತ್ತವೆ.

- ದಕ್ಷಿಣ ಕನ್ನಡ, ಹಾಸನ, ಚಿಕ್ಕಮಗಳೂರು, ಕೊಡಗು, ಉತ್ತರ ಕನ್ನಡ ಅತಿ ಕಡಿಮೆ ಬಡತನ ಇರುವ ಐದು ಜಿಲ್ಲೆಗಳು
- ಬೀದರ, ಧಾರವಾಡ, ಕೋಲಾರ, ಗುಲ್ಬರ್ಗ, ಬಳ್ಳಾರಿ - ಅತಿ ಹೆಚ್ಚು ಬಡತನ ಇರುವ ಐದು ಜಿಲ್ಲೆಗಳು
- ಗ್ರಾಮೀಣ - ನಗರ ಬಡತನದ ಪ್ರಮಾಣದಲ್ಲಿ ಭಾರಿ ವ್ಯತ್ಯಾಸಗಳಿವೆ. - ಉದಾಹರಣೆಗೆ ಕೊಡಗು, ರಾಯಚೂರು, ಶಿವಮೊಗ್ಗ, ಮೈಸೂರು, ಮಂಡ್ಯ, ಬಿಜಾಪುರಗಳಲ್ಲಿ ಗ್ರಾಮೀಣ ಬಡತನ ಕಡಿಮೆಯಿದ್ದರೂ, ನಗರ ಪ್ರದೇಶದ ಬಡತನ ತೀರಾ ಹೆಚ್ಚು. ಮಂಡ್ಯದ ಗ್ರಾಮೀಣ ಬಡತನ ಶೇಕಡಾ 23.89 ಇದ್ದರೆ ನಗರವಾಸಿಗಳಲ್ಲಿ ಬಡತನ ಶೇಕಡಾ 65.72 (ರಾಜ್ಯದಲ್ಲೇ ಅತಿ ಹೆಚ್ಚು ನಗರದಲ್ಲಿ ಬಡತನದ ಪ್ರಮಾಣ). ಅದೇ ರೀತಿ ಬೆಂಗಳೂರು(ಗ್ರಾಮೀಣ), ಚಿತ್ರದುರ್ಗ, ತುಮಕೂರುಗಳಲ್ಲಿ ನಗರದಲ್ಲಿ ಬಡತನದ ಪ್ರಮಾಣ ಹೆಚ್ಚಿದ್ದರೂ ಗ್ರಾಮೀಣ ಬಡತನ ಕಡಿಮೆ ಇದೆ.(ರಾಜ್ಯದ ಸರಾಸರಿಗಿಂತ. ಉದಾಹರಣೆಗೆ ಬೆಂಗಳೂರು (ಗ್ರಾಮೀಣ) ಜಿಲ್ಲೆಯಲ್ಲಿ ನಗರದಲ್ಲಿ ಬಡತನ 2ನೇ ಸ್ಥಾನದಲ್ಲಿದ್ದರೆ, ಗ್ರಾಮೀಣ ಬಡತನದಲ್ಲಿ 15ನೇ ರ್‍ಯಾಂಕಿನಲ್ಲಿದೆ. ಗುಲ್ಬರ್ಗ, ಬಳ್ಳಾರಿಗಳು ಹೆಚ್ಚಿನ ಇತರ ಬೆಳವಣಿಗೆ ಹಿಂದುಳಿದುರುವಿಕೆ ಮಾಪಕದಲ್ಲಿ ಕೊನೆಯಲ್ಲಿದ್ದರೂ, ಬಡತನದ ಪ್ರಮಾಣದಲ್ಲಿ ತೀರಾ ಹಿಂದುಳಿದಿಲ್ಲ.

ಕೋಷ್ಟಕ -1 ಜಿಲ್ಲಾವಾರು ಬಡತನ

ಜಿಲ್ಲೆ	ಗ್ರಾಮೀಣ		ನಗರ		ಒಟ್ಟು	
	ಬಡವರ ಪ್ರಮಾಣ	ರ್ಯಾಂಕ್	ಬಡವರ ಪ್ರಮಾಣ	ರ್ಯಾಂಕ್	ಬಡವರ ಪ್ರಮಾಣ	ರ್ಯಾಂಕ್
ದಕ್ಷಿಣ ಕನ್ನಡ	6.68	1	15.71	1	8.91	1
ಹಾಸನ	9.50	2	35.08	6	14.44	2
ಚಿಕ್ಕಮಗಳೂರು	11.11	3	27.80	3	15.61	3
ಕೊಡಗು	15.24	5	40.38	10	20.73	4
ಉತ್ತರ ಕನ್ನಡ	20.10	9	38.70	9	24.97	5
ರಾಯಚೂರು	18.72	7	50.00	14	25.11	6
ಶಿವಮೊಗ್ಗ	16.06	6	50.66	15	25.56	7
ಮೈಸೂರು	26.64	11	33.82	5	28.94	8
ಬೆಳಗಾಂ	27.17	12	41.98	11	29.86	9
ಬಿಜಾಪುರ	19.31	8	55.40	18	28.98	10
ಮಂಡ್ಯ	23.89	4	32.51	4	31.42	12
ಬೆಂಗಳೂರು	12.40	4	32.51	4	31.42	12
ಬೆಂಗಳೂರು ಗ್ರಾಮಾಂತರ	42.20	15	26.69	2	38.17	13
ಚಿತ್ರದುರ್ಗ	40.11	13	36.64	7	39.00	14
ತುಮಕೂರು	42.18	14	36.98	8	40.64	15
ಬಳ್ಳಾರಿ	43.75	16	46.86	13	44.50	16
ಗುಲ್ಬರ್ಗ	45.81	17	45.94	12	45.54	17
ಕೋಲಾರ	47.93	19	50.71	16	48.45	18
ಧಾರವಾಡ	47.46	18	52.22	17	49.75	19
ಬೀದರ್	57.00	20	56.35	19	56.06	20

ಕೋಷ್ಟಕ -2 ಜಿಲ್ಲಾವಾರು ಬಡತನ ಮತ್ತು ತಲಾ ಆದಾಯ

ಜಿಲ್ಲೆ	1993-94 ರಲ್ಲಿ ಬಡಜನರ ಪ್ರಮಾಣ(%)	1993-94 ರಲ್ಲಿ ತಲಾ ಆದಾಯ (ರೂ.ಗಳಲ್ಲಿ)	ರ್ಯಾಂಕ್ ಬಡತನ	ರ್ಯಾಂಕ್ ತಲಾಆದಾಯ
ದಕ್ಷಿಣ ಕನ್ನಡ	8.91	8.157	1	4
ಹಾಸನ	14.44	5,915	2	15
ಚಿಕ್ಕಮಗಳೂರು	15.61	9,850	3	3
ಕೊಡಗು	20.73	13,066	4	1
ಉತ್ತರ ಕನ್ನಡ	24.97	6,965	5	9
ರಾಯಚೂರು	25.11	5,239	6	18
ಶಿವಮೊಗ್ಗ	25.56	7,724	8	8
ಮೈಸೂರು	28.94	7,227	8	8
ಬೆಳಗಾಂ	28.98	7,307	10	7
ಬಿಜಾಪುರ	29.86	5,890	9	16
ಮಂಡ್ಯ	30.16	6,347	11	11
ಬೆಂಗಳೂರು	31.42	11,609	12	2
ಬೆಂಗಳೂರು (ಗ್ರಾಮೀಣ)	38.17	7,910	13	5
ಚಿತ್ರದುರ್ಗ	39.00	6,476	14	10
ತುಮಕೂರು	40.64	5,516	15	17
ಬಳ್ಳಾರಿ	44.50	6,340	16	12
ಗುಲ್ಬರ್ಗ	45.54	6,037	17	13
ಕೋಲಾರ	48.45	4,961	18	19
ಧಾರವಾಡ	49.75	6,003	19	14
ಬೀದರ್	56.06	4,910	20	20

ಜಿಲ್ಲೆಯ ಬಡತನಕ್ಕೂ ತಲಾ ಆದಾಯಕ್ಕೂ ಸಂಬಂಧವಿಲ್ಲ.

ಜಿಲ್ಲೆಯ ಒಟ್ಟು ಆದಾಯ (ಅಥವಾ ಕನಿಷ್ಠ ತಲಾ ಆದಾಯ) ಹೆಚ್ಚಿದರೆ ಬಡತನದ ಪ್ರಮಾಣ ಕಡಿಮೆಯಿರುತ್ತದೆ ಎಂದು ಸಾಮಾನ್ಯ ಅಂದಾಜು. ಆದರೆ ಕೋಷ್ಟಕ-2 ರಲ್ಲಿರುವ ಅಂಕೆ ಸಂಖ್ಯೆ ಗಮನಿಸಿದರೆ ಜಿಲ್ಲೆಯ ತಲಾ ಆಧಾಯಕ್ಕೂ ಬಡತನದ ಪ್ರಮಾಣಕ್ಕೂ ಏನೂ ಸಂಬಂಧವಿದ್ದಂತೆ ಕಾಣುವುದಿಲ್ಲ.

- ಚಿಕ್ಕಮಗಳೂರು, ಮಂಡ್ಯ, ಮೈಸೂರು, ಬೀಧರ ಜಿಲ್ಲೆಗಳು ಮಾತ್ರ ಬಡತನ, ತಲಾ ಆದಾಯ ಎರಡರಲ್ಲೂ ಒಂದೇ ರ್ಯಾಂಕ್‌ನಲ್ಲಿವೆ. ಹಾಸನ, ರಾಯಚೂರು ಬಿಜಾಪುರ ಜಿಲ್ಲೆಗಳ ತಲಾ ಆದಾಯದಲ್ಲಿ ಇತರ ಜಿಲ್ಲೆಗಳಿಂದ ಹಿಂದುಳಿದಿದ್ದರೂ, ಬಡತನದ ಪ್ರಮಾಣ ಹೋಲಿಕೆಯು ಕಡಿಮೆ ಇದೆ.
- ಬೆಂಗಳೂರು, ಬೆಂಗಳೂರು (ಗ್ರಾಮ) ಚಿತ್ರದುರ್ಗ ತಲಾ ಆದಾಯದಲ್ಲಿ ಬಹಳ ಮುಂದಿದ್ದರೂ, ಬಡತನದ ಪ್ರಮಾಣ ಹೋಲಿಕೆಯ ತೀರಾ ಹೆಚ್ಚಿದೆ.
- ಇವೆಲ್ಲದರ ಅರ್ಥ ಬರಿಯ ಉತ್ಪಾದನೆ ಹೆಚ್ಚಳ (ಬೆಳವಣಿಗೆ) ಆದರೆ ಬಡತನ ತನ್ನಿಂದತಾನೇ ಕಡಿಮೆ ಆಗುವುದಿಲ್ಲ, ಬೆಳವಣಿಗೆಯ ಫಲ, ಆದಾಯ, ಆಸ್ತಿಗಳ ಸಮಾನ ಹಂಚಿಕೆ, ವರ್ಗ ಸ್ವರೂಪ ಬಡತನವನ್ನು ಕಡಿಮೆ ಮಾಡುವುದರಲ್ಲಿ ದೊಡ್ಡ ಪಾತ್ರ ವಹಿಸುತ್ತದೆ.

ಬಜೆಟ್ ಎಂಬ ಆರ್ಥಿಕ ಧಾಳಿಗಳು

ಜಿ.ಎನ್. ನಾಗರಾಜ್

ಫೆಬ್ರವರಿ 29 ರಂದು ದೇಶದ ಸಾಮಾನ್ಯ ಜನತೆಯ ಮೇಲೊಂದು ಧಾಳಿ ಯುದ್ಧವೊಂದರಲ್ಲಿ ತಕ್ಷಣವೇ ಹಲವು ಸಾವು, ನೋವು, ರಕ್ತಗಳಿಂದ ಎಲ್ಲರನ್ನು ದಿಗ್ಭ್ರಮೆ, ರೋಷಗಳನ್ನು ಹುಟ್ಟಿಸುವ ಗುಂಡಿನ ಧಾಳಿಯಲ್ಲ ನೂರು ಕೋಟಿ ಜನರ ಮೇಲೆ ಏಕಕಾಲಕ್ಕೆ ನಡೆದ ಆಕ್ರಮಣ, ಆರ್ಥಿಕ ಆಕ್ರಮಣ ಪರದೇಶದ ಸೈನ್ಯ ಮಾಡುವ ಧಾಳಿಯಲ್ಲಿ ಇದು ನಮ್ಮ ದೇಶದವರೇ, ನಾವೇ ಆರಿಸಿದವರೇ ಮಾಡುವ ಧಾಳಿ ಕೇಂದ್ರಸರ್ಕಾರದ ಬಜೆಟ್ ಎಂಬ ಹೆಸರಿನಲ್ಲಿ ಈ ಆಕ್ರಮಣ ನಡೆಯಿತು. ಆ ಬಗ್ಗೆ ನಮ್ಮ ಪತ್ರಿಕೆಯಲ್ಲಿ ಈಗಾಗಲೇ ಓದಿದ್ದೀರಿ.

ಇದೇ ಆಕ್ರಮಣದ ಮುಂದುವರಿಕೆಯಾಗಿ ಕರ್ನಾಟಕ ರಾಜ್ಯ ಸರ್ಕಾರ ಮಾರ್ಚ್ 27 ರಂದು ಮತ್ತೊಂದು ಧಾಳಿ ಎಸಗುವ ಸೂಚನೆ ನೀಡಿದೆ. 24 ರಂದು ಮಂಡಿತವಾದ ಆರ್ಥಿಕ ಸಮೀಕ್ಷೆಯಲ್ಲಿ 27ರಂದು ಮುಖ್ಯಮಂತ್ರಿ ಎಸ್. ಎಂ. ಕೃಷ್ಣ ಮಂಡಿಸಿದ ಮಂಡಿತವಾದ ಬಜೆಟ್ ಭಾಷಣದಲ್ಲಿ ನಂತರ ನಡೆದ ಚರ್ಚೆಯಲ್ಲಿ, ಅದಕ್ಕೆ ಮುಖ್ಯ ಮಂತ್ರಿಗಳು ನೀಡಿದ್ದ ಉತ್ತರದಲ್ಲಿ ಮತ್ತು ವಾದದ ಕೊನೆಯದಿನ ರಾಜ್ಯ ಹಣಕಾಸಿನ ಸ್ಥಿತಿಯ ಬಗ್ಗೆ ಮಂಡಿಸಿದ ಶ್ವೇತ ಪತ್ರದಲ್ಲಿ ಈ ಧಾಳಿಯ ಎಲ್ಲಾ ಸೂಚನೆಗಳನ್ನೂ ನೀಡಲಾಗಿದೆ. ಒಮ್ಮೆಗೆ ಬಜೆಟ್



ಕೇಂದ್ರದ ಧಾಳಿಗೆ ಕೈ ಜೋಡಿಸಿದ ಕೃಷ್ಣ

ಮೂಲಕ ಇದನ್ನೂ ಜಾರಿಗೆ ತಂದೇಬಿಟ್ಟರೆ ಜನಸಿಡಿದೆದ್ದು ಮೇಲೆ ಬಿದ್ದಾರೆಂದು ಕೇವಲ ಧಾಳಿಯ ಸೂಚನೆಯನ್ನಷ್ಟೇ ನೀಡಲಾಗಿದೆ. ಈ ಧಾಳಿಗಳು ಹಲವು ರಂಗಗಳನ್ನು ವ್ಯಾಪಿಸಿದೆ.

ಕೃಷಿರಂಗದಲ್ಲಿ

ತಣ್ಣಗೆ, ಮೆತ್ತಗಿನ ದನಿಯಲ್ಲಿ ಮಂಡಿತವಾಗಿರುವ ಈ ಸೂಚನೆಗಳಲ್ಲಿ ಮೊದಲನೆಯದು ಹೀಗಿದೆ. "ಕಳೆದ 15 ವರ್ಷಗಳಿಂದ ನೀರಿನದರಗಳನ್ನು ಏರಿಸಿಲ್ಲ. ರೈತರಿಗೆ ತೊಂದರೆಯನ್ನು ಮಾಡುವಂತಹ ನೀರಾವರಿ ಯೋಜನೆಗಳನ್ನು ಕಳಪೆ ನಿರ್ವಹಣೆಗೆ ಇದೇ ಕಾರಣ. ಸಕಾಲದಲ್ಲಿ ಸಾಕಷ್ಟು ನೀರನ್ನು ನೆಚ್ಚಬಲ್ಲಂತಹ ರೀತಿಯಲ್ಲಿ ಒದಗಿಸಿದರೆ ರೈತರ ಹೆಚ್ಚು ಹಣ ನೀಡುತ್ತಾರೆಂದು ನನ್ನ ನಂಬಿಕೆ" ಎಂದಿದ್ದಾರೆ ಮುಖ್ಯ ಮಂತ್ರಿಗಳು. ಈ ಸಮಸ್ಯೆಗೆ ಸಂಬಂಧಿಸಿ ಒಂದು ಸರ್ವಸಮ್ಮತ ಅಭಿಪ್ರಾಯವನ್ನು ಮೂಡಿಸಿದ ನಂತರವೇ ಅಂತಿಮ ತೀರ್ಮಾನಕ್ಕೆ ಬರಲಾಗುವುದು ಎಂದು ಹೇಳುತ್ತಾರೆ. ಇಂತಹ ಸರ್ವಸಮ್ಮತಿ ಮೂಡಿಸುವುದಕ್ಕಾಗಿಯೇ ಹಣಕಾಸಿನ ಪರಿಸ್ಥಿತಿಯ ಶ್ವೇತ ಪತ್ರದ ಮೂಲಕ ಕೂಡ ಈ ಮಾತನ್ನು ಹರಿಬಿಟ್ಟಿದ್ದಾರೆ. ಶ್ವೇತಪತ್ರದ ಮೂಲಕ ಸರ್ಕಾರ ಹೇಳುತ್ತದೆ. ನೀರಾವರಿ ದರಗಳನ್ನು ಆರರಿಂದ ಹತ್ತು ಪಟ್ಟು ಹೆಚ್ಚಿಸಲಾಗುತ್ತದೆ. ಜೊತೆಗೆ ಮತ್ತೊಂದು ಮಾತೂ ಇದೆ. ನೀರಿನ ದರ ಹೆಚ್ಚಳ ಮಾಡಿದ ಮೇಲೆ ಅದನ್ನು ಸಂಗ್ರಹಿಸುವುದು ಸರ್ಕಾರವಲ್ಲ ರೈತರದೇ ನೀರು ಬಳಕೆದಾರರ ಸಂಘಗಳು ಅದಕ್ಕಾಗಿ ಒಂದು ವಿಶೇಷ ಕಾಯಿದೆಯನ್ನೇ ರಚಿಸುತ್ತಾರಂತೆ. ಸರ್ಕಾರಕ್ಕೆ ತನ್ನ ಅಧಿಕಾರಿಗಳ ಮೂಲಕ ಹೆಚ್ಚಿದ ನೀರಿನ ದರವನ್ನು ಸಂಗ್ರಹಿಸುವ ಧೈರ್ಯವಿಲ್ಲದ್ದರಿಂದ ರೈತರ ನಡುವಣ ಶೋಷಕ ಭೂಮಾಲಕ ಧಣಿಗಳನ್ನೇ ಈ ಕೆಲಸಕ್ಕೆ ಹಚ್ಚುವ ಹೊಸ ಉಪಾಯವಿದು.

ವಿದ್ಯುತ್

ಆದೇ ರೀತಿ ವಿದ್ಯುತ್ ದರದ ವಿಷಯ. 'ವಿದ್ಯುತ್ ವಲಯವನ್ನು ವಾಣಿಜ್ಯ ಬದ್ಧವಾಗಿ ಲಾಭಕರವಾಗಿ ನಡೆಯುವಂತೆ ಮಾಡಬೇಕು' ಇಂದು ವಿದ್ಯುತ್ ಸರಬರಾಜಿನ ಕೇವಲ ಶೇ 37 ರಷ್ಟು ಮಾತ್ರ ಮೀಟರ್‌ಗಳ ಮೂಲಕ ಆಗುತ್ತಿದೆ. ಹಂತಹಂತವಾಗಿ ಎಲ್ಲಾ ವಿದ್ಯುತ್ ಸರಬರಾಜನ್ನೂ ಮೀಟರೀಕರಣಗೊಳಿಸಬೇಕು" ಎಂದು ಬಜೆಟ್‌ನಲ್ಲಿ ಘೋಷಿಸಲಾಗಿದೆ. ಅಂದರೆ ವಿದ್ಯುತ್‌ದರವನ್ನು ಗಣನೀಯವಾಗಿ ಹೆಚ್ಚಿಸುತ್ತೇವೆ. ಅದಕ್ಕೆ ಸಿದ್ಧವಾಗಿರಿ ಎಂದು ಅರ್ಥ. ಪ್ರತಿ ಕೃಷಿ ಪಂಪ್‌ಸೆಟ್‌ಗೆ ಕೂಡ ಮೀಟರನ್ನು ಅಳವಡಿಸಬೇಕು. ಹಾರ್ಸ್‌ಪವರ್ ಆಧಾರದ ಮೇಲಲ್ಲ ಯೂನಿಟ್ ಆಧಾರದ ಮೇಲೆ ರೈತರು ಬೆಲೆ ತೆರಬೇಕು.

ವಿದ್ಯುತ್ ದರದ ಏರಿಕೆ ರೈತರಿಗೆ ಮಾತ್ರವಲ್ಲ ಎಲ್ಲರ ಬಳಕೆದಾರರಿಗೆ ಗೃಹ ಬಳಕೆದಾರರು ಹಾಗೂ ಕೈಗಾರಿಕೆಗಳಿಗೂ ಅನ್ವಯಿಸುತ್ತದೆ. ಕೃಷಿರಂಗಕ್ಕೆ ನೀರಾವರಿ, ವಿದ್ಯುತ್ ದರಗಳನ್ನು ಏರಿಸುವ ಮಾತನಾಡಿದ ಕೃಷ್ಣ ಬಜೆಟ್‌ನಲ್ಲಿ ಇಡೀ ರಾಜ್ಯದಲ್ಲಿ ಕಳೆದವರ್ಷ ರೈತರು ಅನುಭವಿಸಿದ ಬೆಲೆ ಕುಸಿತ - ಈರುಳ್ಳಿ, ಹಾಲು ರೇಷ್ಮೆ ಹತ್ತಿ, ತೊಗರಿಬೆಲೆ ಕುಸಿತ ಅದರಿಂದ ರಾಜ್ಯದ ರೈತರಿಗಾದ ಅಸಂಖ್ಯ ನಷ್ಟದ ಬಗ್ಗೆ ಒಂದೇ ಒಂದು ಮಾತಿಲ್ಲ. ರಾಜ್ಯದ ಆರ್ಥಿಕ ಸ್ಥಿತಿಯ ದೊಡ್ಡ ಭಾಗವಾಗಿರುವ ರೈತರ ಆರ್ಥಿಕ ಪರಿಸ್ಥಿತಿ, ಕೃಷಿಯ ಆರ್ಥಿಕ ಪರಿಸ್ಥಿತಿಯ ಬಗ್ಗೆ ಚರ್ಚಿಸದೆ ರಾಜ್ಯದ ಆರ್ಥಿಕವನ್ನು ಯಾವ ರೀತಿ ಅಭಿವೃದ್ಧಿ ಪಡಿಸಲು ಸಾಧ್ಯ? ಅದನ್ನು ಗಮನಿಸುವುದಕ್ಕೆ ಕೂಡ ಹೋಗದ ಸರ್ಕಾರ ಅದಕ್ಕೆ ಕಾರಣಗಳೇನು? ಪರಿಹಾರವೇನು? ಇದರಲ್ಲಿ ಕೇಂದ್ರ ಸರ್ಕಾರದ ಪಾತ್ರವೇನು? ರಾಜ್ಯ ಸರ್ಕಾರ ಏನು ಮಾಡಬಹುದು ಎಂಬ ಯೋಚನೆಗೆ ಹೋಗುತ್ತದೆಯೇ?

ರೈತರು ಬೆಳೆದ ಫಸಲಿನ ಬೆಲೆ ಕುಸಿಯುತ್ತಿರುವಾಗ ಅದಕ್ಕೆ ಪರಿಹಾರ ಕಂಡುಕೊಳ್ಳದೆ ಅವರಿಂದ ನೀರಾವರಿ, ವಿದ್ಯುತ್ ದರದ ಹೆಸರಿನಲ್ಲಿ ಹಣ ಹಿರಿಯುವ ಯೋಚನೆಸಾಧುವೇ? ಸಾಧ್ಯವೇ? ಇವು ಯಾವುದಕ್ಕೂ ಉತ್ತರ ಈ ಬಜೆಟ್‌ನಲ್ಲಿಲ್ಲ. ಇಂತಹ ಬೆದರಿಕೆಗಳ ಮುಂದೆ ರಸಗೊಬ್ಬರ, ಬೀಜ, ಔಷಧಿ ಮುಂತಾದವುಗಳ ಬೆಲೆಯನ್ನು ಶೇ 2-3 ರಷ್ಟು ತಗ್ಗಿಸುವ ತೆರಿಗೆ ವಿನಾಯತಿ ಯಾವಲೆಕ್ಕಕ್ಕೂ ಬರುವುದಿಲ್ಲ.

ಶಿಕ್ಷಣ ವೆಚ್ಚ

ಒಂದು ಕಡೆ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ -ಇಲ್ಲಿಯವರೆಗೂ ಅಕ್ರಮವಾಗಿಸಂಗ್ರಹಿಸುತ್ತಿದ್ದ ಡೊನೇಷನ್, ಕ್ಯಾಪಿಟೇಷನ್ ಹಣವನ್ನು ಸಕ್ರಮವಾಗಿಯೇ ಸಂಗ್ರಹಿಸಲು ಅನುಮತಿ ನೀಡಿ ಅನುದಾನ ಪಡೆಯುತ್ತಿರುವ ಖಾಸಗಿ ಕಾಲೇಜುಗಳಿಗೆ ಶೇ 15 ರಷ್ಟು ಅನುದಾನ ಪಡೆಯತ್ತಿರುವ ಖಾಸಗಿ ಶಿಕ್ಷಣಕ್ಕಾಗಿ ಮಾಡುತ್ತಿರುವ ವೆಚ್ಚದ ಖೋತಾ ಮಾಡಿರುವ ಈ ಬಜೆಟ್ ಮತ್ತೊಂದುಸೂಚನೆ ನೀಡಿದೆ. ಸರ್ಕಾರಿ ಕಾಲೇಜುಗಳ ಶುಲ್ಕಗಳನ್ನು ಏರಿಸಬೇಕಾದ ತುರ್ತು ಅಗತ್ಯವಿದೆ. ಉದಾಹರಣೆ ರಾಜ್ಯದಲ್ಲಿ ಬಿ.ಕಾಂ. ಪದವಿಗೆ 180 ರೂ. ಇರುವಾಗ ನೆರೆಯ ರಾಜ್ಯಗಳಾದ ಮಹಾರಾಷ್ಟ್ರದಲ್ಲಿ 800 ರೂ. ಹಾಗೂ ಆಂಧ್ರಪ್ರದೇಶದಲ್ಲಿ 360 ರೂ. ಇದೆ. ಈ ಪರಿಸ್ಥಿತಿ ಬಹಳ ಮುಂದುವರಿಯಲು ಸಾಧ್ಯವಿಲ್ಲ" ಎನ್ನುತ್ತದೆ ಬಜೆಟ್ ಭಾಷಣ. ಆದ್ದರಿಂದ ಕಾಲೇಜುಗಳಲ್ಲಿ ಓದುತ್ತಿರುವ, ಓದ ಬಯಸುವ ಮಕ್ಕಳನ್ನುಳ್ಳ ಎಲ್ಲಾ ಪೋಷಕರು - ರೈತರು, ನೌಕರರು, ಕಾರ್ಮಿಕರು ಎಲ್ಲರೂ ಹಲವು ಪಟ್ಟು ಏರಿಸಿದ ಶುಲ್ಕ ಕೊಡಲು ಇಲ್ಲವೇ ವಿದ್ಯಾಭ್ಯಾಸವನ್ನೇ ಕೈಬಿಡಲು ಸಿದ್ಧರಾಗಬೇಕು. ಕಾಲೇಜು ಶಿಕ್ಷಣದ ಕತೆಯೇ ಹೀಗಾದರೆ ಇನ್ನು ವಿ.ವಿ. ಶಿಕ್ಷಣದ ಶುಲ್ಕಗಳು ಎಷ್ಟಾಗಬಹುದು ಎಂಬುದನ್ನು ಊಹಿಸಿಕೊಳ್ಳಿ.

ಶಿಕ್ಷಣದ ವಿಷಯದಲ್ಲಿ ಮಹಿಳೆಯರಿಗೆ ಪಿ.ಯು.ಸಿ.ಯವರೆಗೆ ಉಚಿತ ಶಿಕ್ಷಣ ಮತ್ತು ಪ್ರಾಥಮಿಕ ಶಾಲೆಯಲ್ಲಿ 5ನೇ ತರಗತಿಯಿಂದ ಏಳನೇ ತರಗತಿಯವರೆಗೆ ಎಲ್ಲಾ ಮಕ್ಕಳಿಗೂ ಉಚಿತ ಪಠ್ಯ ಪುಸ್ತಕಗಳನ್ನು ನೀಡುವುದು ಸ್ವಾಗತಾರ್ಹ. ಆದರೆ ಉನ್ನತ ಶಿಕ್ಷಣದಿಂದ ಕಸಿದು ಸಹಾಯ ಮಾಡುವ ಬದಲು ಈಗಾಗಲೇ ಅತ್ಯಂತ ಕಡಿಮೆಯಾಗಿರುವ ಶಿಕ್ಷಣದ ಮೇಲೆ ಸರ್ಕಾರಿ ಹಣ ಹೂಡಿಕೆಯನ್ನು ಹೆಚ್ಚಿಸುವ ಮೂಲಕ ಮಾಡಬೇಕು.

ಎಲ್ಲದರ ಬೆಲೆ ಏರಿಕೆ?

ಈ ಮೇಲಿನವು ನೇರವಾಗಿ ಮಾಡಿರುವ ಸೂಚನೆಗಳು. ಆದರೆ ರಾಜ್ಯದ ಹಣಕಾಸಿನ ಬಗೆಗಿನ ಶ್ವೇತಪತ್ರದಲ್ಲಿ ಸಾರಾಸಗಟಾದ ಮತ್ತೊಂದು ಸೂಚನೆ ನೀಡಲಾಗಿದೆ. ಸರ್ಕಾರ ನೀಡುತ್ತಿರುವ ಎಲ್ಲ ಪ್ರತ್ಯಕ್ಷ ಮತ್ತು ಅಪ್ರತ್ಯಕ್ಷ ಸಹಾಯಧನದ ಬಗ್ಗೆ ಅಧ್ಯಯನ ಮಂದಿನ ಕೆಲವ ವರ್ಷಗಳಲ್ಲಿ ಅವೆಲ್ಲವನ್ನೂ ತೊಡೆದುಹಾಕುವ ಬಗ್ಗೆ ಒಂದು ಅಧ್ಯಯನ ನಡೆಸಲಾಗುತ್ತಿದೆಯಂತೆ. ಆ ವರದಿ ಬಂದ ಮೇಲೆ ಉಳಿದ ಅನೇಕ ಸರ್ಕಾರದ ಸೇವೆಗಳ ಬೆಲೆಗಳನ್ನೆಲ್ಲಾ ಏರಿಸುವ ಸೂಚನೆಯನ್ನು ನೀಡಲಾಗಿದೆ. ಪದೇ ಪದೇ ಬಜೆಟ್ ಭಾಷಣದಲ್ಲಿಯೂ, ಶ್ವೇತ ಪತ್ರದಲ್ಲಿಯೂ ಈ ಕಠಿಣ ಕ್ರಮಗಳನ್ನು ಕೈಗೊಳ್ಳುವ ಬಗ್ಗೆ ಸರ್ವಸಮ್ಮತ ಅಭಿಪ್ರಾಯ ಬೇಕು ಎಂದು ಹೇಳಲಾಗಿದೆ.

ರಾಜ್ಯದ ಜನತೆಯ ಮೇಲೆಆರ್ಥಿಕ ಧಾಳಿಗಳನ್ನು ನಡೆಸುವ ಈ ಕ್ರಮಗಳ ಬಗ್ಗೆ ಒಂದು ರೀತಿಯ ಸರ್ವಸಮ್ಮತ ಏರ್ಪಟ್ಟಿದೆಯೇನೋ ಎನ್ನುವಂತೆ ರಾಜ್ಯ ವಿಧಾನಸಭೆಯಲ್ಲಿ ಸ್ಥಾನಗಳನ್ನು ಅಲಂಕರಿಸಿರುವ ಯಾವ ವಿರೋಧ ಪಕ್ಷವೂ ಈ ಸೂಚನೆಗಳ ಬಗ್ಗೆ ಚಕಾರವೆತ್ತಿಲ್ಲ, ವಿರೋಧಕ್ಕಾಗಿ ವಿರೋಧವೆಂಬಂತೆ 'ನಿರಾಶದಾಯಕ ಬಜೆಟ್, ಹೊಸತೇನೂ ಇಲ್ಲ' ಈ ರೀತಿಯ ನಿರಾಶಾದಾಯಕ, ಹೊಸತೇನೂ ಇಲ್ಲದ ಪ್ರತಿಕ್ರಿಯೆಗಳನ್ನೇ ನೀಡಿದ್ದಾರೆ.

ಜನತೆಯ ಮೇಲೆ ಎರಗಿದ, ಎರಗಲಿರುವ ಈ ಧಾಳಿಗಳಿಂದ ಜನತೆಯನ್ನು ರಕ್ಷಿಸುವ ಕರ್ತವ್ಯವನ್ನು ಪೂರ್ಣವಾಗಿ ನಿರ್ಲಕ್ಷಿಸಿದ್ದಾರೆ. ಹೀಗಾಗಿ ಈ ಧಾಳಿಗಳು ಮನೆ ಮನೆಗೂ ಮುಟ್ಟಲಿದೆ. ಅವರನ್ನು ಸಂಕಷ್ಟದ ಬೇಗೆಯಲ್ಲಿ ಸುಡಲಿದೆ

ಆದ್ದರಿಂದ ಇರುವುದೊಂದೇ ಮಾರ್ಗ. ಜನತೆ ತಮ್ಮನ್ನು ತಾವೇ ಸಂರಕ್ಷಿಸಿಕೊಳ್ಳುವುದು. ಕೇಂದ್ರಸರ್ಕಾರ-ರಾಜ್ಯ ಸರ್ಕಾರಗಳು ಒಟ್ಟಾಗಿ ನಡೆಸುತ್ತಿರುವ ಈ ಯುದ್ಧ ಮನೆಯವರೆಗೆ ಬಂದಿದೆ. ಜನತೆ ಒಟ್ಟಾಗಿ ಹೋರಾಡಬೇಕಿದೆ.

ಸಾಲವನು ಕೊಂಬಾಗ ಹಾಲೋಗರುಂಡಂತೆ

ಎಸ್.ಎಂ.ಕೃಷ್ಣರವರು ಮಂಡಿಸಿದ ಬಜೆಟ್‌ನ ಆರಂಭ ಭಾಗದಲ್ಲಿಯೇ ಬಹಳ ಸ್ಪಷ್ಟವಾಗಿಯೇ ಯಾವುದೇ ನಾಚಿಕೆಯೂ ಇಲ್ಲದೆ ಘೋಷಿಸಿದ ಸಾಧನೆಗಳಿವು - ತಮ್ಮ ಸರ್ಕಾರ ಅಧಿಕಾರಕ್ಕೆ ಬಂದದಿನದಿಂದಲೂ ಮುಖ್ಯಮಂತ್ರಿಗಳು, ಇತರ ಮಂತ್ರಿಗಳು ಆಗಾಗ್ಗೆ ಹೇಳುತ್ತಲೇ ಬಂದಿರುವ 'ಸಾಧನೆ'ಗಳನ್ನೆಲ್ಲಾ ಇಲ್ಲಿ ಒಂದೇ ಬಾರಿಗೆ ಪಟ್ಟಿ ಮಾಡಲಾಗಿದೆ ಅಷ್ಟೆ. ಈ ಪಟ್ಟಿಯನ್ನು ನಾವೂ ನೋಡೋಣ.

. ವಿಶ್ವಬ್ಯಾಂಕ್ ನಾಲ್ಕು ವರ್ಷಗಳಿಂದಲೂ ಕರ್ನಾಟಕ ಸರ್ಕಾರದ ಜೊತೆ ಆಗಾಗ್ಗೆ ಮಾತುಕತೆ ನಡೆಸಿ ಈಗ ವಿವರವಾದ ಚರ್ಚೆಗಳ ನಂತರ ಕರ್ನಾಟಕವನ್ನು ತಾನು ಕೇಂದ್ರೀಕರಿಸುವ ರಾಜ್ಯವೆಂದು ಪರಿಗಣಿಸಿದೆ

ಮುಂದಿನ ಐದು ವರ್ಷಗಳಲ್ಲಿ 12,000 ಕೋಟಿ ರೂ.ಗಳನ್ನು ನೀಡಲೊಪ್ಪಿದೆ.

. ಇದರಲ್ಲಿ ಶೇ 70 ಭಾಗ 20 ವರ್ಷಗಳಲ್ಲಿ ತೀರಿಸಬೇಕಾದ ಶೇ 12 ರಷ್ಟು ಬಡ್ಡಿಯ ಸಾಲ.

. ಮುಂದಿನ ಎರಡು ವರ್ಷಗಳಲ್ಲಿ ಹುಡ್ಕೋ 1580 ಕೋಟಿ ರೂ.ಗಳನ್ನು ಮನೆ ನಿರ್ಮಾಣ, ನೀರು ಸರಬರಾಜು, ರಸ್ತೆ, ಒಳಚರಂಡಿಗಳಿಗಾಗಿ ಸಾಲ ನೀಡಲಿದೆ.

. ಎನ್.ಡಿ.ಡಿ.ಬಿ. 505 ಕೋಟಿ ರೂ.ಗಳನ್ನು ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಳಿ ಹೂಡಿಕೆ ಮಾಡಲಿದೆ.

. ಜಪಾನ್ ಸರ್ಕಾರ 36000 ಕೋಟಿ ರೂ.ಗಳ ಹೂಡಿಕೆ ಮಾಡುತ್ತದೆ.

. ಕೇಂದ್ರ ಸರ್ಕಾರದ ಜೊತೆ ವಿದ್ಯುತ ಅಭಿವೃದ್ಧಿ ಬಗ್ಗೆ ಮಾಡಿಕೊಂಡ ಒಪ್ಪಂದದ ಭಾಗವಾಗಿ 3500 ಕೋಟಿ ರೂ ಸಾಲ ನೀಡಲಿದೆ.

. ಕೇಂದ್ರ ಸರ್ಕಾರದ ಮೂಲಭೂತ ಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ಕಂಪನಿಯಂತಹ ಸಂಸ್ಥೆಗಳು ಸಾಲ ನೀಡಲಿವೆ.

ಹೀಗೆ ಎಲ್ಲ ಪಟ್ಟಿ ಮಾಡಲಾಗಿರುವ ಸಾಲಗಳ ಜೊತೆಗೆ ಜನತೆಯಿಂದ ಸಾಲ ಪಡೆಯಲೆಂದೇ ರಚಿಸಲಾಗಿರುವ ಕೃಷಿ ಭಾಗ್ಯ ಜನ ನಿಗಮ ಹಾಗೂ ಕರ್ನಾಟಕ ನೀರಾವರಿ ನಿಗಮ ಇತ್ಯಾದಿಗಳು ಎತ್ತಿರುವ ಸಾಲ ಹಾಗೆಯೇ ಈ ಬಜೆಟ್‌ನಲ್ಲಿ ಸಾಲ ಎತ್ತಿ ರೇಲುವೆ ಮಾರ್ಗಗಳ ರಚನೆಗೆಂದು ಸೂಚಿಸಲಾಗಿರುವ ನಿಗಮ ಎತ್ತಲಿರುವ ಸಾರ್ವಜನಿಕ ಸಾಲ, ಕೇಂದ್ರ ಸರ್ಕಾರದ ಸಾಲ, ಜೀವವಿಮಾ ನಿಗಮದ ಸಾಲ ಹೀಗೆ ಹತ್ತು ಹಲವು ಸಾಲದ ಯೋಜನೆಗಳಿವೆ.

1990-91 ರಲ್ಲಿ ರಾಜ್ಯದ ಮೇಲಿದ್ದ ಸಾಲದ ಹೊರೆ ಕೇವಲ 21,832 ಕೋಟಿ. ಈಗ ಹತ್ತು ವರ್ಷಗಳ ನಂತರ ಅದು ನಾಲ್ಕು ಪಟ್ಟಿಗಿಂತಲೂ ಹೆಚ್ಚಾಗಿ 22,238 ಕೋಟಿ ರೂ.ಗಳನ್ನು ಮುಟ್ಟಿದೆ. ಈಗಾಗಲೇ, ಇಷ್ಟು ದೊಡ್ಡ ಪ್ರಮಾಣವನ್ನು ಮುಟ್ಟಿರುವ ಸಾಲದ ಜೊತೆಗೆ ಈ ವರ್ಷ ಪಟ್ಟಿ ಮಾಡಲಾಗಿರುವ ಈ ಪ್ರಮಾಣದ ಸಾಲಗಳು, ಇನ್ನು ಐದು ವರ್ಷಗಳಲ್ಲಿ ಈಗಿರುವ ಸಾಲವನ್ನು 45,000-50,000 ಕೋಟಿ ರೂ. ಮುಟ್ಟಿ ಈಗ 1999-2000 ವರ್ಷ ರಾಜ್ಯದ ಆದಾಯ ಕೇವಲ 13,103.98 ಕೋಟಿ ರೂ. ಅದರಲ್ಲಿ ಶೇ14 ರಷ್ಟು ಸಾಲದ ಕಂತಿಗಾಗಿ ಹಾಗೂ ಬಡ್ಡಿಗಾಗಿ ಹೋಗುತ್ತಿದೆ. ಇಂತಹ ಸಂದರ್ಭದಲ್ಲಿ ಮುಂದಿನ ಕೆಲವರ್ಷಗಳಲ್ಲಿ ಸಾಲಮತ್ತು ಬಡ್ಡಿ ತೀರುವಳಿ ಎಷ್ಟಾಗಬಹುದು ರಾಜ್ಯದ ಆದಾಯದ ಬಹುಪಾಲು ಸಾಲ ತೀರುವಳಿಗೆ ಹೋದರೆ ರಾಜ್ಯದ ಅಭಿವೃದ್ಧಿಯ ಕಥೆಯೇನು? ಹಬ್ಬ ಮಾಡಲು ಸಾಲ ಮಾಡಿದ ವರ್ಷವೆಲ್ಲಾ ದುಡಿದರೂ ತೀರದಂತಹ ಸ್ಥಿತಿಗೆ ತಲುಪುತ್ತೇವೆ. ಇದಕ್ಕಾಗಿಯೇ ಸರ್ವಜ್ಞ "ಸಾಲವನು ಕೊಂಬಾತ ಹಾಲೋಗರುಂಡಂತೆ, ಸಾಲಿಗನು ಬಂದು ಸೆಳೆವಾಗ ಕಿಬ್ಬದಿಯ ಕೀಲು ಮುರಿದಂತೆ' ಎಂದು ಹಾಡಿರುವುದು.

ಆದರೆ ವಿಶ್ವಬ್ಯಾಂಕ್ ಮತ್ತು ಅದರ ಜೊತೆಯ ವಿದೇಶಿ ಸಾಲಗಳ ವಿಷಯದಲ್ಲಿ ಸಾಲಿಗನು ಬಂದು ಸೆಳೆವಾಗ ಮಾತ್ರ ಅಲ್ಲ ಕಿಬ್ಬದಿಯ ಕೀಲು ಮುರಿಯುವುದು. ಸಾಲ ನೀಡುವಾಗಲೇ ಅವರ ಶರತ್ತಿಗೊಳಗಾಗಿ ಕರ್ನಾಟಕದ ಕೋಟ್ಯಾಂತರ ಜನತೆಯ ಕಿಬ್ಬದಿಯ ಕೀಲು ಮುರಿಯುತ್ತದೆ. ಈ ಶರತ್ತುಗಳ ಫಲವಾಗಿಯೇ ಈಗಾಗಲೇ ಕೆ.ಇ.ಬಿ.(ಕರ್ನಾಟಕ ವಿದ್ಯುತ್‌ಚ್ಛಕ್ತಿ ಮಂಡಳಿ)ಯನ್ನು ಒಡೆಯಲಾಗಿದೆ. ಜಲಾಯನ ಅಭಿವೃದ್ಧಿಗಾಗಿಯೇ ಒಂದು ಇಲಾಖೆಯನ್ನು ಸೃಷ್ಟಿಸಲಾಗುತ್ತಿದೆ. 60,000 ಸರ್ಕಾರಿ ಹುದ್ದೆಗಳನ್ನು ನಾಶಮಾಡಲಾಗುತ್ತಿದೆ. ಮತ್ತೊಂದು ಲೇಖನದಲ್ಲಿ ವಿವರಿಸಿದಂತೆ ನೀರಾವರಿ, ವಿದ್ಯುತ್, ಶಿಕ್ಷಣದ ಶುಲ್ಕಗಳನ್ನು ಆಕಾಶಕ್ಕೇರಿಸುವ ಹಂಚಿಕೆ ಮಾಡಲಾಗುತ್ತಿದೆ. ಅಷ್ಟು ಮಾತ್ರವಲ್ಲ ಕರ್ನಾಟಕದ ಬಜೆಟ್ ಅನ್ನೇ ಅವರಿಗೊಪ್ಪಿಸಿ ಅನುಮತಿ ಪಡೆದು ರೂಪಿಸುವ ಹೀನಾಯ ಸ್ಥಿತಿ ಬಂದೊದಗುತ್ತದೆ. ಇಂತಹ ಸಾಲ ನಮಗೆ ಬೇಕೆ?


ಎಸ್.ಎಂ.ಕೃಷ್ಣ ಹೇಳುತ್ತಿದ್ದಾರೆ "ಕರ್ನಾಟಕದ ಅಭಿವೃದ್ಧಿಯಾಗಬೇಕಾದರೆ ಈ ಸಾಲ ಪಡೆಯುವುದಲ್ಲದೆ ಬೇರೆ ಯಾವ ದಾರಿಯೂ ಇಲ್ಲ. ಆದರೆ ಪಶ್ಚಿಮ ಬಂಗಾಳ ಸರ್ಕಾರ ಹೇಳಿತು ಜನತೆಯ ಅನುಕೂಲಕ್ಕಲ್ಲವಾದರೆ, ನಮ್ಮಗೌರವವನ್ನು ಸಾರ್ವಭೌಮತ್ವವನ್ನು ನಿಮಗೊಪ್ಪಿಸಬೇಕು ಎಂದು ಬಯಸುವುದಾದರೆ ನಿಮ್ಮ ಸಾಲವೇ ಬೇಡ"

ಹಾಗಾದರೆ ಸಾಲಪಡೆಯದೆ ಕರ್ನಾಟಕದ ಅಭಿವೃದ್ಧಿ ಹೇಗೆ ಸಾಧ್ಯ? ಒಂದನೆಯದಾಗಿ ಕರ್ನಾಟಕದಲ್ಲಿಯೇ ಜನಸಾಮಾನ್ಯರ ಮೇಲೆ ತೆರಿಗೆಯ ಹೊರೆ ಹಾಕದೆ ದಿಢೀರ್ ಶ್ರೀಮಂತರಾಗುತ್ತಿರುವ ಅತಿಶ್ರೀಮಂತರ ಮೇಲೆ ತೆರಿಗೆಗಳನ್ನು ಹಾಕುವುದು. ರಾಜ್ಯ ಸರ್ಕಾರದ

ಪುಟ 10

ಆಲಮಟ್ಟಿ: ವಿಫಲವಾದ ಕರಸೇವೆ ಜನರನ್ನು ತಪ್ಪುದಾರಿಗೆಳೆವ ನಾಯಕರು

ಎನ್.ಕೆ. ಉಪಾಧ್ಯಾಯ



ಆಗಾಗ ಕೆಲವರಿಗೆ ನೆನಪಾಗುವ ಆಲಮಟ್ಟಿ

ಬಿಜಾಪುರ ಜಿಲ್ಲೆಯ ನೀರಾವರಿಗೆ ಜೀವ ನಾಡಿಯಾದ ಕೃಷ್ಣಾನದಿಗೆ ಆಲಮಟ್ಟಿ ಅಣೆಕಟ್ಟಿನ ಎತ್ತರದ ಕುರಿತು, ಕೃಷ್ಣೆಯ ನೀರಿನ ಉಪಯೋಗದ ಕುರಿತು ಆಂಧ್ರ ಮತ್ತು ಕರ್ನಾಟಕ ಸರಕಾರಗಳ ಮಧ್ಯೆ ಬಿನ್ನಾಭಿಪ್ರಾಯ ಉಂಟಾಗಿದ್ದು ತಮ್ಮ ಸಮಸ್ಯೆಯ ಪರಿಹಾರಕ್ಕಾಗಿ ಎರಡೂ ರಾಜ್ಯ ಸರಕಾರಗಳು ಸುಪ್ರೀಂಕೋರ್ಟ್ ಹಾಗೂ ಸಂವಿಧಾನ ಪೀಠದ ಮೊರೆ ಹೊಕ್ಕಿದ್ದವು. ಕೇಂದ್ರ ಸರಕಾರವೇ ನೇಮಿಸಿದ್ದ ಬಚಾವತ್ ಆಯೋಗದ ಶಿಫಾರಸು ತಮ್ಮ ಮುಂದಿದ್ದು ಅದನ್ನು ಕೇಂದ್ರ ಸರಕಾರದ ಗೆಜೆಟಿನಲ್ಲಿ ಪ್ರಕಟಿಸಿ ಅವು ಮಹಾರಾಷ್ಟ್ರ ಕರ್ನಾಟಕ, ಆಂಧ್ರ ಸರಕಾರಗಳಿಗೆ ಬಂಧನ ಕಾರಿಯಾಗಿದ್ದರೂ ಕೂಡ ತನ್ನ ಎನ್.ಡಿ.ಎ. ಸರಕಾರದ ಉಳಿವಿಗಾಗಿ ಆಂಧ್ರ ಸರಕಾರದ ಮುಖ್ಯ ಮಂತ್ರಿ ಚಂದ್ರಬಾಬು ನಾಯ್ಡು ಅವರ ಒತ್ತಡಕ್ಕೆ ಮಣಿದು ಪ್ರಧಾನ ಮಂತ್ರಿ ವಾಜಪೇಯಿಯವರು ವಿನಾಕಾರಣ ಸುಪ್ರೀಂ ಕೋರ್ಟಿಗೆ ಆಂಧ್ರ ಪರವಾದ ಅಫಿಡವಿಟ್ ಸಲ್ಲಿಸಿದ್ದರ ವಿರುದ್ಧ ಬಿಜಾಪುರ, ಗುಲ್ಬರ್ಗ ರಾಯಚೂರು ಜಿಲ್ಲೆಗಳ ಜನ ಕೇಂದ್ರ ಸರಕಾರದ ವಿರುದ್ಧ ಪ್ರತಿಭಟನೆ ವ್ಯಕ್ತಮಾಡಿದರು. ರೈಲ್ ರೋಕೋ, ರಸ್ತಾ ರೋಕೋ ನಡೆದವು. ಲಚಾವತ್ ಆಯೋಗದ ಶಿಫಾರಸ್ಸು ಪ್ರಕಟವಾಗಿ 26 ವರ್ಷಗಳಲ್ಲಿ ಕರ್ನಾಟಕ ಸರಕಾರದ ಚುಕ್ಕಾಣಿ ಹಿಡಿದಿದ್ದ ಕಾಂಗ್ರೆಸ್, ದಳ ಸರಕಾರಗಳ ಬಚಾವತ್ ಆಯೋಗದ ಶಿಫಾರಸಿನಂತೆ ಕರ್ನಾಟಕಕ್ಕೆ ಸಲ್ಲತಕ್ಕ ನೀರನ್ನು ಉಪಯೋಗಿಸಲು ಅವಶ್ಯಕವಾಗಿ ಬೇಕಾದ ಅಣೆಕಟ್ಟು ಕಾಲುವೆ ಯಾತ ನೀರಾವರಿಗಳತ್ತ ಗಮನ ಹರಿಸಲಿಲ್ಲ. ನೀರಿನ ಉಪಯೋಗ ರೈತರಿಗೆ ದಕ್ಕಲಿಲ್ಲ. ಕರ್ನಾಟಕ ಪ್ರಾಂತ ರೈತ ಸಂಘ ಬಿಜಾಪುರ ಗುಲ್ಬರ್ಗಾ, ರಾಯಚೂರು ಜಿಲ್ಲೆಗಳಲ್ಲಿ ನಿರಂತರವಾಗಿ ಕೃಷ್ಣಾ ಮೇಲ್ದಂಡೆ ಯೋಜನೆಯಡಿಯಲ್ಲಿ ಬರುವ ಅಣೆಕಟ್ಟು ಕಾಲುವೆಗಳಿಗಾಗಿ ಹಲವಾರು ರೀತಿಯ ಹೋರಾಟಗಳನ್ನು ನಡೆಸುತ್ತ ಬಂದು ರೈತರಲ್ಲಿ ಜಾಗೃತಿಯನ್ನುಂಟುಮಾಡಿ, ಸರಕಾರವನ್ನು ಎಚ್ಚರಿಸುತ್ತ ಬಂದವು. ಬಿಜಾಪುರದಲ್ಲಿ ಮುಳುವಾಡ ಏತ ನೀರಾವರಿ, ಇಂಡಿಕಾಲುವೆ, ರಾಯಚೂರಿನಲ್ಲಿ ನಾರಾಯಣಪುರದ ಬಲದಂಡೆ ಕಾಲುವೆ ಹಾಗೆಯೇ ಗುಲ್ಬರ್ಗದ ಹಲವಾರು ಯೋಜನೆಗಳಿಗೆ ಹೋರಾಟದ ಮೂಲಕ ಚಾಲನೆ ನೀಡಿ ಹಣ ಬಿಡುಗಡೆ ಮಾಡಿಸಿ, ಕೆಲಸ ಮುಂದುವರಿಯುವಂತೆ ಮಾಡಿ, ಈ ಹೊತ್ತು ಇಂಡಿ ಕಾಲುವೆ ಮತ್ತು ನಾರಾಯಣಪುರ ಬಲದಂಡೆ ಕಾಲುವೆಯಲ್ಲಿಯ ನೀರು ರೈತರ ಹೊಲಗಳಿಗೆ ಹರಿಯುವಂತೆ ಮಾಡಿದೆ. ಇಂಡಿಕಾಲುವೆಯಲ್ಲಿ ಹರಿಯುವ ನೀರನ್ನು ರೈತರಿಗೆ ಒದಗಿಸಲು ಅಧಿಕಾರಿಗಳು ನಿರಾಕರಿಸಿದಾಗ ಸಿಂದಗಿ ತಾಲೂಕಿನ ಮೊರಟಗಿ ಮತ್ತು ಸುತ್ತ ಮುತ್ತ ಗ್ರಾಮದ ರೈತರು ಕ. ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಕಾಲುವೆಯ ನೀರನ್ನು ರೈತರ ಹೊಲಕ್ಕೆ ಹಾಯಿಸಿ ಎರಡು ವರ್ಷ ಎರಡು ಪಟ್ಟು ಧಾನ್ಯ ಬೆಳೆದಿದ್ದಾರೆ. ಈ ಹೊತ್ತು ಆಲಮಟ್ಟಿ ಕ್ರಸ್ಟ್ ಗೇಟ್ ಕೂಡಿಸಲು ಕರಸೇವೆಗೆ ಕರೆಕೊಟ್ಟ ಗುಲರ್ಗದ ಜನತಾದಳದ ಮಾಜಿ ಮಂತ್ರಿ ವೈಜನಾಥ್ ಪಾಟೀಲರಾಗಲೀ, ನ್ಯಾಯಾಂಗವನ್ನೇ ಎದುರಿಸಬೇಕೆಂದು ಜಂಭ ಕೊಚ್ಚಿ ಕೊಳ್ಳುವ ಪ್ರೊ. ನಂಜುಂಡ ಸ್ವಾಮಿಯವರೇ ಆಗಲಿ ಆಮರಣ ಉಪವಾಸ ಮಾಡುತ್ತೇವೆ, ರಕ್ತ ಸುರಿಸುತ್ತೇವೆ, ಆತ್ಮದಹನ ಮಾಡಿಕೊಳ್ಳುತ್ತೇನೆಂದು ದಿನನಿತ್ಯ ಗಾಂಧಿ ಚೌಕದಲ್ಲಿ ಭಾಷಣ ಬಿಗಿಯುತ್ತಿದ್ದವರಾಗಲೀ ಈ ವರ್ಷ ಮೇ ತಿಂಗಳಲ್ಲಿ, ಬಜಾವತ್ ಆಯೋಗದ ಶಿಫಾರಸಿನಂತೆ ನಮ್ಮ ಪಾಲಿನ ನೀರನ್ನು ಪಯೋಗಿಸುವ ಸಲುವಾಗಿ ಸರಕಾರ ತುರ್ತು ಕ್ರಮ ತೆಗೆದು ಕೊಳ್ಳುವಂತೆ ಹಿಂದೆಂದೂ ಹೋರಾಟ ಮಾಡಲಿಲ್ಲ, ಸರಕಾರದ ಗಮನಸೆಳೆದಿಲ್ಲ. ನಕ್ಸಲೈಟರಂತೆ ಕೆಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಎಲ್ಲವನ್ನು ಕಳಕೊಂಡ ಪ್ರೊ. ನಂಜುಡ ಸ್ವಾಮಿಯವರು ಬಿಜಾಪುರದಲ್ಲಿ ನಡೆಯುತ್ತ ನೀರಿನ ಕುರಿತು ಜನರಲ್ಲುಂಟಾಗಿರುವ ಅಸಮಾಧಾನದ ಲಾಭ ಪಡೆಯಲು ಪ್ರಯತ್ನಿಸಿ ಪ್ರಚೋದನಾತ್ಮಕ ಭಾಷಣಗಳನ್ನಿತ್ತು. ಪ್ರತ್ಯೇಕವಾಗಿಯೇ ರೈತ ಸಂಘದಿಂದ ಕರಸೇವೆಮಾಡುತ್ತೇನೆಂದು ಹೇಳಿ ಏನೂಮಾಡಲಿಕ್ಕೆ ಸಾಧ್ಯವಾಗದೆ ರಾಜ್ಯಾದ್ಯಂತ ರಸ್ತಾ ರೋಕೋ ಮಾಡಲಾಗುವುದೆಂಬ ಜಂಬದ ಹೇಳಿಕೆ ನೀಡಿ ಬಿಜಾಪುರದಿಂದ ಕಾಲ್ತೆಗೆಯ ಬೇಕಾಯಿತು. 3 ತಿಂಗಳಿಂದಲೂ ಕರಸೇವೆಯ ಘೋಷಣೆ ಮಾಡುತ್ತ ಬಂದು, ಬಿಜಾಪುರ ಮುಖಂಡರ ತಲೆಕೆಡಿಸಿ ಕೊನೆಗೆ ಅವರ ಆದೇಶವನ್ನು ವಿರೋಧಿಸಿ ನಂಜುಂಡ ಸ್ವಾಮಿ ಜೊತೆಯಲ್ಲಿ ಕರಸೇವೆ ಮಾಡಿಯೇ ತೀರುತ್ತೇವೆಂದು ಪ್ರಚಾರಗಿಟ್ಟಿಸಿ ಕೊಂಡು ಜನಬೆಂಬಲಸಿಗದೆ ಗುಲ್ಬರ್ಗದ ದಾರಿ ಹಿಡಿಯುವ ಗತಿಕಾಣುವಂತಾಯಿತು. ತಾವು ಶಾಸಕರಾಗಿದ್ದಾಗ, ಮಂತ್ರಿಗಳಾಗಿದ್ದಾಗ, ಮೊನ್ನೆ ವಿಧಾನ ಸಭೆಯ ಚುನಾವಣೆಯಲ್ಲಿ ಸ್ಪರ್ಧಿಸಿದಾಗಲೂ ಇವರಿಗೆ ಕೃಷ್ಣೆಯ ಆಲಮಟ್ಟಿಯ ಗುಲ್ಬರ್ಗಾ ಜಿಲ್ಲೆಯ ನೀರಾವರಿ ಯೋಜನೆಗಳ ನೆನಪೇ ಬರಲಿಲ್ಲ. ಚುನಾವಣೆಯಲ್ಲಿ ಸೋತು ಅಧಿಕಾರ ಕಳೆದುಕೊಂಡಾಗ ಕೃಷ್ಣೆಯ ನೀರು ಇವರ ಕಣ್ಣಿನಿಂದ ಹರಿಯಲಾರಂಭಿಸಿದಂತೆ ಕಂಡು ಬರುತ್ತದೆ.

ಆಲಮಟ್ಟಿ ಅಣೇಕಟ್ಟಿನ ಎತ್ತರದ ಸಮಸ್ಯೆಯನ್ನು ನಮ್ಮ ಸರಕಾರವೇ ಹುಟ್ಟು ಹಾಕಿತ್ತು ಕ್ರಸ್ಟ ಗೇಟ ಕೂಡಿಸುವ ಕಾರ್ಯಕ್ಕೆ ವಿನಾಕಾರಣ ಪ್ರಚಾರ ಗಿಟ್ಟಿಸಲು ಪ್ರಯತ್ನ ಮಾಡಿ ಕೇಂದ್ರ ಸರಕಾರ ಆದಕ್ಕೆ ಮಂಜೂರಾತಿ ನೀಡಿದ್ದರೂ ಆಂದ್ರ ಸರಕಾರ ಸುಪ್ರೀಂ ಕೋರ್ಟಿನ ಕಟ್ಟೆ ಏರಲು ಅವಕಾಶ ಮಾಡಿ ಕೊಟ್ಟಿತು. ಸುಪ್ರೀಂ ಕೋರ್ಟಿನಲ್ಲಿ ದಾವೆ ಇರುವಾಗ ಕೋರ್ಟ್ ನಿಂದನೆಯ ಕೆಲಸ ಮಾಡಬಾರದೆಂಬ ನಮ್ಮ ಸಲಹೆಯನ್ನು ಕೇಳದೆ ಬಿಜಾಪುರ ಕೆಲವು ಜನ ಸ್ವಾಮಿಗಳ ನೇತೃತ್ವದಲ್ಲಿ ಸರದಿ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದರು. ವೈಜನಾತ ಪಾಟೀಲರು ಕರಸೇವೆ ಒತ್ತಡ ತಂದು ನಂತರ ಹಲವಾರು ಶಾಸಕರು ಊರ ಪ್ರಮುಖರೆಲ್ಲಾ ಕರಸೇವೆಯನ್ನು ವಿರೋಧಿಸಬೇಕಾದಂತ ಪ್ರರಿಸ್ಥಿತಿ ಬಂತು.

ಜನರ ಮನಸ್ಸಿನಲ್ಲಿರುವ ಆತಂಕವನ್ನು ರಾಜಕೀಯವಾಗಿಯೂ, ವೈಯಕ್ತಿಕವಾಗಿಯೂ ದುರುಪಯೋಗ ಪಡಿಸಿಕೊಳ್ಳಲು ಪ್ರಯತ್ನ ನಡೆಯುತ್ತದೆ. ಬಿಜಾಪುರದಲ್ಲಿ ನಡೆದ ಹೋರಾಟದ ಗತಿಯೂ ಹಾಗೆಯೇ ಆಲಮಟ್ಟಿ ಸಮಸ್ಯೆಯನ್ನು ಉದ್ರೇಕ ಗೊಳಿಸಿ ಆದರ ಲಾಭಪಡೆಯುವ ಪ್ರಯತ್ನ ನಡೆಯಿತು. ಕೇಂದ್ರ ರಾಜ್ಯ ಸರಕಾರಗಳ ಇಷ್ಟು ವರ್ಷ ಆಡಳಿತೆ ನಡೆಸುತ್ತಿದ್ದವರ ವಿರುದ್ಧ ಭಾವನೆ ಮೂಡಿ ಬಂತು. ಆದರೆ ಅದು ತಾತ್ಪೂರ್ತಿಕ. ಯಾಕಂದರೆ ಚುನಾವಣೆಗಳಲ್ಲಿ ಆಲಮಟ್ಟಿ -ಕೃಷ್ಣಾ ನೀರಿನ ಸಮಸ್ಯೆಗಳು ಪ್ರಧಾನವಾಗಿ ಕಾಣಲಿಲ್ಲ ಆಭಾಗದ ರೈತರಿಗೆ ಈ ಹೋರಾಟ ನಡೆಸುವ ಮುಖಂಡರಿಗೆ ಸುಪ್ರೀಂ ಕೋರ್ಟಿನಲ್ಲಿ ಆಲಮಟ್ಟಿ ಎತ್ತರದ ಪ್ರಶ್ನೆ ವಿಚಾರಣೆಗಿರುವಾಗ ಕೇಂದ್ರ ರಾಜ್ಯಗಳು ಮಧ್ಯೆ ಪ್ರವೇಶಿಸಲಿಕ್ಕೆ ಸಾಧ್ಯವಿಲ್ಲದಂತಾಗಿರುವಾಗ ಕ್ರಸ್ಟ ಗೇಟ ಕೂಡಿಸಿ 524 ಟಿ.ಎಂ.ಸಿ. ನೀರನ್ನು ಉಳಿಸಿ ಕೊಳ್ಳಬೇಕೆಂಬ ವಿಚಾರ ಅಪ್ರಸ್ತುತ. ಹಿಂದೆ 1964 ರಲ್ಲಿ ಆಲಮಟ್ಟಿ ಅಣೆಕಟ್ಟನ್ನು ಉಳಿಸಿಕೊಳ್ಳಲು ನಡೆದ ಹೋರಾಟದಲ್ಲಿ ಕಂಡು ಬಂದಂತಹ ವ್ಯಾಪಕ ಜನಬೆಂಬಲ ಮುಖ್ಯವಾಗಿ ಗ್ರಾಮಾಂತರರಿಂದ ಕಂಡು ಬರಲಿಲ್ಲ.

ಕರಸೇವೆಗೆ ಜನ ಬೆಂಬಲ ಸಿಗದೆ ಒಂದೇ ದಿವಸದಲ್ಲಿ ಆ ಕಾರ್ಯಕ್ರಮ ಮುಗಿಸಬೇಕಾಗಿ ಬಂತು.

ಭಾವನಾತ್ಮಕವಾದ ಚಳುವಳಿ ಏನಾಗುತ್ತದೆಂಬುದಕ್ಕೆ ಬಿಜಾಪುರದಲ್ಲಿ ಆಲಮಟ್ಟಿ ಎತ್ತರಕ್ಕಾಗಿ ನಡೆದ ಹೋರಾಟವೇ ಉದಾಹರಣೆಯಾಗಿದೆ.

ರೈತರನ್ನು ಪರಿಗಣಿಸದ ಕರ್ನಾಟಕ ಬಜೆಟ್

ಸರ್ಕಾರದ ಹಣಕಾಸು ಸಚಿವರು ಹಾಗೂ ಮುಖ್ಯಮಂತ್ರಿಗಳಾದ ಎಸ್.ಎಂ. ಕೃಷ್ಣಾ ಅವರು ತಮ್ಮ ಮೊದಲ ಬಜೆಟ್ ಮಂಡನೆ ಮಾಡಿದ್ದು ಕರ್ನಾಟಕದ ಇಡೀ ರೈತ ಸಮುದಾಯದ ಬವಣೆಯನ್ನು ಹಾಗೂ ಹಿತಗಳನ್ನು ಕಡೆಗಣಿಸಿದ್ದಾರೆ.

ಕರ್ನಾಟಕದಲ್ಲಿ ಪ್ರಮುಖ ಬೆಳೆಗಳಾದ ತೊಗರಿ, ಈರುಳ್ಳಿ, ಮೆಣಸಿನಕಾಯಿ, ಕಬ್ಬು, ಆಲೂ, ಶೇಂಗಾ ಬೆಲೆ ಕುಸಿದು ತೀವ್ರ ಕಷ್ಟನಷ್ಟಗಳನ್ನು ಅನುಭವಿಸುತ್ತಿದ್ದಾರೆ. ಕೃಷಿ ಉತ್ಪನ್ನಗಳ ಬೆಲೆ ಕುಸಿದಾಗ ಮಧ್ಯಪ್ರವೇಶಕ್ಕಾಗಿ ಹಿಂದಿನ ಸರ್ಕಾರ ಸ್ಥಾಪಿಸಿದ ಅವೃತ್ತ ನಿಧಿ ಹೆಚ್ಚಿಸುವ ಬಗ್ಗೆ ಬಜೆಟ್‌ನಲ್ಲಿ ಪ್ರಸ್ತಾಪಿಸದಿರುವುದು ರೈತರ ಪಾಲಿಗೆ ಅತ್ಯಂತ ನಿರಾಶಾದಾಯಕವಾಗಿದೆ. ಬೆಲೆ ಕುಸಿದಾಗ ಮಾರುಕಟ್ಟೆಯಲ್ಲಿ ಮಧ್ಯಪ್ರವೇಶ ಮಾಡುವ ಕುರಿತು ಬಜೆಟ್‌ನಲ್ಲಿ ಪ್ರಸ್ತಾಪಿಸದೇ ಇರುವುದು ಬಂಡವಾಳಗಾರರು ಮತ್ತು ವ್ಯಾಪಾರಸ್ಥರು ರೈತರನ್ನು ಸುಲಿಗೆ ಮಾಡಲು ಮುಕ್ತವಾದ ಅವಕಾಶ ನೀಡಿದಂತಾಗಿದೆ.

ಉತ್ತರ ಕರ್ನಾಟಕದ 6 ಜಿಲ್ಲೆಗಳ ಪ್ರಮುಖ ಬೆಳೆಯಾದ ತೊಗರಿ ಬೆಳೆಗಾರರ ಬೋರ್ಡು ರಚಿಸಬೇಕೆಂಬುದು ಇತ್ತೀಚಿಗೆ ಕೃಷಿ ಸಚಿವರು ಮತ್ತು ಜಿಲ್ಲೆಯ ಸಚಿವರು ಭರವಸೆ ನೀಡಿದರೂ ಕೂಡಾ ಬಜೆಟಿನಲ್ಲಿ ಬೋರ್ಡ್ ರಚಿಸುವ ಬಗ್ಗೆ ಪ್ರಸ್ತಾಪಿಸದಿರುವುದು ಈ ಪ್ರದೇಶದ ರೈತರಿಗೆ ಅನ್ಯಾಯ ಮಾಡಿದಂತಾಗಿದೆ.

ಕರ್ನಾಟಕದಲ್ಲಿ ಪ್ರತಿ ವರ್ಷ 45 ರಿಂದ 50 ಲಕ್ಷ ಟನ್ ಕಬ್ಬು ಹೆಚ್ಚುವರಿ ಉತ್ಪಾದನೆಯಾಗುತ್ತಿದ್ದು ಕಬ್ಬು ಅರೆಯಲು ಕಾರ್ಖಾನೆಗಳು ಇಲ್ಲದೇ ಕರ್ನಾಟಕದ ಕಬ್ಬು ಬೆಳೆಗಾರರು ತೊಂದರೆಗೊಳಗಾಗಿದ್ದಾರೆ. ದೇಶದ ಕಾರ್ಖಾನೆಗಳನ್ನು ಸ್ಥಾಪಿಸಲು ಪರವಾನಗಿ ನೀಡಿದರೂ ಕೂಡಾ ಆರ್ಥಿಕ ಮುಗ್ಗಟ್ಟಿನಿಂದ ಕಾರ್ಖಾನೆಗಳು ಸ್ಥಾಪಿಸಲು ಸಾಧ್ಯವಾಗಲಿಲ್ಲ. ಕಾರ್ಖಾನೆಗಳನ್ನು ಸ್ಥಾಪಿಸಲು ಸಂಪನ್ಮೂಲಗಳನ್ನು ಕ್ರೋಢೀಕರಿಸಲು ಬಜೆಟಿನಲ್ಲಿ ಪ್ರಸ್ತಾಪಿಸದೇ ಇರುವುದು ಕಬ್ಬು ಬೆಳೆಗಾರರ ಪಾಲಿಗೆ ಈ ಬಜೆಟ್ ಕಹಿಯಾಗಿದೆ.

ಕೃಷಿ ಆಯೋಗ ರಚನೆ, ಉತ್ಪಾದನೆ ಹೆಚ್ಚಳ ಮತ್ತು ತಂತ್ರಜ್ಞಾನ ಪೂರೈಕೆ ಇತ್ಯಾದಿ ವಿಷಯಗಳು ಸ್ವಾಗತಾರ್ಹವಾದರೂ ಕೇಂದ್ರ ಸರ್ಕಾರದ ಕೃಷಿ ಉತ್ಪನ್ನಗಳ ಆಮದು ನೀತಿಯಿಂದ ಕರ್ನಾಟಕದ ರೈತರ ಮೇಲೆ ಆಗುತ್ತಿರುವ ಪ್ರತಿಕೂಲ ಪರಿಣಾಮಗಳನ್ನು ಎದುರಿಸಲು ರಕ್ಷಣಾತ್ಮಕ ಕ್ರಮಗಳು ಇಲ್ಲದೇ ಇರುವುದು ರೈತರಿಗೆ ಈ ಸರ್ಕಾರ ನೀಡುವ ಅಂಶಿಕ ಸಹಾಯ ಕೂಡಾ ದಕ್ಕದಂತಾಗಿದೆ.

ನೀರಾವರಿ ತೆರಿಗೆ ಹೆಚ್ಚಳ, ತೋಟಗಾರಿಕೆ ಖಾಸಗೀಕರಣ ನೀರಾವರಿಯ ಕಾಲುವೆಗಳ ನಿರ್ವಹಣಾ ಖಾಸಗೀಕರಣ ಇತ್ಯಾದಿಗಳು ಐ.ಎಂ.ಎಫ್. ಮತ್ತು ವರ್ಲ್ಡ್ ಬ್ಯಾಂಕ್ ನಿರ್ದೇಶನದಂತೆ ತೆಗೆದುಕೊಂಡ ಕ್ರಮಗಳಾಗಿವೆ.

290 ಕೋಟಿ ಕೊರತೆ ಬಜೆಟ್ ತೀವ್ರ ಹಣದುಬ್ಬರಕ್ಕೆ ಕಾರಣವಾಗುತ್ತದೆ. ಜೊತೆಗೆ ಬಜೆಟ್‌ನಲ್ಲಿ ಮಂಡಿಸಿದ ಹಲವಾರು ಅಂಶಗಳನ್ನು ಕೂಡಾ ಪೂರೈಸಲು ಸಾಧ್ಯವಾಗುವುದಿಲ್ಲ. ಈ ಸರ್ಕಾರ ಸಂಪನ್ಮೂಲ ಸಂಗ್ರಹಿಸಲು ಶ್ರೀಮಂತರಿಗೆ ತೆರಿಗೆ ಹಾಕಲು ನಿರಾಕರಿಸಿ, ಬೇರೆ ಬೇರೆ ಮೂಲಗಳಿಂದ ಸಾಲ ಎತ್ತಿ ಸರ್ಕಾರ ನಡೆಸಲು ಮುಂದಾಗಿರುವುದು ಕೃಷ್ಣಾ ಅವರ ಸರ್ಕಾರ ಸಾಲದ ಸರ್ಕಾರವಾಗಿದೆ.

- ಮಾರುತಿ ಮಾನಡೆ

ಸಾಲವನು ಕೊಂಬಾಗ.....

ಪುಟ 7 ರಿಂದ

ಅಧಿಕಾರವ್ಯಾಪ್ತಿಗೆ ಬರುವ ಕೃಷಿ ಆದಾಯ ತೆರಿಗೆ ಹಾಕುವುದು ಇದರಿಂದ ಸಾವಿರಾರು ಕೋಟಿ ರೂ. ಆದಾಯ ಸಾಧ್ಯ. ಎರಡನೆಯದಾಗಿ ರಾಜ್ಯಗಳ ಸ್ವಾಯತ್ತೆಗಾಗಿ, ಹೆಚ್ಚಿನ ಆರ್ಥಿಕ ಅಧಿಕಾರಕ್ಕಾಗಿ, ಕೇಂದ್ರ ಸರ್ಕಾರ ವಸೂಲು ಮಾಡುವ ತೆರಿಗೆಗಳಿಂದ ಹೆಚ್ಚಿನ ಪಾಲಿಗಾಗಿ ಹೋರಾಟ ಮಾಡುವುದು.ಜನತೆಯ ಮೇಲೆ ಆರ್ಥಿಕ ಧಾಳಿ ಮಾಡುವುದಕ್ಕೆ ಬದಲಾಗಿ ಅವರ ಬೆಂಬಲ ಪಡೆದು ಚಳುವಳಿ ಹೂಡುವುದು. ಮೂರನೇಯದಾಗಿ ಅನವಶ್ಯಕ ಅರೆದುಬಾರಿ ಯೋಜನೆಗಳನ್ನು ಕತ್ತರಿಸಿ, ಶ್ರೀಮಂತರ ಸೋಗಿಗಾಗಿನ ಯೋಜನೆಗಳನ್ನು ಕೈಬಿಟ್ಟು, ಸಾಮಾನ್ಯ ಜನತೆಯ ಅನುಕೂಲಕ್ಕಾಗಿ ಆದ್ಯತೆಯನ್ನು ನಿರೂಪಿಸುವುದು. ವೆಚ್ಚದ ಮೇಲೆ ಕಡಿವಾಣ ಹಾಕುವುದು. ನಾಲ್ಕನೆಯದಾಗಿ ವ್ಯಾಪಕವಾದ ಭ್ರಷ್ಟಾಚಾರದಿಂದ ಯೋಜನೆಗಳ ಮೂರನೇ ಒಂದು ಪಾಲಿನಷ್ಟು ರಾಜಕಾರಣ - ಕಂಟ್ರಾಕ್ಟರ್-ಅಧಿಕಾರಿಗಳ ಜೇಬು ಸೇರುತ್ತಿರುವುದಕ್ಕೆ ತಡೆ ಹಾಕುವುದ. ಜನತೆಯ ನಿಯಂತ್ರಣದಲ್ಲಿಯೇ ಅವರು ರೂಪಿಸಿಕೊಂಡ ಆದ್ಯತೆಯ ಮೇರೆಗೆ ಅಭಿವೃದ್ಧಿ ಕಾರ್ಯಕೈಗೊಳ್ಳುವಂತೆ ಅಧಿಕಾರ ವಿಕೇಂದ್ರೀಕರಿಸುವುದು. ರಾಜ್ಯ ಸರ್ಕಾರದ ಬಜೆಟ್‌ನ ಆರ್ಥಿಕ ಧಾಳಿಗಳು ಹಾಗೂ ನೀತಿಗಳ ವಿರುದ್ಧ ಹಾಗೂ ಜನಪರ ಪರ್ಯಾಯಕ್ಕಾಗಿ ಜನರ ಹೋರಾಟವೇ ಉಳಿದಿರುವ ದಾರಿ.

ಕ್ಲಿಂಟನ್ ಭಾರತ ಭೇಟಿ ಮತ್ತು ಮಾಧ್ಯಮ

ವಿಶ್ವಕುಂದಾಪುರ

ಬಾಂಧವ್ಯದ ಹೊಸ ಶಕೆಯ ಕ್ಲಿಂಟನ್ ಭೇಟಿ ಇಂದಿನಿಂದ..... ಅಧ್ಯಕ್ಷ ಕ್ಲಿಂಟನ್‌ಗೆ ಹಾರ್ದಿಕ ಸ್ವಾಗತ..... ನವದೆಹಲಿಗೆ ಬಂದಿಳಿದ ಕ್ಲಿಂಟನ್‌ಗೆ ಭವ್ಯ ಸ್ವಾಗತ..., Clinton Arrives on Historic visit......

ಮಾರ್ಚ್ 3ನೇ ವಾರ ಬೆಳಗಾಗೆದ್ದು ಪತ್ರಿಕೆಗಳ ಮೇಲೆ ಕಣ್ಣು ಹಾಯಿಸಿದವರಿಗೆ ಕಂಡು ಬಂದ ದಪ್ಪಕ್ಷರದ, ಇಡೀ ಇಡೀ ಪುಟವೇ ಎನ್ನುವಷ್ಟು ಜಾಗ ಆಕ್ರಮಿಸಿಕೊಂಡ ಶೀರ್ಷಿಕೆಗಳು ಮತ್ತು ಸುದ್ದಿಗಳು.

ಜಗತ್ತಿನ 'ಅತಿ ಬಲಿಷ್ಠ ಪ್ರಜಾಪ್ರಭುತ್ವ ದೇಶದ' - ಇದನ್ನು ಸಾಮ್ರಾಜ್ಯಶಾಹಿ ದೇಶದ ಎಂದು ಓದಿಕೊಂಡರೆ ಸೂಕ್ತ - ರಾಷ್ಟ್ರಪತಿ ವಿಶ್ವದ ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರಕ್ಕೆ ನೀಡಿದ ಭೇಟಿಯೇ ಒಂದು ಐತಿಹಾಸಿಕ ಘಟನೆ, ಇವರ ಆಗಮನದಿಂದ ಇಲ್ಲಿ ಹಾಲು-ಜೇನಿನ ಹೊಳೆಯೇ ಸುರಿಯುವುದು ಎಂಬ ಭಾವನೆ ಸೃಷ್ಟಿಸುವ ಶೀರ್ಷಿಕೆಗಳು, ಸುದ್ದಿಗಳು ಪತ್ರಿಕೆಗಳು ಹಾಗೂ ಇಲೆಕ್ಟ್ರಾನಿಕ್ ಮಾಧ್ಯಮಗಳಲ್ಲಿ ಮುದ್ರಣಗೊಂಡವು, ಪ್ರಸಾರಗೊಂಡವು.

ವಿಶೇಷವಾಗಿ ಮುದ್ರಣ ಮಾಧ್ಯಮಗಳಲ್ಲಿ, ಅಂದರೆ ಪತ್ರಿಕೆಗಳಲ್ಲಿ ಪ್ರಕಟವಾದ ಕೆಲ ಸುದ್ದಿಗಳತ್ತ ಗಮನ ಹರಿಸೋಣ.

ದಕ್ಷಿಣ ಏಷ್ಯಾದ ಒಂದು ವಾರದ ಪ್ರವಾಸಕ್ಕಾಗಿ ಮಾರ್ಚ್ 19 ರ ರಾತ್ರಿ ಭಾರತ ರಾಜಧಾನಿಗೆ ದೆಹಲಿಗೆ ಕ್ಲಿಂಟನ್ ಬಂದರು. ಮರುದಿನ ಪತ್ರಿಕೆಗಳಲ್ಲಿ ಹೀಗೆಲ್ಲಾ ಪ್ರಕಟವಾಯಿತು.

'ನವದೆಹಲಿಗೆ ಬಂದಿಳಿದ ಕ್ಲಿಂಟನ್‌ಗೆ ಭವ್ಯ ಸ್ವಾಗತ' ಎಂದು ಕನ್ನಡಪ್ರಭ ಆರು ಕಾಲಂ ಶೀರ್ಷಿಕೆ-ಸುದ್ದಿ ಹಾಗೂ 3 ಕಾಲಂ ಫೋಟೋದೊಂದಿಗೆ ಕ್ಲಿಂಟನ್ ಆಗಮನವನ್ನು ಸಾರಿತು! 'ಅಧ್ಯಕ್ಷ ಕ್ಲಿಂಟನ್‌ಗೆ ಹಾರ್ದಿಕ ಸ್ವಾಗತ' ಎಂದಿತು ಪ್ರಜಾವಾಣಿ. 'Bill arrives on Dream trip to India ಎನ್ನುವುದು ಟೈಂಸ್ ಆಫ್ ಇಂಡಿಯಾದ ಶೀರ್ಷಿಕೆಯಾಗಿತ್ತು.



ಸುದ್ದಿಯಾಗದ ಈ ಸುಸ್ವಾಗತ

Clinton to rekindle ties with India ಎಂದು ಮಾರ್ಚ್ 19 ರಂದು ಮುಖಪುಟದಲ್ಲಿ ದೊಡ್ಡದಾಗಿ ಬರೆದ The New Indian Express, ಮಾರ್ಚ್ 21ರಂದು 9 ನೇ ಪುಟವನ್ನು ಬಹುತೇಕವಾಗಿ ಕ್ಲಿಂಟನ್ ಭೇಟಿಗೆ ಮೀಸಲಿಟ್ಟಿತ್ತು.

Clinton arrives to rousing welcome ಎಂಬುದು Deccon Herald ನ ಆರು ಕಾಲಂ ಶೀರ್ಷಿಕೆ. ಜತೆಯಲ್ಲಿ ನಾಲ್ಕು ಕಾಲಂ ಫೋಟೋ 'Gotta go' Clinton arrives ಎಂದಿತು The Indian Express. ನಾಲ್ಕು ಕಾಲಂ ಶೀರ್ಷಿಕೆ ಹಾಗೂ 3 ಕಾಲಂ ಫೋಟೋ ಜೊತೆ. ಮೂರು ಕಾಲಂ ಶೀರ್ಷಿಕೆ ಮತ್ತು ನಾಲ್ಕು ಕಾಲಂ ಭಾವಚಿತ್ರದ ಜತೆ Clinton arrives to a warm welcome ಎಂದಿದ್ದು The Hindu ಪತ್ರಿಕೆ.

ಮಗಳು ಮತ್ತು ಅತ್ತೆ ಮಾತ್ರವೇ

ಅಮೆರಿಕ ಸಾಮ್ರಾಜ್ಯಶಾಹಿಯ ಪ್ರತಿನಿಧಿ, ಬಹುರಾಷ್ಟ್ರೀಯ ಕಂಪನಿಗಳ ಏಜೆಂಟ್ ಬಿಲ್ ಕ್ಲಿಂಟನ್ ಜತೆ ಅವರ ಮಗಳು ಚೆಲ್ಸಿಯಾ ಮತ್ತು ಅತ್ತೆ ಡೊರೊತ ರೋಧಮ್ ಬಂದಿದುದ್ದಕ್ಕೆ ಸುದ್ದಿ ಮತ್ತು ಫೋಟೋಗಳಲ್ಲಿ ವ್ಯಾಪಕ ಪ್ರಚಾರ ಸಿಕ್ಕಿತು. ಆದರೆ ಕ್ಲಿಂಟನ್ ಜತೆ ಬಂದಿದ್ದು ಇವರಿಬ್ಬರು ಮಾತ್ರವೇ ಎಂಬ ಪ್ರಶ್ನೆಯನ್ನು ಕೇಳಬೇಕಾಗುತ್ತದೆ. ofcoursee, ಆ ದೇಶದ ವಿದೇಶಾಂಗ ಸಚಿವರು ಮತ್ತಿತರ ಹಲವು ಮಂತ್ರಿಗಳು ಮತ್ತು ಹಿರಿಯ ಅಧಿಕಾರಿಗಳು ಬರುವುದು ಸಹಜವೇ. ಆದರೆ ಅವರಷ್ಟು ಮಂದಿ ಮಾತ್ರವೇ ಅಧ್ಯಕ್ಷರ ಜತೆ ಆಗಮಿಸಿದರೇ ಎನ್ನುವುದು ಪ್ರಶ್ನೆ.

ಯಾಕೆಂದರೆ ಕ್ಲಿಂಟನ್ ಭಾರತಕ್ಕೆ ಬಂದಿದ್ದು ಇಲ್ಲಿನ ಪ್ರಕೃತಿ ಸೌಂದರ್ಯ ನೋಡಲೆಂದೆ ಅಥವಾ ತಾಜ್‌ಮಹಲ್‌ನ ಸೌಂದರ್ಯವನ್ನು ಆಸ್ವಾದಿಸಲೇ? ಅಥವಾ ಬಡ ಭಾರತದ ದಾರಿದ್ರ್ಯವನ್ನು ಹೋಗಲಾಡಿಸಲೇ? ಅಲ್ಲ, ಬದಲಿಗೆ ಈ ದಾರಿದ್ರ್ಯವನ್ನು ಬಳಸಿಕೊಂಡು ತಮ್ಮ ದೇಶದ ತಿಜೋರಿಯನ್ನು ಇನ್ನಷ್ಟು ಬಲಪಡಿಸಲು ಅವರು ಬಂದಿದ್ದರು. ಈ ಉದ್ದೇಶ ಸಾಧನೆಗಾಗಿ ಅವರ ಜತೆ ಬಹುರಾಷ್ಟ್ರೀಯ ಕಂಪನಿಗಳ ಅನೇಕ ಘಟಾನುಘಟಿಗಳು ನೂರಾರು ಸಂಖ್ಯೆಯಲ್ಲಿ ಆಗಮಿಸಿದ್ದರು.

ಅಭಿವೃದ್ಧಿ ಶೀಲ ದೇಶಗಳನ್ನು ಸುಲಿಗೆ ಮಾಡುವ ಸಾಮ್ರಾಜ್ಯಶಾಹಿ ಧೂರ್ತ ಪ್ರವೃತ್ತಿಯನ್ನು ಮುಚ್ಚಿಟ್ಟೇ ನಮ್ಮ ಮಾಧ್ಯಮಗಳು ಸುದ್ದಿಗಳನ್ನು ಪ್ರಕಟಿಸಿದವು ಎನ್ನುವುದು ತೀರಾ ಖೇದದ ಸಂಗತಿ. ಸರಕಾರದ ಎಲೆಕ್ಟ್ರಾನಿಕ್ ಮಾಧ್ಯಮಗಳಲ್ಲಿ, ಅಂದರೆ ಆಕಾಶವಾಣಿ ಮತ್ತು ದೂರದರ್ಶನದಲ್ಲಿ ಇದು ಸಹಜವೇ ಆಗಿದೆ. ಆದರೆ ಪತ್ರಿಕೆಗಳಲ್ಲೂ, ಖಾಸಗಿ ಚಾನೆಲ್‌ಗಳಲ್ಲೂ ಹೀಗಾಗಿರುವುದಕ್ಕೆ ಬಂಡವಾಳ ಶಾಹಿ ವರ್ಗಗುಣವೇ ಕಾರಣ ಎನ್ನುವುದು ಸುಸ್ಪಷ್ಟ.

ಕ್ಲಿಂಟನ್ ಭಾರತ ಭೇಟಿಯ ನಿಜ ಉದ್ದೇಶ ಏನು, ಅದಕ್ಕಾಗಿ ಅವರ ಜತೆ ಇಲ್ಲಿಗೆ ಯಾರ್‍ಯಾರು ಬಂದಿದ್ದಾರೆ ಅವರ ಏನೇನು ಮಾಡಿಯಾರು ಎನ್ನುವುದಕ್ಕೆ ಪತ್ರಿಕೆಗಳು ಗಮನ ಹರಿಸುವ ಬದಲು ಕ್ಲಿಂಟನ್ ಪ್ರಯಾಣಿಸಿದ ವಿಮಾನ, ಚೆಲ್ಸಿಯಾ ಹೋಳಿ ಆಡಿದ್ದು, ತಾಜ್ ಮಹಲ್ ನೋಡಿ ಕ್ಲಿಂಟನ್ 'ಭಾವ ಪರವಶ' ಆಗಿದ್ದು ಇತ್ಯಾದಿ ಅನಗತ್ಯ ಹಾಗೂ ನಗಣ್ಯ ವಿಷಯಗಳ ಬಗ್ಗೆಯೇ ಗಮನವನ್ನು ಕೇಂದ್ರೀಕರಿಸಿ ವರದಿ ಮಾಡಿದ್ದು ಗುಲಾಮ ಮನೋಭಾವ ಪ್ರದರ್ಶಿಸಿದ್ದು ಹೇಸಿಗೆ ಹುಟ್ಟಿಸುತ್ತದೆ.

ಏರೋಪ್ಲೇನ್ ಟಾಟಾ

ಯಾವುದೇ ಊರಿನಲ್ಲಾಗಲೀ ಆಲ್ಲೊಂದು ವಿಮಾನವೋ, ಹೆಲಿಕಾಪ್ಟರೋ ಹಾರಿ ಹೋದರೆ ಅದನ್ನು ಕಂಡ ಮಕ್ಕಳು ರೋಮಾಂಚನಗೊಂಡು ಏರೋಪ್ಲೇನ್ ಟಾಟಾ... ಏರೋಪ್ಲೇನ್ ಟಾಟಾ ಎಂದು ಹೇಳುವುದನ್ನು ನಾವು ಕಂಡೇ ಇದ್ದೇವೆ. ಈ ಏರೋಪ್ಲೇನ್ ಟಾಟಾಕ್ಕೂ, ಕ್ಲಿಂಟನ್ ಭೇಟಿಗೂ ಏನು ಸಂಬಂಧ ಅನ್ನುತ್ತೀರಾ? ಸಂಬಂಧವಿದೆ.

ಕ್ಲಿಂಟನ್ ಕೂಟವನ್ನು ಹೊತ್ತ ಅಮೆರಿಕದ ವಿಮಾನ ದೆಹಲಿಯ ಪಾಲಂ ವಿಮಾನ ನಿಲ್ದಾಣದಲ್ಲಿ ಇಳಿದಾಗ ಅಲ್ಲಿದ್ದ ಹಿರಿಯ ಪತ್ರಕರ್ತರೊಬ್ಬರು ರೋಮಾಂಚನಗೊಂಡು ಉದ್ಗಾರತೆಗೆದರು. ಅನೇಕ ಸುದ್ದಿಗಾರರು ಮತ್ತು ಭದ್ರತಾ ಪಡೆ ಸಿಬ್ಬಂದಿ ಕೂಡಾರೋಮಾಂಚನ ಗೊಂಡರು.

ಏರ್‌ಫೋರ್ಸ್ ಒನ್, ಅಂದರೆ AFO ಎಂದು ಕರೆಯಲಾಗುವ ಈ ವಿಮಾನದ ಬಗ್ಗೆಯೇ ಪತ್ರಿಕೆಗಳು ಕಾಲಂ ಗಟ್ಟಲೆ ಬರೆದವು. 'ಹಾರಾಡುವ ಶ್ವೇತ ಭವನ' ಬಂದಿಳಿದಾಗ.... ಎಂಬ 3 ಕಾಲಂ ವಿಶೇಷ ಸುದ್ದಿಯನ್ನು ಸಂಯುಕ್ತ ಕರ್ನಾಟಕ ಮುಖಪುಟದಲ್ಲೇ ಪ್ರಕಟಿಸಿತು. ನವದೆಹಲಿಯ Statsmen ಪತ್ರಿಕೆ 'flying palace lands (ಹಾರುವ ಅರಮನೆ ಇಳಿಯಿತು) ಎಂಬ ಶೀರ್ಷಿಕೆಯಡಿ ಇದನ್ನು ಬರೆಯಿತು..

ಅದೇ ರೀತಿ ಕ್ಲಿಂಟನ್ ಪುತ್ರಿ ಚೆಲ್ಸಿಯಾ ರಾಜಸ್ತಾನ ರಾಜಧಾನಿ ಜೈಪುರದಲ್ಲಿ ಹೋಳಿ ಆಟದಲ್ಲಿ ಪಾಲ್ಗೊಂಡಿದ್ದ ಬಗ್ಗೆಯೂ ಸುದ್ದಿ ಮಾಧ್ಯಮಗಳು ರಂಗುರಂಗಿನ ವರದಿ ಹಾಗೂ ಫೋಟೋಗಳನ್ನು ಪ್ರಕಟಿಸಿದವು. 'ಚೆಲ್ಸಿ ರಂಗಿನಾಟ-ಹೋಳಿ ಹಬ್ಬಕ್ಕೆ ಮೆರಗು' ಎಂಬ 3 ಕಾಲಂ ಶೀರ್ಷಿಕೆಯಡಿ ಸುದ್ದಿ 'ವಿಜಯ ಕರ್ನಾಟಕ'ದಲ್ಲಿ ಪ್ರಕಟವಾಯಿತು.

ಬಿಲ್ ಕಾಣಲು ಹುಲಿ ಬಂದಿತೇ?

ಇದೊಂದು ಮೂರ್ಖ ಪ್ರಶ್ನೆ ಎಂದು ಅನಿಸಬಹುದು. ಆದರೆ ನಮ್ಮ ಸುದ್ದಿ ಮಾಧ್ಯಮಗಳ ಪ್ರವೃತಿಗಳಿಗೆ ಇದೂ ಒಂದು ಪ್ರಶ್ನೆಯೇ ಆಸಕ್ತಿಯ ವಿಷಯವೇ.

ಕ್ಲಿಂಟನ್ ಭಾರತ ಭೇಟಿಯ ಅವಧಿಯಲ್ಲಿ ರಾಜಸ್ತಾನದ ರಣಥಂಬೋರ್ ರಾಷ್ಟ್ರೀಯ ಪಾರ್ಕ್‌ಗೆ ಭೇಟಿ ನೀಡುವ ಕಾರ್ಯಕ್ರಮವಿತ್ತು. ಪತ್ರಿಕೆಗಳಿಗೆ ಈ ಒಂದು ವಿಷಯವೇ ಅಂತರ್‍ರಾಷ್ಟ್ರೀಯ ಮಹತ್ವದ ಸುದ್ದಿಯಾಯಿತು.

Will the Big cat oblige Big C? (ದೊಡ್ಡ ಬೆಕ್ಕು ಅಂದರೆ ಹುಲಿ, ದೊಡ್ಡ C ಅಂದರೆ ಕ್ಲಿಂಟನ್‌ಗೆ ಸಲಾಮು ಹಾಕೀತೆ?) ಎಂಬ ಶೀರ್ಷಿಕೆಯಡಿ Hindustan Times ದೊಡ್ಡ ವರದಿಯನ್ನೇ ಪ್ರಕಟಿಸಿತು. ಜೋಧಪುರಕ್ಕೆ ಭೇಟಿ ನೀಡಿದ ವೇಳೆ ಕ್ಲಿಂಟನ್ ಚಡ್ಡಿ ಹಾಕಿಕೊಳ್ಳುತ್ತಾರೆಯೇ ಎಂಬ ವಿಚಾರವನ್ನು ಕೆಲ ಪತ್ರಿಕೆಗಳು ಚರ್ಚಿಸಿದವು!

ಜಗತ್ತಿನ ಏಳು ಅದ್ಭುತಗಳಲ್ಲಿ ಒಂದು, ಅಮರಪ್ರೇಮದ ಸಂಕೇತವೆನ್ನಲಾಗುವ, ತಾಜ್‌ಮಹಲ್‌ಗೆ ಕ್ಲಿಂಟನ್ ಮಗಳ ಜತೆ ನೀಡಿದ ಭೇಟಿಯೂ ಅತಿರಂಜಿತ ಪ್ರಚಾರ ಪಡೆಯಿತು.

'ವಾಹ್ ತಾಜ್! ನನ್ನ ಜೀವನದ ಬಯಕೆ ಈಡೇರಿತು' ಎಂಬ ಕ್ಲಿಂಟನ್ ಉದ್ಗಾರವನ್ನೇ ಶೀರ್ಷಿಕೆಯಾಗಿರಿಸಿಕೊಂಡು 'ಪ್ರಜಾವಾಣಿ' ಮಾ. 23 ರಂದು ನಾಲ್ಕು ಕಾಲಂಗಳ ಸುದ್ದಿ ಪ್ರಕಟಿಸಿತು. ಇದರ ನಡುವೆ ಬಡಜನರು ಹಾಗೂ ಮಧ್ಯಮವರ್ಗದವರ ಅಡುಗೆಯ ಇಂಧನ ಮೂಲವಾದ ಸೀಮೆಎಣ್ಣೆ ಹಾಗೂ ಅಡುಗೆ ಅನಿಲ ದರವನ್ನು ಬಿಜೆಪಿ ನೇತೃತ್ವದ ಸರಕಾರ ಗಗನಕ್ಕೇರಿಸಿ ಜನತೆಯ ಹೊಟ್ಟೆ ಮೇಲೆ ಏಟು ಹಾಕಿದ್ದು ಎಲ್ಲ ಪತ್ರಿಕೆಗಳಿಗೆ ಸಣ್ಣ ಸುದ್ದಿಯಾಯಿತು.

ಇವೆಲ್ಲವುಗಳ ಜತೆಯಲ್ಲಿ, ಸಾಮ್ರಾಜ್ಯಶಾಹಿ ನೇತಾರ ರಾಷ್ಟ್ರದ ಅಧ್ಯಕ್ಷರ ಪ್ರವಾಸಕ್ಕೆ ದೇಶದೆಲ್ಲೆಡೆ ವ್ಯಕ್ತವಾದ ಆಕ್ರೋಶ, ಪ್ರತಿಭಟನೆಗೂ ಸೂಕ್ತವಾದ 'ಸುದ್ದಿನ್ಯಾಯ' ಒದಗಿಸಲಿಲ್ಲ ಎನ್ನುವುದು ಗಮನಾರ್ಹ ಅಂಶ.

ಅಧಿಕಾರದಿಂದ ಹೊರಗಿದ್ದಾಗ ಸ್ವದೇಶಿ ಸ್ವದೇಶಿ ಎಂಬ ಮಂತ್ರ ಪಠಿಸುತ್ತಿದ್ದ ಬಿಜೆಪಿ ಹಾಗೂ ಅದರ ಮಿತ್ರಪಕ್ಷಗಳು ವಾಸ್ತವವಾಗಿ ಹೇಗೆ ವಿದೇಶಿ ಶಕ್ತಿಗಳಿಗೆ, ಸ್ಪಷ್ಟವಾಗಿ ಹೇಳಬೇಕೆಂದರೆ ಸಾಮ್ರಾಜ್ಯಶಾಹಿ ಶಕ್ತಿಗಳಿಗೆ ದೇಶವನ್ನು ಒತ್ತೆಯಿಡುತ್ತಿವೆ ಎಂಬುದಕ್ಕೆ ನಮ್ಮ ಮುಂದೆ ಅನೇಕಾನೇಕ ದೃಷ್ಟಾಂತಗಳೇ ಇವೆ. ಅದನ್ನು ಇಲ್ಲಿ ಚರ್ಚಿಸುವುದು ಅನಗತ್ಯ. ಈ ವಿಚಾರವನ್ನು ಇಲ್ಲಿ ಪ್ರಸ್ತಾಪಿಸಿರುವುದು ಏಕೆಂದರೆ ಸಾಮ್ರಾಜ್ಯಶಾಹಿ ಶಕ್ತಿಗಳಿಗೆ ಮಣಿದು ಈ ಸರಕಾರ ಜನತೆಯ ಪ್ರತಿಭಟನೆಯ ಹಕ್ಕನ್ನು ಕೂಡ ಕಿತ್ತುಕೊಳ್ಳಲು ಹೊರಟಿರುವುದಕ್ಕಾಗಿ.



ಎಲ್ಲೆಲ್ಲೂ ಇಂತಹುದೇ ತುಣುಕುಗಳು

ಕ್ಲಿಂಟನ್ ಭೇಟಿ ಕೆಲವೇ ಪ್ರದೇಶಗಳಿಗೆ ಸೀಮಿತವಾಗಿತ್ತಾದರೂ ವಿಶೇಷವಾಗಿ ಎಡಪಕ್ಷಗಳ ಕಾಳಜಿಯಿಂದ ಇಡೀ ದೇಶದಲ್ಲಿ ಸಾಮ್ರಾಜ್ಯಶಾಹಿ ಶಕ್ತಿಗೆ ವಿರುದ್ಧವಾದ ಪ್ರತಿಭಟನೆಯ ಅಲೆ ಎದ್ದಿತು. ರಾಜಧಾನಿ ದೆಹಲಿಯಲ್ಲೂ ಪ್ರತಿಭಟನಾ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಆದರೆ ನಮ್ಮ ಉದಾರವಾದಿ ಪ್ರಧಾನಿ ಎ.ಬಿ.ವಾಜಪೇಯಿ ನೇತೃತ್ವದ ಸರಕಾರ ದೆಹಲಿಯಲ್ಲಿ ನಿಷೇದಾಜ್ಞೆ ಹೇರಿತ್ತು. ಇದನ್ನು ಪ್ರತಿಭಟಿಸಿ ಅನೇಕ ಕಲಾವಿದರು, ಬುದ್ಧಿಜೀವಿಗಳು ಹೇಳಿಕೆ ನೀಡಿದ್ದರು.


ಖ್ಯಾತ ಆರ್ಥಿಕ ತಜ್ಞ ಪ್ರಭಾತ ಪಟ್ನಾಯಕ್, ದಿವಾನ್ ಸುಂದರಂ, ರಾಮ್ ರಹಮಾನ್, ಎಂ.ಕೆ.ರೈನಾ, ಶಂಷಾದ್, ಇಮ್ರಾನ್ ಕಾದಿರ್, ಸಿ.ಪಿ.ಚಂದ್ರಶೇಖರ್, ಜಯಂತಿ ಘೋಷ್, ಗೀತಾ ಹರಿಹರನ್, ಕಮಲ್ ಮಿತ್ರ, ಗೀತಾ ಕಪೂರ್, ರೋಮಿ ಖೋಸ್ಲಾ, ಕೆ.ಎನ್.ಪಣಿಕ್ಕರ್ ಮತ್ತಿತರರು ಹೇಳಿಕೆಗೆ ಸಹಿ ಹಾಕಿದ್ದರು.

ಜನತೆಯ ಆಕ್ರೋಶವನ್ನು ಪ್ರತಿಬಿಂಬಿಸುವ ಈ ಹೇಳಿಕೆ ಪ್ರಕಟಿಸಲು ಬಹುತೇಕ ಪತ್ರಿಕೆಗಳಿಗೆ ವ್ಯವಧಾನವೂ ಇರಲಿಲ್ಲ! ಜಾಗವೂ ಇರಲಿಲ್ಲ!!

ಭದ್ರತೆ ಕಾರಣಗಳ ಮೇಲೆ ಕ್ಲಿಂಟನ್ ಭೇಟಿಯ ಪ್ರದೇಶಗಳಲ್ಲೆಲ್ಲ ಭಾರೀ ಕ್ರಮಗಳನ್ನು ಕೈಗೊಳ್ಳಲಾಗಿತ್ತು. ತಾಜ್‌ಮಹಲ್ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಜನರು ಮನೆಯಿಂದ ಹೊರಗೆ ಬಾರದಂತೆ ನಿರ್ಬಂಧಿಸಲಾಗಿತ್ತು. ಇದನ್ನು ಪ್ರತಿಭಟಿಸಲು ಭಾರೀ ಸಿದ್ಧತೆ ನಡೆಸಲಾಗಿದೆ ಎಂಬ ವರದಿಗಳು ಪ್ರಕಟವಾಗಿರುವುದು ಬಿಟ್ಟರೆ ಕ್ಲಿಂಟನ್ ಭೇಟಿ ವೇಳೆ ಯಾವ ರೀತಿಯ ಪ್ರತಿಭಟನೆ ನಡೆಯಿತು ಎಂಬ ಬಗ್ಗೆ ಚಕಾರವೇ ಇಲ್ಲ.

ಕ್ಲಿಂಟನ್ ಭೇಟಿ ಪ್ರತಿಭಟಿಸಿ ದೆಹಲಿಯಲ್ಲಿ ಸಿಪಿಐ(ಎಂ) ಮತ್ತಿತರ ಎಡಪಕ್ಷಗಳ ಕಾರ್ಯಕರ್ತರು ನಡೆಸಿದ ಪ್ರದರ್ಶನವನ್ನು ಚದುರಿಸಲು ಭದ್ರತಾ ಪಡೆಗಳು ನೀರಿನ ಬುಲೆಟ್ ಪ್ರಯೋಗಿಸಿದರು. ಆದರೆ ಫೋಟೋ ಕೆಲ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಸುದ್ದಿಯೇನೂ ಇಲ್ಲ. 'ಸಂಯುಕ್ತ ಕರ್ನಾಟಕ'ದಲ್ಲಿ ಮಾತ್ರ 'ಕಮ್ಯುನಿಸ್ಟರಿಂದ ಕ್ಲಿಂಟನ್ ಪ್ರತಿಕೃತಿ ದಹನ' ಎಂಬ 3 ಕಾಲಂ ಸುದ್ದಿ ಪ್ರಕಟ. ಇದು ಮುಖಪುಟದಲ್ಲೇ ಪ್ರಕಟವಾಗಿರುವುದು ಗಮನಾರ್ಹ.

ಒಟ್ಟಾರೆಯಾಗಿ ಕ್ಲಿಂಟನ್ ಭೇಟಿ ಬಗ್ಗೆ ಪತ್ರಿಕೆಗಳು ಮಾಡಿರುವ ಕವರೇಜ್ ಗಮನಿಸಿದರೆ ಭಾರತದ ವಿಶಾಲ ಮಾರುಕಟ್ಟೆಯಲ್ಲಿ ತಳವೂರಲು ಸಾಮ್ರಾಜ್ಯಶಾಹಿ ಶಕ್ತಿ ನಡೆಸಿರುವ ಹುನ್ನಾರವನ್ನು ಅರ್ಥಮಾಡಿಕೊಳ್ಳಲು ನಮ್ಮ ಮಾಧ್ಯಮಗಳು ಪೂರ್ಣ ವಿಫಲವಾಗಿವೆ. ಅಥವಾ ಉದ್ದೇಶ ಪೂರ್ವಕವಾಗಿ ಅದನ್ನು ಮುಚ್ಚಿಟ್ಟು ಕ್ಲಿಂಟನ್ ಭೇಟಿಯಿಂದಲೇ ಭಾರತದ ಉದ್ಧಾರ ಸಾಧ್ಯ ಎಂಬ ಭ್ರಮೆಯನ್ನು ಹರಡಲು ಪಣತೊಟ್ಟಿವೆ ಎಂದು ಅರ್ಥವಾಗುತ್ತದೆ.



ಸ್ವಾಮಿ, ನೀವು ಈಗ ಹೊರಬರಬಹುದು. ಅತಿ ದೊಡ್ಡ ಪ್ರಜಾಪ್ರಭುತ್ವದ ದೊರೆ ಹೋಗಿ ಆಯ್ತು

ಕ್ಷಾಮ

ಬರಗೂರು ರಾಮಚಂದ್ರಪ್ಪ



ಕಥೆ ಕಳೆದ ಸಂಚಿಕೆಯಿಂದ

ರಾಮು "ಯಾಕೊ ಚಳಿ, ಗಾಳಿ ಜಾಸ್ತಿ ಆಗಿದ್ದಂಗೈತೆ ಕಣೆ. ಬಾಗಿಲು ಬಿಗಿಯಾಗಿಲ್ಲ ಏನಾಗ್ತೈತೊ ಏನ್ನತೆಯೊ" ಎಂದಾಗ ಚನ್ನಿಗೆ ಚುರುಗುಟ್ಟ ಬೆಚ್ಚಿದಂತಾಗಿ ನಿಸ್ತೇಜಭಾವದಿಂದ ಸುಮ್ಮನೆ ಗಂಡನ ಮುಖ ನೋಡಿ, ಏನೂ ಹೇಳಲು ತೋಚದೆ ಮತ್ತ ಹಾಗೇ ತಲೆಕುಟ್ಟಿಕೊಂಡಳು. "ಎಲ್ಲಾ ಸರ್ಯೋಗ್ತೈತೆ ಬಿಡು. ಯಾಕ್ ಸುಮ್ನೆ ಚಿಂತೆ ಮಾಡ್ತೀಯ" ಎಂದ ಗಂಡನ ಮುಖವನ್ನು ಕ್ಷಣಕಾಲ ನೋಡಿ ವಿಷಾದದ ನಸುನಗೆಯಿಂದ ಮತ್ತೆ ಸೊಪ್ಪು ಬೆಂದಿದೆಯೊ ಇಲ್ಲವೊ ನೋಡಲು ಮುಚ್ಚಳ ತೆಗೆದಾಗ ಬಾಳಿನುದ್ದಕ್ಕೂ ಸೆರೆಯಲ್ಲಿರಬೇಕಾಗ ಬಹುದೆಂದು ತಳಮಳಿಸುತ್ತಿದ್ದವರನ್ನು ಇದ್ದಕ್ಕಿದ್ದಂತೆ ಬಿಡುಗಡೆ ಮಾಡಿದಂತೆ ನೀರಿನ ಬೇಗೆ ಭಗ್ಗನೆ ನುಗ್ಗಿ ಬಂದು ಮುಖಕ್ಕೆ ಕಾವು ತಗುಲಿ ಮನಸ್ಸಿನಾಳಕ್ಕೆ ಇಳಿದಂತಾಗಿ ಕೈಕಾಲು ಬಂಧಿಸಿದಂತಾಗಿ ಸೌಟು ಹಿಡಿದು ಸ್ವಲ್ಪ ಹೊತ್ತು ಹಾಗೇ ಕುಳಿತುಬಿಟ್ಟಳು.

ರಂಗಪ್ಪ ತನ್ನ ಹೊಲಕ್ಕೆ ಕೂಲಿಗೆ ಬರುತ್ತಿದ್ದವರೊಂದಿಗೆ ಚೆಲ್ಲಾಟದ ಮಾತಾಡುತ್ತಲೇ ಬಲೆ ಬೀಸುವುದರಲ್ಲಿ ನಿಸ್ಸೀಮನೆಂದೇ ರಾಮ ಚನ್ನಿಗೆ ಮೊದಲೇ ಹೇಳಿದ್ದ- ಅವ್ನ್ ಕಚ್ಚೆ ಬದ್ರಯಿಲ್ಲ ಚನ್ನಿ. ಜ್ವಾಪಾನ" ಅಂತ. ಕೂಲಿ ಮಾಡದೆ ವಿಧಿಯಿಲ್ಲದ್ದರಿಂದ ಹೋಗಬೇಕಾಗಿಬಂದು, ಒಂದು ಸಾರಿ ರಂಗಪ್ಪ ಚನ್ನಿಯ ಹತ್ತಿರ ನಾಲಗೆ ಉದ್ದಮಾಡಿ ಚೆಲ್ಲಾಟದ ಮಾತಾಡಿದ್ದನ್ನು ಸಹಿಸದೆ " ನಿನ್ನನೆ ಹಾಳಾಗ, ನಿನ್ನ ನಾಲ್ಗೀಗೆ ವುಳ ಬೀಳ, ನಿನ್ನೊಲ್ದಾಕೆ ಕಾಲಿಟ್ರೆ ಕೇಳು" ಎಂದೆಲ್ಲ ರಾಚಿ ಬಂದ ಚನ್ನಿ ಅಂದಿನಿಂದ ಅವನ ಹೊಲಕ್ಕೆ ಕಾಲಿಟ್ಟಿರಲಿಲ್ಲ. ರಂಗಪ್ಪ ಬುಟ್ಟಿಗೆ ಬಿದ್ದಾಳೇನೊ ಎಂದು ಕೀಟಲೆ ಬಿಟ್ಟಿರಲಿಲ್ಲ.

ಪಕ್ಕದ ಮನೆ ಕಾಳಮ್ಮ ಬಂದು "ಕೆರೇಗೆ ಮಂಗೆ ಬಿದ್ದೈತಂತೆ ಕಣಮ್ಮ ಚನ್ನಕ್ಕ, ಬೋಲ್ ಬೋರಾ ಗೋಗ್ತ ಐತಂತೆ ನೀರು. ಜತ್ಗೆ ಒಂದ್ಕಡೀಕೆಲ್ಲೋ ಏರಿ ಬಿರುಕು ಬಿಟ್ಟೈತಂತೆ. ಈಗೇನಾರ ಸರ್ಯಾಗ್ಡಿದ್ರೆ ಕೆರೇಗೆ ಅಪಾಯ್ವಂತೆ. ಮಣ್ಣು ಗಿಣ್ಣು ಆಕಾಕೋಗ್ಬೇಕಂತೆ ಊರೋರು. ಬಾರಮ್ಮಣ್ಣೆ ನೀನೂನು" ಎಂದಾಗ, ರಾಮ "ಏನವ್ವ" ಎಂದ ಆಶ್ಚರ್ಯದಿಂದ. "ಹೂಂ ಕಣ್ಣ" ಎಂದಳು ಕಾಳಮ್ಮ. "ಅಯ್ಯೋ!" ಎಂದ. ತನಗೇ ಆಘಾತವಾದಂತೆ ಚನ್ನಿಗೂ ಕಳವಳ; ಜತೆಗೆ ಬೆಳೆಯುವ ತಳಮಳ. " ಈ ಮಳೆ ನೋಡ್ದಾಗ ನಂಗೂ ಯಿಂಗಾಗ್ತೈತೆ ಅಂಬ್ತ ಅನ್ನಿತ್ತು" ಎಂದಳು " ಜಲ್ದು ಏರಿ ಸರ್ಯಾಗ್ಡಿದ್ರೆ ಜೋರಾಗ್ ಮಳೆ ಬಂದಾಗ ಕಿತ್ಕಂಡೋಗ್ಬೈವ್ದು; ನಮ್ಮೂರ್ರ್ ಕೆರೇಗೆ ಎಂದೂ ಯಿಂಗಾಗಿರ್ಲಿಲ್ಲ ಕಣಾ ಕಾಳಮ್ಮ" ಎಂದು ಆತಂಕಪಟ್ಟ ರಾಮ. "ಉಂಡೂ ತಿಂದು ಬತ್ತೀನ್ ಕಣವ್ವ" ಎಂದಳು ಚನ್ನಿ.

ಸೊಪ್ಪು ಬೆಂದಿತ್ತು. ಇದ್ದ ಸ್ವಲ್ಪ ರಾಗಿಹಿಟ್ಟಿಗೇ ಎಸರು ಇಟ್ಟು ಮುದ್ದೆ ಮಾಡಿ ರಾಮನಿಗೆ ಬಡಿಸಿ ತಾನು ಬರೀ ಸೊಪ್ಪು ತಿಂದು ಕುಳಿತಳು. ಇದನ್ನು ಗಮನಿಸಿದ ರಾಮನಿಗೆ ಕರುಳು ಕುಯ್ದಂತಹ ವೇದನೆಯಾಗಿ ನಿಸ್ಸಹಾಯಕ ಸ್ಥಿತಿಯಿಂದ ಒಳಗೇ ಒದ್ದಾಡಿದ. " ಚನ್ನಿ ಯಾಕಿಂಗ್ಮಾಡ್ತೀಯ? ನೀನೂ ಅಷ್ಟುಂಡು ನಂಗಿಷ್ಟಿಟ್ಟಿದ್ರಾಗ್ತಿರ್ಲಿಲ್ಲ? ದಿನಾ ಯೋಳಾಕಾಗ್ತೈತ?" ಎಂದ- "ಒಬ್ರೀಗೆ ಆಗಾಕಿಲ್ಲ- ಇನ್ನು ಇಬ್ರು ಉಂಬಾದೆಂಗೆ? ಕಾಯ್ಲ ಕಸಾಯ್ಲೋರು ಉಂಡ್ರೆ ಸಾಕು" ಎಂದಳು. ಸುಮ್ಮನಾದ; ಜಂತೆಯ ಕಡೆ ನೋಡುತ್ತ ಮಲಗಿದ. ಗಾಳಿ ಬೀಸಿ ಬಾಗಿಲು ಕಿರ್ರೆಂದಾಗ " ಇವತ್ತೇನೊ ಬಂದೈತೆ ಇದ್ಕೆ. ಯಾವತ್ತಿದ್ದಂಗಿಲ್ಲ; ಈ ಗಾಳಿ ನೋಡು ಏನ್ ಚಿರ್ರಂಬೈತೆ" ಎನ್ನುತ್ತ ದುಪ್ಪಟಿಯನ್ನು ಮೈತುಂಬ ಹೊದ್ದು ಗೂಡರಿಸಿಕೊಂಡ.

ಚನ್ನಿ ಕುಳಿತಿದ್ದಳು; ಏನೋ ಹಟ ಸಾಧಿಸಿದ್ದಾಯಿತು; ಮೈಗೆ ಸುಖವಿಲ್ಲ; ಮನಸ್ಸಿಗೆ ಶಾಂತಿಯಿಲ್ಲ; ಹೇಗೆ ಏಗುವುದೆಂದೇ ತಿಳಿಯುತ್ತಿಲ್ಲ ಎಂದು ಚಿಂತಿಸುತ್ತಿರುವಾಗ ಗುಡುಗು ಮಿಂಚುಗಳ ಆರ್ಭಟ ಕಂಡು, ಮಳೆ ಬರಬಹುದು, ಕೆರೆ ಏನಾಗಬಹುದು? ಒಡೆದೇ ಬಿಟ್ಟರೆ? ಎಂದು ಕಲ್ಪಿಸಿಕೊಂಡಾಗ ನೆಲ ನಡುಗಿದಂತಾಗಿ, ಗಾಳಿ ಧೂಳುಪ ಎದ್ದು, ಬಾಗಿಲು ರೊಯ್ಯನೆ ಹಿಂದಕ್ಕೆ ಬಂದು, ಮತ್ತೆ ಮುಂದಕ್ಕೆ ಹೋಗಿ ಒಳಬಂದ ಮಳೆವಾಸನೆ ಅಲ್ಲೇ ಸುತ್ತಿಕೊಂಡು ಮೂಗಿಗೆ ಬಡಿದು, ಕೆರೆ ಕಣ್ಣ ಮುಂದೆ ಬಂದು ಜೊತೆ ಜೊತೆಯಾಗೇ ಭವಿಷ್ಯ ಭೀಕರವೆನಿಸಿ, ಕೊತಕೊತ ಕುದಿತದ ಮಧ್ಯೆ ಸಿಕ್ಕಿದಂತೆ ಭಾಸವಾಗಿ, ಯಾವುದೋ ಬಹುದಿನ ಮಲಗಿದ್ದ ಶಕ್ತಿ ಮೈಯೆಲ್ಲವನ್ನು ಹಿಂಡಿ ಹಿಪ್ಪೆ ಮಾಡುತ್ತಿರುವಂತೆ, ಶಕ್ತಿಯೇ ಇಲ್ಲದವಳಂತೆ ಮೆಲ್ಲನೆ ಎದ್ದು ಬಾಗಿಲನ್ನು ಮುಂದು ಮಾಡುವಾಗ ಗಂಡಸರು ಹೆಂಗಸರು ಸಲಿಕೆ, ಗುದ್ದಲಿ, ತಟ್ಟೆ ಸಮೇತ ಹೋಗುತ್ತ, " ಮಳೆ ಬರಂಗಾಗ್ತೈತೆ ಮೂಡ್ಗಡೀಕೆ ಮಿಂಚ್ತಾ ಐತೆ ಬರ್ರಮ್ಮ ಅಂಗೆ ಜಲ್ದು" ಎಂದು ಅವರಿವರನ್ನು ಕೂಗುತ್ತಿರುವಾಗ ಮುಂದಾಳತ್ವ ವಹಿಸಿದ್ದ ಊರ ಪಟೇಲ, " ಬರ್ರಿ ಜುಲ್ದು ಆಮ್ಯಾಕೆ ತಾರಾತಿಗ್ಡಿ ಅಗ್ಬಿಡ್ತೈತೆ. ಊರ್ಕೆಲ್ಸ ಮಾಡ್ವಾಗ ಕೀಸ್ ಬುದ್ಧಿ ಇರ್ಬಾರ್ದು. ಏ... ಕಾಳಮ್ಮ ಚೆನ್ನಕ್ಕ ಮಲ್ಲಕ್ಕ... ಬರ್ರಮ್ಮ ಬರ್ರೀ... ಎಂದು ಕೂಗುತ್ತಿದ್ದಾಗ ಚನ್ನಿ " ಬಂದೇ ಕಣಣ್ಣ ಈಗ" ಎನ್ನುತ್ತ ಹಾಗೇ ನಿಂತಳು. ಅವರೆಲ್ಲ ಮುಂದುವರಿದಾಗ ಬಾಗಿಲಿಗೆ ಒಳಚಿಲಕ ಹಾಕಿದಳು. ಒಳಚಿಲಕ ಊದ್ರವಿಲ್ಲದ್ದರಿಂದ ಬಾಗಿಲು ಗಾಳಿಗೆ ದಬದಬ ಬಡಿದುಕೊಳ್ಳುತ್ತಿತ್ತು. " ಮಲ್ಲಿ ಕೆರೆ ಕೆಲ್ಸಕ್ಕೊಗ್ತಾಳೊ ಇಲ್ವೊ" ಎಂದುಕೊಂಡಳು. " ಒಳ್ಳೇ ವೈನಾಗವ್ಳೆ ವೈತುಂಬ್ಕೊಂಡು ಎಂದುಕೊಂಡು "ತೋಟತ್ತಾವಿರೊ ರಂಗಪ್ಪನ ರೂಮ್ನಾಕೆ ವೋಗಿ ಮಲಗಿದ್ದು ಬರಾದ್ ಬಿಟ್ಟು ಮಲ್ಲಿ ಕೆರೆತಾವಲ್ಲೋಗ್ತಾಳೆ" ಎಂದು ಯೋಚಿಸಿ ನೋಡೋಣವೆಂದು ಬಾಗಿಲು ತೆರೆದು ಹಟ್ಟಿಗೆ ಬಂದು ಹಜಾರದ ಮೂಲೆಯಲ್ಲಿ ಮುದುಡಿ ಕುಳಿತಿದ್ದ ಮಲ್ಲಿಯನ್ನು ನೋಡಿ " ಕೆರೆತಾವ ವೋಗಾಕಿಲ್ವ ಮಲ್ಲಕ್ಕ" ಎಂದಳು. ಮಲ್ಲಿಯೇ " ಬಿಡ್ ಬಿಡು ಚನ್ನಕ್ಕ ನಂಗ್ಯಾಕೆ. ಇಷ್ಟ ಇರಾರೋಗ್ತಾರೆ ನಿಮ್ಮಂದೋರು ವೋಗಂಗಿದ್ರೆ ವೋಗ್ರವ್ವ, ಮಾರಾಗಿತ್ತೀರಂಗೆ" ಎಂದು ಕ್ಷಣಕಾಲ ಸುಮ್ಮನಿದ್ದು, " ನಾನು ಸ್ವಲ್ಪ ವೊತ್ತಿಗ್ಮುಂಚೇಲಿ ವೊರೀಕಾಗಿದ್ದೀನಿ ಕಣೇ ಚನ್ನಕ್ಕ" ಎಂದಳು. ಚನ್ನಿ "ಓ ಎನ್ನುತ್ತ ಆಕಾಶದ ಕಡೆಗೆ ನೋಡಿದಳು. ಮಳೆ ಬರುವ ಸೂಚನೆಯಿದೆ. ನಿಮಿಷಕ್ಕೊ ಎರಡು ನಿಮಿಷಕ್ಕೊ ಹೋಗುವ ಮನಸ್ಸೇ ಬಾರದೆ ಒಳಬಂದು ಬಾಗಿಲು ಹಾಕಲು ಹೋಗಿ ಹಾಳು ಚಿಲಕ ಎಂದು ಬೈದುಕೊಂಡಳು. ಎತ್ತ ಕಡೆ ಹೋಗುವುದು? ಕೆರೆ ಕೆಲಸಕ್ಕೊ ಅಥವಾ....

ಅಥವಾ... ಹೇಗಿದ್ದರೂ ಎಲ್ಲಿ ಇವತ್ತು ರಂಗಪ್ಪನಿಗೆ ಮಗ್ಗುಲಾಗೂಲ್ಲ, ಆ...ಲ್ಲಿ...ಗೆ.....

ಏನೋ ಆವೇಶ ಬಂದಂತೆ ಗುಂಡುಕಲ್ಲು ತೆಗೆದುಕೊಂಡು ಒಳಚಿಲಕದ ಮೊಳೆಯನ್ನು ಯರಬಿರಿ ಕುಟ್ಟಿದಳು. ಏಟು ಮೊಳೆಗೆ ಬೀಳದೆ ಚಿಲಕಕ್ಕೆ ಬಿದ್ದು ಅದು ಲಬುಕಿ ಇನ್ನೂ ಸಡಿಲವಾಗಿ ಸಿಕ್ಕಾಪಟ್ಟೆ ಬೇಸರ ಬಂದು, ಗಾಳಿಗೆ ಬಡಿದಾಡುತ್ತ ಕಿರುಗುಟ್ಟುವ ಬಾಗಿಲ ಮೇಲೆ ಸಿಟ್ಟುಬಂದು ಹೇಗೂ ಒತ್ತಿ ಹಿಡಿದುಕೊಂಡು ಚಿಲಕವನ್ನು ಸರಿ ಮಾಡಲೇಬೇಕೆಂದು ಹಾಗೂ ಹೀಗೂ ಪ್ರಯತ್ನಿಸುತ್ತಿರುವಾಗಲೇ ಮಳೆ ಇಷ್ಟಿಷ್ಟೇ ಹನಿಯಲು ಪ್ರಾರಂಭಿಸಿ ಹೆಚ್ಚಾಗುವ ಸೂಚನೆ ಕಂಡುಬಂದು, ಇವಳ ಪ್ರಯತ್ನ ಇನ್ನೂ ಹೆಚ್ಚಾಗಿ, ಆದರೆ ವಿಫಲವಾಗುತ್ತ ಬಂದು ಮನಸ್ಸು ಉದ್ವಿಗ್ನವಾಗಿ ಮೈಯೆಲ್ಲ ಉರಿಯೆದ್ದು ತಡೆಯಲಾಗದೆ ಒಳಚಿಲಕವನ್ನೇ ಕಿತ್ತೆಸೆದು ಬಿಟ್ಟಾಗ ಬಾಗಿಲು ಬರ್ರನೆ ತೆಗೆದುಕೊಂಡು ತಣ್ಣನೆಯ ಗಾಳಿ ನುಗ್ಗಿ, ಹಾಯೆನಿಸಿ, ಮುಖದ ಮೇಲಿನ ಬೆವರನ್ನು ಸೆರಗಿನಿಂದ ಒರಸಿಕೊಳ್ಳುತ್ತ ಹಿಂದಕ್ಕೆ ತಿರುಗಿಯೂ ನೋಡದೆ ಹೊರಟುಬಿಟ್ಟಳು. ಹಜಾರದಲ್ಲಿ ಕುಳಿತಿದ್ದ ಮಲ್ಲಿ " ಕೆರೆ ಕೆಲ್ಸಕ್ಕೊರ್ಟೇನೆ ಚೆನ್ನಕ್ಕ" ಎಂದರೂ ಕಿವಿಗೆ ಬೀಳದವಳಂತೆ ಬಿರಬಿರನೆ ಹೆಜ್ಜೆ ಹಾಕಿದಳು.

ಹಸಿವು ಹೆಚ್ಚಾಗುತ್ತಿತ್ತು. ಅದೂ ರಾಮ ಹಾಯಿಲೆ ಬಿದ್ದ ಮೇಲೆ ಸರಿಯಾಗಿ ಊಟಕ್ಕೂ ಅನುಕೂಲವಾಗದೆ ಉಪವಾಸವೆನ್ನುವುದು ವಿಶೇಷವೇನೂ ಆಗಿರಲಿಲ್ಲ. ಕೆಲವು ದಿನಗಳಿಂದಂತೂ ಹಸಿವು ಕಿತ್ತು ತಿನ್ನುತ್ತಿತ್ತು. ದೇಹದ ನರಗಳೆಲ್ಲ ಹುರಿಗಟ್ಟಿ ಎತ್ತಲೊ ಕೊಂಡೊಯ್ದಂತಾಗುತ್ತಿತ್ತು. ಒತ್ತಿ ಹಿಡಿಯಲು ಎಷ್ಟು ಸಾಧ್ಯ? ಇಂದು ಬೆಳಿಗ್ಗೆ ಒಂದು ಮುದ್ದೆ ಉಂಡಿದ್ದು, ಈ ಬರೀ ಸೊಪ್ಪು ತಿಂದು ಅದೂ ಯಾಕೊ ಹಿಡಿಸದಿದ್ದರೂ ಇರಲಿ ಬರೀ ಹೊಟ್ಟೆ ಎಂದು ಸ್ವಲ್ಪ ತಿಂದು ಈಗ ಹೊಟ್ಟೆಯಲ್ಲೆಲ್ಲ ತಳಮಳ; ತೊಳಸುತ್ತಿರುವ, ಸುತ್ತುರುವ ಅನುಭವ; ಹಸಿವು ಹಬ್ಬುತ್ತ ಇಡೀ ದೇಹಕ್ಕೆ ಆವರಿಸಿದಂತಾಗಿ ಹುತ್ತದಲ್ಲಿ ಹೂತುಹೋಗುತ್ತಿರುವ ತೀವ್ರತೆ ಹೆಚ್ಚಾಗಿ ಸತ್ತಂತಿದ್ದ ಶರೀರದಲ್ಲಿ ಏನೋ ಅಡಗಿ ತರಾಟೆಗೆ ತೆಗೆದುಕೊಳ್ಳುತ್ತಿರುವ ಅನುಭವವಾಗುತ್ತ ಬಂದು, ಚನ್ನಿಯ ಉದ್ವಿಗ್ನತೆಗಿಂತ ವೇಗವಾಗಿ ಕಾಲು ಮುಂದುವರಿದವು.

ಕೆರೆಯ ಕೆಲಸ ಅಲ್ಲಿ ಸಾಗುತ್ತಿತ್ತು. ಅವರಾಡುವ ಮಾತುಗಳು ರಾತ್ರಿಯ ಗಾಳಿಯಲ್ಲಿ ತೇಲಿ ಬರುತ್ತಿದ್ದವು.

"ಜಲ್ದು ಮಳ್ಳೀನ್ ಮೂಟೆ ಹಾಕ್ರಯ್ಯ ಒಳಭಾಗಕ್ಕೆ. ಹೊರ್ಗಡೇಲಿ ಮಂಗೆ ಕಾಣುಸ್ತೈತಲ್ಲ ಅಲ್ಲೆ ಮಣ್ಣುಗಿಣ್ಣು ಹಾಕ್ರಮ್ಮ ಜಲ್ದ್ ಜಲ್ದು" ಅರರೇ! ಅಲ್ನೋಡ್ರಯ್ಯ ಅಲ್ಲಿ ಮ್ಯಾಲ್ಗಡೀಕ್ ಮಳೆ ಜೋರಾಗಾಗ್ಯೆತೆ. ಅದ್ಕೇ ಹಳ್ಳ ನೋಡ್ರಯ್ಯ ಎಸ್ಟ್ ಬಿರ್ನಾಗ್ ಬರ್ತಾ ಐತೆ! ಆಗ್ಲೇ ಕೆರೆಗೆ ಎಷ್ಟೊಂದು ನೀರ್ ಬಂದ್ಬುಡ್ತು. ಮುಗುಸ್ರಪ್ಪ ಧರ್ಮ ಜಲ್ದು. ಮೊದ್ಲೇ ಆ ಕಡೇಲಿ ಏರಿ ಬ್ಯಾರೆ ಬಿರುಕು ಬಿಟ್ಟೈತೆ ಹೊಡ್ಕಂಡ್ರೆ ಏನ್ಕತೆ. ರಾಮ! ರಾಮ! ಹೂಂ ತರ್ರೀ ತರ್ರೀ ತರ್ರೀ ಜಲ್ದ್ ಜುಲ್ದು- ಪಟೇಲ ಸೂಚನೆ ಕೊಡುತ್ತಿದ್ದ ಆತಂಕದಿಂದ; ಅವಸರದಿಂದ.

ಚನ್ನಿ ಹೋಗುತ್ತಿದ್ದಳು; ಕೆರೆ ರಿಪೇರಿಯ ಸದ್ದು ಕೇಳಿ ಬರುತ್ತಿದ್ದರೂ ತನ್ನ ಪಾಡಿಗೆ ತಾನು ಹೋಗುತ್ತಿದ್ದಳು. ಮಳೆಯ ಹನಿಗಳು ಸ್ವಲ್ಪ ಹೆಚ್ಚಾಗುತ್ತ ಪಟಪಟ ಬಡಿಯ ಹತ್ತಿದ್ದವು. ರಿಪೇರಿಯ ಕಡೆಯಿಂದ ಬಂದ ಗೊಂದಲ ಸದ್ದು, ಅಳಿಗೊಂದು ಮಾತು. ರಭಸದಲ್ಲಿ ಕಾರ್ಯ ನಡೆಯುತ್ತಿದ್ದುದನ್ನು ಸೂಚಿಸುತ್ತಿದ್ದವು. ಎಲ್ಲೋ ದೂರದಲ್ಲಿ ನಡೆಯುವ ಅಸ್ಪಷ್ಟ ಜಟಿಲ ಬಲೆಯ ವಾತಾವರಣದಂತೆ ಏನೂ ಸಂಬಂಧ ಕಲ್ಪಿಸಿಕೊಳ್ಳಲು ಸಾಮರ್ಥ್ಯ ಪಡೆಯದಂತೆ ಕೇಳಿಸಿ, ಚನ್ನಿ ಅದರ ಪರಿವೆಯೇ ಇಲ್ಲದೆ ವೇಗವಾಗಿ ಬರುತ್ತ, ಮಳೆ ಬಿರುಸಾಗಿ ಸುರಿಯಲಾರಂಭಿಸಿದಾಗ ಮತ್ತೂ ಜೋರಾಗಿ ಕಾಲು ಹಾಕುತ್ತ ಸೀದಾ ರಂಗಪ್ಪನ ತೋಟಕ್ಕೆ ಬರುವ ಹೊತ್ತಿಗೆ ಧಾರಾಕಾರವಾಗಿ ಬೀಳುವ ಸೂಚನೆಯನ್ನು ಸೆಳೆಮಿಂಚು ಮತ್ತು ಭೂಮಿಗೆ ಕಂಬಳಿಯ ಕೊಪ್ಪೆ ಇಟ್ಟಂತಿದ್ದ ಆಕಾಶ ಸೂಚಿಸಿದವು. ಹಳ್ಳ ತುಂಬಿ ಹರಿದು ಬರುತ್ತಿರುವಾಗಲೇ ಇಲ್ಲೂ ಮಳೆ ತುಂಬಾ ಜಾಸ್ತಿಯಾಗಿ ರೊಯ್ಯೆಂದು ಬಡಿಯಲು ಪ್ರಾರಂಭಿಸಿ ಕೆರೆ ರಿಪೇರಿಯ ಸ್ಥಳದಲ್ಲಿ ಅತ್ಯಂತ ಉದ್ವೇಗದ ವಾತಾವರಣ ಮೂಡಿ ಯಾರು ಏನು ಮಾತನಾಡುತ್ತಿದ್ದಾರೆ ಏನು ಮಾಡುತ್ತಿದ್ದಾರೆ ಯಾವುದೂ ಗೊತ್ತಾಗದ ಸನ್ನಿವೇಶ ನಿರ್ಮಾಣವಾಗಿ ಅಂತೂ ಎಲ್ಲರೂ ಏನೋ ಹೇಳುತ್ತಿದ್ದರು. ಏನೋ ಮಾತಾಡುತ್ತಿದ್ದರು. ಮಳೆಯಲ್ಲಿ ತೋಯುತ್ತಲೇ ಚನ್ನಿ ರಂಗಪ್ಪನ ತೋಟದ ರೂಮಿನ ಬಾಗಿಲ ಬಳಿಗೆ ಬಂದಳು. ಎದೆ ಡವಡವ ಎನ್ನತೊಡಗಿತ್ತು. ಭಯದ್ದೋ ಉದ್ವೇಗದ್ದೋ ಆಕೆಗೇ ಗೊತ್ತಾಗದ ರೀತಿಯಲ್ಲಿ ಹೃದಯ ಹಾರಾಡುತ್ತಿರುವಂತೆ ಭಾಸವಾಯಿತು. ರೂಮಿನ ಒಳಗೆ ಬೆಳಕಿತ್ತು. ಬಾಗಿಲ ಸಂದಿಯಲ್ಲಿ ನೋಡಿದಾಗ ರಂಗಪ್ಪ ಒಬ್ಬನೇ ಅಡ್ಡಾಗಿ ಸಿಗರೇಟು ಸೇದುತ್ತ " ಅನುರಾಗದ ಅಮರಾವತಿ" ಎಂದು ಸಿನಿಮಾ ಹಾಡನ್ನು ಗುಂಯ್ ಗುಡುತ್ತ ಮಧ್ಯೆ ಮಧ್ಯೆ ಹಾಳ್ ಮಳೆ; ಮಲ್ಲಿ ಬ್ಯಾರೆ ಬರ್ಲಿಲ್ಲ. ಥೂ!" ಎಂದು ಒಬ್ಬನೇ ಗೊಣಗುತ್ತ ಇದ್ದಾಗ, ಇದ್ದಕ್ಕಿದ್ದಂತೆ ಕೆರೆಯ ಕಡೆಯಿಂದ ಹಾಹಾಕಾರವೆದ್ದು ಸುತ್ತಮುತ್ತಲ ವರ್ತುಲವೆಲ್ಲ ಬೆಚ್ಚಿ ಬೀಳುವಂತೆ ಮಾಡಿತ್ತು. " ಅಯ್ಯೋ ಬಿರುಕುಬಿಟ್ಟಿತ್ತಾವ ಏರಿ ಕುಸೀತಾ ಐತೆ. ಅಗಾ ! ಆಗ್ಲೇ ನೀರ್ ನುಗ್ಗಿದ್ವು. ದ್ಯಾವ್ರೆ ಏನಪ್ಪ ಗತಿ! ಬರ್ರಯ್ಯೋ ಬರ್ರೀ, ಬರ್ರೋ" ಎಂಬ ಧ್ವನಿ ಮೈಕೂದಲನ್ನು ನಿಮಿರಿಸುವುದಕ್ಕೂ ಚನ್ನಿ ಬಾಗಿಲನ್ನು ದಢಾರನೆ ನೂಕಿ ಒಳಬರುವುದಕ್ಕೂ ಸರಿಯಾಯಿತು. ರಂಗಪ್ಪ ಆಶ್ಚರ್ಯದಿಂದ ಥಟ್ಟನೆ ಹಾಗೇ ನಿಂತ. ಚನ್ನಿಗೆ ಏನು ಹೇಳಬೇಕೆಂದು ತೋಚದೆ ಏದುಸಿರುಬಿಡುತ್ತ ಸುಮ್ಮನೆ ಅವನ ಮುಖ ನೋಡಿದಳು. ಎರಡು ಮೂರು ನಿಮಿಷ ಬರೀ ಮಳೆಯ ಸದ್ದು; ಸುಯ್ಯೆಂದು ಹನಿಗಳನ್ನು ಅಲ್ಲಾಡಿಸುವ ಆಟವಾಡುವ ಗಾಳಿ; ಇವುಗಳ ಮಧ್ಯೆ ದುರಿ ಬಿಡಿಸಿಕೊಂಡು ಬರಲು ಯತ್ನಿಸುವ ಏರಿಯ ಬಳಿಯ ತಡಬಡಿಕೆ. ಕಡೆಗೆ ರಂಗಪ್ಪನೇ " ಏನ್ ಬಂದೆ?" ಎಂದ. " ನ..ನ..ನಾನು ನಿನ್ನ ವೊಲ್ದಾಕ್ ಬತ್ತೀನಿ. ಅವತ್ತು ಕಾಲಿಕ್ಕಲ್ಲ ಅಂಬ್ತ ಹಟ ಮಾಡಿದ್ದು ತಪ್ಪಾತು" ಎಂದಳು. ರಂಗಪ್ಪ ಓ ಎಂದು ಉದ್ಗರಿಸಿದ. ಹೌದಾ" ಎಂದು ಕಣ್ಣಲ್ಲಿ ತುಂಟತನ ಚಿಮ್ಮಿದ. "ಕರಿಯಾಮ್ದ್ಯಾವ್ರಾಣ್ಗೂ ಬತ್ತೀನಿ. ಅದ್ಕೇ ನಾನ್ ಓಡೋಡ್ ಬಂದೆ ನಿನ್ತಾವೀಗ. ನಿನ್ ವೊಲ್ದಾಗಿರೋ ಕಳೇನೆಲ್ಲ ಒಬ್ಳೇ ಬೇಕಿದ್ರು ತೆಗೀತೀನಿ ಆಮ್ಯಾಲೆ ಯಾವಾಗ ಕರುದ್ರೂ ಬತ್ತೀನಿ" ಎಂದು ಚನ್ನಿ ಉದ್ವೇಗದ ಧ್ವನಿಯಲ್ಲಿ ಮಳೆಯನ್ನು ಸರಿಗಟ್ಟುವವಳಂತೆ ಹೇಳಿದಾಗ ರಂಗಪ್ಪ ನಗುತ್ತ ಏನೋ ಒಂದು ಥರಾ ಶೈಲಿಯಲ್ಲಿ ಭೇಷ್, ಪರವಾಗಿಲ್ಲ" ಎಂದ.

ಚನ್ನಿಯಲ್ಲಿ ಉತ್ಸಾಹ ಹರಿಯಿತು. ಹತ್ತಿರಕ್ಕೆ ಬಂದಳು; ಮೆಲ್ಲನೆ ಅವನ ಕೈ ಹಿಡಿದುಕೊಂಡಲು; ನಡುಗುವ ಕೈಗಳಿಂದ ಅವನನ್ನು ಮತ್ತೆ ಮತ್ತೆ ಸ್ಪರ್ಶಿಸುತ್ತ ಪುಳಕದ ಪಲ್ಲವಿಗೆ ಪಕ್ಕಾದಾಗ ಆತ ಇವಳ ಎರಡು ತೋಳುಗಳನ್ನು ಹಿಡಿದುಕೊಂಡ; ಹಾಗೇ ದಿಟ್ಟಿಸಿದ. ಮಳೆಯಲ್ಲಿ ತೋಯ್ದು ಬಂದ ದೇಹವನ್ನು ಕಣ್ಣಪಟ್ಟಿಯಲ್ಲಿ ಅಳೆದ. ಹಿಡಿದ ತೋಳುಗಳು ಬರೀ ಮೂಳೆ ಎಂದುಕೊಂಡ. ಮೈಗೆ ಅಂಟಿದ ಬಟ್ಟೆ ಬರೆಯಲ್ಲೂ ದೇಹದ ಏರುಪೇರು ಕಾಣದೆ ಮುಖ ಸಿಂಡರಿಸಿಕೊಂಡ. ಚನ್ನಿಯ ಕೈ ಕಂಪಿಸುತ್ತಿದ್ದವು; ತುಟಿ ಅದುರುತ್ತಿದ್ದವು. ಕಣ್ಣು ಅರೆ ಮುಚ್ಚಿಕೊಳ್ಳುತ್ತ, ಮೈಯಲ್ಲಿ ರೋಮಾಂಚನದ ಸೆಲೆಯೊಡೆಯುತ್ತ ಅವನ ಮೈಯನ್ನು ತಡವರಿಸುತ್ತಿದ್ದಳು. ರಂಗಪ್ಪ ಅವಳನ್ನೇ ದಿಟ್ಟಿಸುತ್ತ ಹಿಂದಿನ ಚನ್ನಿಯನ್ನು ಮೂಳೆದೋಳನ್ನು ಹಾಗೇ ಹಿಡಿದುಕೊಂಡು ಬಾಗಿಲ ಕಡೆಗೆ ಬಂದು ರಪ್ಪನೆ ಹೊರದಬ್ಬಿ, ಥುತ್ತೆಂದು ಉಗಿದು, ಹಾಕಿಕೊಂಡು " ಈಗ್ ಬಂದವ್ಳೆ ಈಗ, ಮೂಳೆ ಮ್ಯಾಲ್ ಚರ್ಮ ಮೆತ್ಕಂಡು ಕೇಳಾಕಿಲ್ಲ ಇವ್ಳ್ ಸೆಡವು! ಈಗ್ ಮಹಾ ಬಂದ್ಬಿಟ್ಳು" ಎಂದು ಏನೇನೋ ಅಂದುಕೊಳ್ಳುತ್ತಿರುವಾಗ ಚನ್ನಿ ದೊಪ್ಪನೆ ನೆಲಕ್ಕೆ ಬಿದ್ದು ಸ್ತಂಭಿತಳಾಗಿ ಭಯಾನಕ ಸ್ಥಳದಲ್ಲಿ ಕಣ್ಣು ಕಟ್ಟಿ ತಂದುಬಿಟ್ಟಂತೆ ಭಯಗ್ರಸ್ತಳಾಗಿ ಬೀಳುತ್ತಿರುವ ಮಳೆ, ಬೆಳೆ ಮೊಳೆಯಂತಾಗಿ ಭೂಮಿಯನ್ನು ತಡಕುತ್ತಿದ್ದಳು.

(ಮುಗಿಯಿತು)

ಕವನದ ಸಾಲುಗಳು

ಕೆಲಸಕ್ಕಾಗಿ ದಿಕ್ಕುವ
ಬಂಡವಾಳ ಗುಣಿಸುವ
ಸದ್ದಿಲ್ಲದ
ಸಂಚಿಗೆ ಬಲಿಯಾದ
ನಮ್ಮನ್ನಾಳುವ
ಹೈಟೆಕ್ ದೊರೆಯೇ
ಇಲ್ಲಿ
ಸಾಲ ಹೊತ್ತ ಗುಲಾಮು!
ಕಂಪ್ಯೂಟರ್ ಬದುಕಿಗೆ
ಮನುಷ್ಯರ
ಎದೆಗೂಡು ಮಾರುವವರು
ನೀವು!
ಇನ್ನು ನಿಮಗಿಲ್ಲ ಆಯುಷ್ಯ!

- ಇಸ್ಮಾಯಿಲ್ ಎಲಿಗಾರ
ಹರಪನ ಹಳ್ಳಿ

ಕುಂದಾಪುರದಲ್ಲಿ ಗ್ರಾಮಪಂಚಾಯತ್ ಚುನಾವಣೆ

ಕುಂದಾಪುರ ತಾಲೂಕಿನಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಈ ಹಿಂದೆ ರೈತ-ಕೃಷಿಕೂಲಿಗಾರರು ಸಂಘಟಿತರಾಗಿ ಹೋರಾಟ ನಡೆಸಿದ ಪರಿಣಾಮವಾಗಿ ಸುಮಾರು 87 ಸ್ಥಾನಗಳಲ್ಲಿ ಅಂದರೆ 15 ಗ್ರಾಮ ಪಂಚಾಯತ್‌ಗಳಲ್ಲಿ ಸ್ಪರ್ಧಿಸಲು ಸಾಧ್ಯವಾಗಿದೆ. ಕೆಲವು ಗ್ರಾಮಗಳಲ್ಲಿ ಹಂಚು ಕಾರ್ಮಿಕರ ಪ್ರಭಾವ ಹೆಚ್ಚಿರುವುದು. ಈ ಹಿಂದಿನ ಚುನಾವಣೆಗಳಲ್ಲಿ ಜನತಾದಳದೊಂದಿಗೆ ಚುನಾವಣಾ ಹೊಂದಾಣಿಕೆ ಮಾಡಿದ್ದು, 133 ಸ್ಥಾನಗಳಲ್ಲಿ ಸ್ಪರ್ಧಿಸಿ 33 ಸ್ಥಾನಗಳಲ್ಲಿ ಗೆಲುವು ಪಡೆಯಲಾಗಿತ್ತು. ಒಂದು ಪಂಚಾಯತ್‌ನಲ್ಲಿ ನಮ್ಮವರು ಉಪಾಧ್ಯಕ್ಷ ರಾಗಿದ್ದು, 4 ಪಂಚಾಯತ್‌ಗಳಲ್ಲಿ ಉಪಾಧ್ಯಕ್ಷರಾಗಿದ್ದರು.

ಈ ಬಾರಿ ಚುನಾವಣೆಯಲ್ಲಿ ಯಾವುದೇ ಪಕ್ಷದೊಂದಿಗೆ ಚುನಾವಣಾ ಹೊಂದಾಣಿಕೆ ಮಾಡಿಕೊಳ್ಳಲಿಲ್ಲ. ಜನತಾದಳ ಎರಡಾಗಿದ್ದು, ಅವುಗಳ ಪ್ರಭಾವ ಕುಗ್ಗಿದೆ. ಕಾಂಗ್ರೆಸ್ಸು ಮತ್ತು ಬಿಜೆಪಿಯನ್ನು ವಿರೋಧಿಸಿ ಸುಮಾರು 15 ಗ್ರಾಮ ಪಂಚಾಯತುಗಳಲ್ಲಿ ಸ್ಪರ್ಧೆ ಮಾಡಲಾಗಿದೆ. ತ್ರಿಕೋಣ ಸ್ಪರ್ಧೆ ಹೆಚ್ಚಿನ ಕಡೆ ಇದ್ದರೂ ಕೂಡಾ ಸಿಪಿಐ(ಎಂ) ಪಕ್ಷದ ಬೆಂಬಲಿಗರು ಗೆದ್ದು ಬರುವ ಪ್ರದೇಶಗಳಲ್ಲಿ ಹಾಗೂ ಕ್ಷೇತ್ರಗಳಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ಸು ಒಟ್ಟಿಗೆ ಸೇರಿ ಸಿಪಿಐ(ಎಂ) ಬೆಂಬಲಿಗರು 3-4 ಮತಗಳ ಅಂತರದಲ್ಲಿ ಸೋಲುವಂತಾಗಿದೆ. ಕೆಲವು ಕ್ಷೇತ್ರಗಳಲ್ಲಿ ಒಂದು ಮತದ ಅಂತರದಲ್ಲಿ ಕೂಡಾ ಸೋಲುವಂತಾಗಿದೆ. ಯಾವುದೇ ಪಕ್ಷದೊಂದಿಗೆ ಚುನಾವಣಾ ಹೊಂದಾಣಿಕೆ ಮಾಡದೇ 87 ಸ್ಥಾನಗಳಲ್ಲಿ ಸ್ಪರ್ಧಿಸಿ ಬಿಜೆಪಿ ಮತ್ತು ಕಾಂಗ್ರೆಸ್‌ನ್ನು ಎದುರಿಸಿ ಗ್ರಾಮಾಂತರ ಪ್ರದೇಶಗಳಲ್ಲಿ 26 ಸ್ಥಾನಗಳಲ್ಲಿ ಗೆಲವು ಪಡೆದಿರುವುದು ಸಿಪಿಐ(ಎಂ) ಸಾಧನೆಯಾಗಿದೆ. ಹೇರಳವಾಗಿ 2 ಪಕ್ಷಗಳು ಹೆಂಡ ಮತ್ತು ಹಣ ಹಂಚುವುದರ ಜತೆಗೆ ಜನಸಾಮಾನ್ಯರಿಗೆ ಆಮಿಷ ಒಡ್ಡಿ ವಂಚನೆ ಮಾಡಿರುತ್ತಾರೆ. ಕೆಲವು ಪ್ರದೇಶಗಳಲ್ಲಿ ಸಿಪಿಐ(ಎಂ) ಬೆಂಬಲಿಗರ ನಾಮಿನೇಷನ್ ಪತ್ರವನ್ನು ಸಲ್ಲಿಸದಂತೆ ಹಾಗೂ ಕೆಲವು ಪ್ರದೇಶಗಳಲ್ಲಿ ನಾಮಿನೇಷನ್ ಸಲ್ಲಿಸಿದವರಿಗೆ ಬೆದರಿಕೆ ಹಾಕಿ ಸ್ಪರ್ಧಿಸದಂತೆ ಗೂಂಡಾಗಿರಿಯನ್ನು ಮಾಡಿರುತ್ತಾರೆ. ಸಿಪಿಐ(ಎಂ) ಬೆಂಬಲಿಗರು ಸ್ಪರ್ಧಿಸಿದ ಕೆಲವು ಕ್ಷೇತ್ರಗಳಲ್ಲಿ ಅವರ ಕುಟುಂಬದವರನ್ನು ಅವರ ಎದುರು ಸ್ಪರ್ಧಿಸುವಂತೆ ಮಾಡಲಾಗಿತ್ತು. ಕೆಲವರಿಗೆ ನಾಮಪತ್ರ ವಾಪಸು ಪಡೆಯುವಂತೆ ಬೆದರಿಕೆ ಹಾಕಲಾಗಿತ್ತು. ಇವುಗಳನ್ನೆಲ್ಲಾ ಎದುರಿಸಿ 26 ಕ್ಷೇತ್ರಗಳಲ್ಲಿ ಗೆದ್ದಿರುವುದು ಒಂದು ಸಾಧನೆಯಾಗಿದೆ. ಕೋಣಿ, ಬಳ್ಕೂರು ಹಾಗೂ ಗುಲ್ವಾಡಿಗಳಲ್ಲಿ ಸಿಪಿಐ(ಎಂ) ಬೆಂಬಲಿಗರು ಹೆಚ್ಚಿನ ಮತಗಳ ಅಂತರದಲ್ಲಿ ಗೆದ್ದಿರುವುದು ಬಿಜೆಪಿ ಹಾಗೂ ಕಾಂಗ್ರೆಸ್ಸಿನವರಿಗೆ ಮುಖ ಭಂಗವಾಗುವಂತೆ ಆಗಿದೆ

ಬಿಳ್ಕೂರು ಗ್ರಾಮ: ಬಿಳ್ಕೂರು ಗ್ರಾಮ ಪಂಚಾಯತ್‌ನಲ್ಲಿ ಒಟ್ಟಿಗೆ 7 ಸ್ಥಾನಗಳ ಪೈಕಿ ಒಂದು ಪರಿಶಿಷ್ಟ ಜಾತಿ ಮಹಿಳೆಗೆ ಮೀಸಲಾಗಿತ್ತು ಆದರೆ ಆಗ್ರಾಮದಲ್ಲಿ ಒಂದು ಪರಿಶಿಷ್ಟ ಕುಟುಂಬವ ಇಲ್ಲ ಅಲ್ಲಿಯ ಶ್ರೀಮಂತರು ತಮ್ಮ ಮನೆಯಲ್ಲಿ ಮನೆ ಕೆಲಸ ಮಾಡಿಕೊಂಡಿದ್ದಾಳೆಂದು ತೋರಿಸಿ ಪರಿಶಿಷ್ಟ ಮಹಿಳೆಯನ್ನು ಸ್ಪರ್ಧೆಗೆ ಇಳಿಸಿ ಅವಿರೋಧ ಆಯ್ಕೆ ಯಾಗುವಂತೆ ಮಾಡಿದರು. ಹೀಗಾಗಿ ಉಳಿದ 6 ಕ್ಷೇತ್ರಗಳಿಗೂ ಸಿಪಿಐ(ಎಂ) ಬೆಂಬಲಿಗರು ಸ್ಪರ್ಧೆ ಮಾಡಿ, ಬಿಜೆಪಿ ಹಾಗೂ ಕಾಂಗ್ರೆಸ್ ಅಭ್ಯರ್ಥಿಗಳನ್ನು ಭಾರಿ ಮತಗಳ ಅಂತರದಲ್ಲಿ ಸೋಲಿಸಿ 6 ಸ್ಥಾನಗಳನ್ನು ಗೆಲ್ಲಲಾಗಿದೆ. ತ್ರಿಕೋಣ ಸ್ಪರ್ಧೆ ಅತೀ ಹೆಚ್ಚಿನ ಮತಗಳಿಸಲು ಸಹಾಯವಾಗಿತ್ತು.

ತಾರೀಕು 22-3-2000 ರಂದು ನಡೆದ ಅಧ್ಯಕ್ಷ ಉಪಾಧ್ಯಕ್ಷರ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಶ್ರೀಯುತ ಮಂದ ಮೊಗವೀರ ಹಾಗೂ ಉಪಾಧ್ಯಕ್ಷರಾಗಿ ಶ್ರೀಮತಿ ದೇವಿ ಇವರು ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ. ಶ್ರೀಮತಿ ಜಯ, ಪ್ರಭಾಕರ ಬಿಲ್ಲವ, ರಾಜು ಹಾಗೂ ಶ್ರೀಮತಿ ಗಿರಿಜ ಇವರು ಇತರ ಪಂಚಾಯತ್ ಸದಸ್ಯರಾಗಿರುತ್ತಾರೆ. ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಸಂಘಟನೆಯನ್ನು ವಿಸ್ತರಿಸಿ ಬೆಳೆಯಿಸಿ, ತನ್ಮೂಲಕ ಪಂಚಾಯತ್ ಅಭಿವೃದ್ಧಿ ಕೆಲಸ ಕೂಡಾ ಮಾಡಲು ಸದಸ್ಯರು ಶ್ರಮಿಸಲಿದ್ದಾರೆ.

ಕರ್ಕುಂಜೆ ಗ್ರಾಮ ಪಂಚಾಯತ್‌ನ ಬಹಳ ವರ್ಷಗಳ ವರೆಗೆ ರೈತರ ಹೋರಾಟ ನಿರಂತರವಾಗಿ ನಡೆಯುತ್ತಿದ್ದು, ರೈತ ಕೃಷಿಕೂಲಿಗಾರರು ಹಲವು ಪ್ರಯೋಜನ ಪಡೆದಿರುತ್ತಾರೆ. ಭೂಮಿಗಾಗಿ ರೈತರ ತೀವ್ರ ಹೋರಾಟ ನಡೆದು ಹಲವಾರು ಪೋಲೀಸ್ ಕೇಸುಗಳಿಗೆ ಒಳಗಾಗಿ ಹಲವರು ಕಷ್ಟ-ನಷ್ಟಕ್ಕೆ ಮುಖ್ಯಕಾರ್ಯಕರ್ತರು ಒಳಗಾಗಿದ್ದರು. ಈವಾಗಲೂ ಅಲ್ಲಲ್ಲಿ ಘರ್ಷಣೆಗಳು ನಡೆಯುತ್ತಾ ಇವೆ. ಸಂಘಟನೆಯ ಪ್ರಭಾವ ಉಳಿದುಕೊಂಡ ಪ್ರದೇಶವಾಗಿದೆ. 15 ಸ್ಥಾನಗಳಿದ್ದು ಸಿಪಿಐ(ಎಂ) ಬೆಂಬಲಿಗರು 8 ಸ್ಥಾನಗಳಿಗೆ ಸ್ಪರ್ಧಿಸಿ 5 ಸ್ಥಾನಗಳನ್ನು ಗೆದ್ದಿದ್ದಾರೆ. ಪಂಚಾಯತ್ ಅಧ್ಯಕ್ಷ ಸ್ಥಾನಕ್ಕೆ 18-3-2000 ರಂದು ನಡೆದ ಚುನಾವಣೆಯಲ್ಲಿ ಮೀಸಲಾತಿ ಪ್ರಕಾರ ಪರಿಶಿಷ್ಟ ಜಾತಿ ಮಹಿಳೆಯಾಗಿ ಶ್ರೀಮತಿ ಬಾಬಿ ಎಂಬವರು ಅವಿರೋಧವಾಗಿ ಜಯ ಗಳಿಸಿರುತ್ತಾರೆ. ಶ್ರೀಯುತ ಗೋವಿಂದ ಪೂಜಾರಿ, ಮಹಾಬಲ, ಶ್ರೀಮತಿ ಶಶಿಕಲಾ ಮತ್ತು ಶ್ರೀಮತಿ ರಾಧಾ ಇವರು ಸಿಪಿಐ(ಎಂ) ಬೆಂಬಲಿಗರಾಗಿದ್ದು ಪಂಚಾಯತ್ ಸದಸ್ಯರಾಗಿರುತ್ತಾರೆ.

ಈ ಪಂಚಾಯತಿಯಲ್ಲಿ ಹಂಚು ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿದ್ದು. ರೈತ ಕೃಷಿ ಕೂಲಿಗಾರರು ಸಂಘಟಿತರಾಗಿ ಪ್ರತಿ ಚುನಾವಣೆಯಲ್ಲಿ 5-6 ಸ್ಥಾನಗಳಿಸಿ ಪಂಚಾಯತ್ ಉಪಾಧ್ಯಕ್ಷರಾಗಿ ಚುನಾಯಿತರಾಗುತ್ತಿದ್ದರು. ಈ ಬಾರಿ ಶ್ರೀಮತಿ ಬಾಬಿಯವರು ಅಧ್ಯಕ್ಷೆಯಾಗಿ ಅವಿರೋಧವಾಗಿ ಆಯ್ಕೆಯಾದದ್ದು, ಸಂಘಟನೆಯನ್ನು ಇನ್ನು ವಿಸ್ತರಿಸಿ ಬೆಳೆಸಲು ಅನುಕೂಲವಾಗಿದೆ.

ಕೋಣಿ ಗ್ರಾಮ ಪಂಚಾಯತ್‌ನ 15 ಸ್ಥಾನಗಳಿದ್ದು ಸಿಪಿಐ(ಎಂ) ಬೆಂಬಲಿಗರು 9 ಸ್ಥಾನಗಳಿಗೆ ಸ್ಪರ್ಧಿಸಿ 4 ಸ್ಥಾನಗಳಲ್ಲಿ ಗೆಲ್ಲಲು ಸಾಧ್ಯವಾಗಿದೆ. ಕೆಲವು ಕ್ಷೇತ್ರಗಳಲ್ಲಿ ಬಿಜೆಪಿ-ಕಾಂಗ್ರೆಸ್ ಒಟ್ಟಾಗಿ ಸಿಪಿಐ(ಎಂ) ಬೆಂಬಲಿಗರ ಸೋಲಿಗೆ ಕಾರಣವಾಗಿದೆ. ಕೆಲವೇ ಮತದ ಅಂತರದಲ್ಲಿ ಕೆಲವರು ಸೋಲ ಬೇಕಾಯಿತು. ಶೀನ ಪೂಜಾರಿಯವರು ಮೊದಲ 2 ಮತಗಳ ಅಂತರದಲ್ಲಿ ಗೆದ್ದು, ಅನಂತರ ಮರು ಎಣಿಕೆಯಲ್ಲಿ ಕೇವಲ ಒಂದೇ ಮತದ ಅಂತರದಲ್ಲಿ ಸೋಲಬೇಕಾಯಿತು.

ಕೋಣಿ ಗ್ರಾಮ ಪಂಚಾಯತ್ ಅಧ್ಯಕ್ಷರ ಚುನಾವಣೆ ತಾರೀಕು 20-3-2000 ರಂದು ನಡೆದಾಗ ಶ್ರೀಯುತ ಇಮಾಬು ಪೂಜಾರಿ ಸ್ಪರ್ಧಿಸಿದಾಗ 9 ಮತಗಳು ಸಿಕ್ಕಿ ಜಯಗಳಿಸಿರುತ್ತಾರೆ. ಉಪಾಧ್ಯಕ್ಷರಾಗಿ ಪಕ್ಷೇತರ ಅಭ್ಯರ್ಥಿ ಶ್ರೀಮತಿ ಲಕ್ಷ್ಮಿ ದೇವಾಡಿಗ ನವರು 9 ಮತಗಳಲ್ಲಿ ಪಡೆದು ಜಯಗಳಿಸಿರುತ್ತಾರೆ.


ಬಸ್ರೂರು ಗ್ರಾಮ ಪಂಚಾಯತ್‌ನಲ್ಲಿ 8 ಸ್ಥಾನಗಳಲ್ಲಿ ಸ್ಪರ್ಧಿಸಿ ಇಬ್ಬರು ಸಿಪಿಐ(ಎಂ) ಬೆಂಬಲಿಗರು ಜಯಗಳಿಸಿರುತ್ತಾರೆ. ಕೆಲವೇ ಮತಗಳ ಅಂತರದಲ್ಲಿ ಅವರು ಸೋಲಬೇಕಾಯಿತು. ಹಾಗೆಯೇ ಕೀವ್ಯಾಡಿ ಮತ್ತು ಅಂಪಾರು ಗ್ರಾಮ ಪಂಚಾಯತ್‌ಗಳಲ್ಲಿ ಸಿಪಿಐ(ಎಂ) ಸೋಲಿಸಬೇಕೆಂದು ಬಿಜೆಪಿ ಹಾಗೂ ಕಾಂಗ್ರೆಸ್ ಒಟ್ಟಾದ ಕಾರಣ ಸೋಲಬೇಕಾಯಿತು. ರೈತರ ಕೃಷಿಕೂಲಿಗಾರರ ಹೋರಾಟ ನಿರಂತರವಾಗಿ ಈ ಪ್ರದೇಶಗಳಲ್ಲಿ ನಡೆಯುತ್ತಾ ಬಂದಿರುತ್ತದೆ. ಕಾಂಗ್ರೆಸ್ ಮತ್ತು ಬಿಜೆಪಿಯವರು ನಮ್ಮ ವಿರುದ್ಧ ಒಟ್ಟಾಗಿ ದಬ್ಬಾಳಿಕೆ ನಡೆಸುತ್ತಾ ಇದ್ದಾರೆ. ಇಲ್ಲಿ ಸ್ಪರ್ಧೆ ಮಾಡಿದವರಿಗೆ ಬೆದರಿಕೆ ಹಾಕಿರುತ್ತಾರೆ.

ನಾಡ ಗ್ರಾಮ ಪಂಚಾಯತ್ ಮತ್ತು ರೊಡೇಶ್ವರ ಗ್ರಾಮ ಪಂಚಾಯತ್‌ನಲ್ಲಿ ಕೂಡಾ ಸ್ಪರ್ಧೆನಡೆದು ಕೊಟೇಶ್ವರದಲ್ಲಿ 4 ಮಂದು ಹಾಗೂ ನಾಡಗ್ರಾಮ ಪಂಚಾಯತ್‌ನಲ್ಲಿ ಇಬ್ಬರು ಜಯಗಳಿಸಿರುತ್ತಾರೆ. ಕೊಟೇಶ್ವರ ಗ್ರಾಮ ಪಂಚಾಯತ್‌ನಲ್ಲಿ ಒಟ್ಟಿಗೆ 20 ಸ್ಥಾನಗಳಲ್ಲಿ 15 ಸ್ಥಾನಕ್ಕೆ ಸ್ಪರ್ಧಿಸಲಾಗಿದೆ. ನಾಡ ಗ್ರಾಮ ಪಂಚಾಯತ್‌ನಲ್ಲಿ 27 ಸ್ಥಾನಗಳಲ್ಲಿ 17 ಸ್ಥಾನಗಳಿಗೆ ಸ್ಪರ್ಧಿಸಲಾಗಿತ್ತು. ಕೆಲವೇ ಮತಗಳ ಅಂತರದಲ್ಲಿ ಸಿಪಿಐ(ಎಂ) ಬೆಂಬಲಿಗರು ಸೋಲಬೇಕಾಯಿತು. ಬಿಜೆಪಿ ಹಾಗೂ ಕಾಂಗ್ರೆಸ್ಸಿನರು ಹಣ ಮತ್ತು ಹೆಂಡವನ್ನು ಹೇರಳವಾಗಿ ಹಂಚಿರುತ್ತಾರೆ ಗೂಂಡಾಗಳಿಗೆ ಪ್ರೋತ್ಸಾಹ ನೀಡಿರುತ್ತಾರೆ. ಹೆಚ್ಚಿನ ಕ್ಷೇತ್ರಗಳಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಜಂಟಿಯಾಗಿ ಅಭ್ಯರ್ಥಿಗಳನ್ನು ಹಾಕಿ ನೇರ ಚುನಾವಣೆಯಿಂದಾಗಿ ಸಿಪಿಐ(ಎಂ) ಬೆಂಬಲಿಗರು ಕೆಲವೇ ಮತಗಳ ಅಂತರದಿಂದಾಗಿ ಸೋಲಬೇಕಾಯಿತು.

ಗ್ರಾಮ ಪಂಚಾಯತ್ ಚುನಾವಣೆಯಲ್ಲಿ ಕುಂದಾಪುರ ತಾಲೂಕಿನಲ್ಲಿ ಎರಡು ವಿಧಾನಸಭಾ ಕ್ಷೇತ್ರದಲ್ಲಿ ಸಿಪಿಐ(ಎಂ) ಬೆಂಬಲಿಗರ ಸ್ಪರ್ಧೆ ಹಾಗೂ 26 ಸ್ಥಾನಗಳನ್ನು ಗೆದ್ದು, 3 ಗ್ರಾಮ ಪಂಚಾಯತ್‌ಗಳ ಅಧ್ಯಕ್ಷರಾಗಿ ಚುನಾಯಿತರಾದುದರಿಂದ ರಾಜಕೀಯಾವಾಗಿ ಒಂದು ಹೆಜ್ಜೆ ಮುಂದೆ ಇಟ್ಟ ಹಾಗೆ ಆಗಿದೆ. ತಾಲೂಕು ಮತ್ತು ಜಿಲ್ಲಾ ಪಂಚಾಯತ್ ಚುನಾವಣೆಗಳಲ್ಲೂ ಕೆಲವು ಕ್ಷೇತ್ರಗಳಲ್ಲಿ ಸ್ಪರ್ಧಿಸಲು ನಿರ್ಧರಿಸಲಾಗಿದ್ದು, ಯಾರೊಂದಿಗೂ ಚುನಾವಣಾ ಹೊಂದಾಣಿಕೆ ಮಾಡದೇ ಸ್ವತಂತ್ರವಾಗಿ ಸ್ಪರ್ಧಿಸಲು ನಿರ್ಧರಿಸಿದ್ದು, ಪಕ್ಷದ ಸದಸ್ಯರಲ್ಲಿ ಹಾಗೂ ಸಮೂಹಿಕ ಸಂಘಟನೆಗಳ ಸದಸ್ಯರಲ್ಲಿ ಸ್ಫೂರ್ತಿ ಉಂಟು ಮಾಡಿದಂತಾಗಿದೆ.

- ವರದಿ **ಕೆ.ಶಂಕರ್**



ಜಯ
ಬಳ್ಕೂರು ಗ್ರಾ.ಪಂ. ಸದಸ್ಯ


ಪ್ರಭಾಕರ ಬಿಲ್ಲವ
ಬಳ್ಕೂರು ಗ್ರಾ.ಪಂ. ಸದಸ್ಯ


ಬಾಬು ಪೂಜಾರಿ
ಅಧ್ಯಕ್ಷ, ಕೋಣಿ ಗ್ರಾ.ಪಂ.


ದೇವಿ
ಉಪಾಧ್ಯಕ್ಷೆ, ಬಳ್ಕೂರು ಗ್ರಾ.ಪಂ.


ಬಳ್ಕೂರು ಗ್ರಾ.ಪಂ. ಸದಸ್ಯೆ


ರಾಜು
ಬಳ್ಕೂರು ಗ್ರಾ.ಪಂ. ಸದಸ್ಯ


ಮಂಜ ಮೊಗವೀರ
ಅಧ್ಯಕ್ಷ, ಬಳ್ಕೂರು ಗ್ರಾ.ಪಂ.

.... ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಬೇಕಾದ ಸಮಯವಿದು

ಪುಟ 5 ರಿಂದ

ಮಟ್ಟದಲ್ಲಿ ಪ್ರಾಂತ್ಯ ಮಟ್ಟದಲ್ಲಿ ಚುನಾವಣೆ ನಡೆಸದೆ ಕೇವಲ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸುವುದು ಒಂದು ನಾಟಕ ಎಂದು ತಿಳಿಸಿದೆ. ಪಾಕಿಸ್ತಾನದಲ್ಲಿ ಮಾನವ ಹಕ್ಕುಗಳ ಉಲ್ಲಂಘನೆಗಳ ಬಗ್ಗೆಯೂ ಆತ ಏನೂ ಹೇಳಲಿಲ್ಲ. ಇಲ್ಲಿ ಒಂದು ಸಂಗತಿ ಗಮನಾರ್ಹ ಪಾಕಿಸ್ತಾನದಲ್ಲಿ ಸ್ವಲ್ಪಕಾಲ ನಿಂತು ಹೋಗುವ ನಿರ್ಣಯದ ಮೂಲಕ ಕ್ಲಿಂಟನ್ ಎರಡು ಕೆಲಸ ಮಾಡಿದರು. ಒಂದು ಭಾರತ ತನ್ನ ಛದ್ರಛಾಯೆಯೊಳಗೆ ಬರಲು ಸ್ವಾಗತವಿದೆ, ಆದರೆ ಅಮೇರಿಕಾ ಮಾತ್ರ ಪಾಕಿಸ್ತಾನದ ಕೈ ಬಿಡುವುದಿಲ್ಲ ಎಂಬ ಸಂಕೇತವನ್ನು ಆತ ಭಾರತ ಸರಕಾರಕ್ಕೆ ನೀಡಿದರು. ಎರಡು ಮುಶರ್ರಫ್ ಆಡಳಿತಕ್ಕೆ ಕಾನೂನು ಪ್ರಕಾರವಾಗಲ್ಲವಾದರೂ, ಕಾರ್ಯತಃ ಮನ್ನಣೆ ನೀಡಿದರು. ಇದು ಈಗ ಅಂತರ್ರಾಷ್ಟ್ರೀಯವಾಗಿ ಒಂಟಿಯಾಗಿ ಬಿಟ್ಟಿದ್ದ ಮಿಲಿಟರಿ ಸರ್ವಾಧಿಕಾರಿಗೆ ಹರ್ಷತಂದಿರಬೇಕು.

ತೆರೆಯ ಮರೆಯಲ್ಲಿ

ಕಾಶ್ಮೀರ ಮತ್ತು ಪರಮಾಣು ಶಸ್ತ್ರಗಳಷ್ಟೇ ಕ್ಲಿಂಟನ್ ಭೇಟಿಯ ಮುಖ್ಯ ವಿಷಯಗಳಾಗಿರಲಿಲ್ಲ. ಈ ಭೇಟಿಯ ಆರ್ಥಿಕ ಆಯಾಮವೂ ಅಷ್ಟೇ ಮಹತ್ವದ್ದು. ಬಹುಪಾಲು ತೆರೆಯ ಮರೆಯಲ್ಲಿ ನಡೆದ ಆರ್ಥಿಕ ಪ್ರಶ್ನೆಗಳ ಮೇಲಿನ ಕಲಾಪಗಳನ್ನು ಮರೆಮಾಡುವಲ್ಲಿ ಸರಕಾರ ಎಬ್ಬಿಸಿದ ಭಾವೋನ್ಮಾದ ನೆರವಿಗೆ ಬಂತು. ಇದು ಬೇಸರದ ಸಂಗತಿ.

ಈ ಆರ್ಥಿಕ ಕಲಾಪಗಳಲ್ಲಿನ ಎಲ್ಲಾ ಸಂಗತಿಗಳು ಬಯಲಿಗೆ ಬರಲು ಸ್ವಲ್ಪ ಸಮಯ ಹಿಡಿಯಬಹುದು. ಆದರೆ ಒಂದಂತೂ ಖಂಡಿತ- ನಮ್ಮ ರಾಷ್ಟ್ರೀಯ ಹಿತಾಸಕ್ತಿಗಳನ್ನು ಕಡೆಗಣಿಸಿ ಭಾರತ ಸರಕಾರ ಅಮೇರಿಕಾಕ್ಕೆ ಹಲವು ರಿಯಾಯ್ತಿಗಳನ್ನು ನೀಡಿದೆ.

ಇಂತಹದ್ದೇನೋ ಆಗುತ್ತದೆ ಎಂದು ಆರಂಭದಿಂದಲೂ ಸ್ಪಷ್ಟವಾಗಿತ್ತು. ಕ್ಲಿಂಟನ್ ಪರಿವಾರದಲ್ಲಿ 250 ಅಮೇರಿಕನ್, ಅನಿವಾಸಿ ಭಾರತೀಯ ವ್ಯಾಪಾರಿಗಳು ಇದ್ದರು. ಕ್ಲಿಂಟನ್ ಕೈಗಾರಿಕೋದ್ಯಮಿ ಅಂಬಾನಿಗೆ 40 ನಿಮಿಷ ಸಂದರ್ಶನ ನೀಡಿದರು. ಭಾರತದ ಪ್ರಧಾನಿಗೂ ಅಷ್ಟು ಹೊತ್ತು ನೀಡಿರಲಿಲ್ಲ. ಆರ್ಥಿಕ ಒಪ್ಪಂದಗಳನ್ನು ನಾವಷ್ಟೇ ಅಲ್ಲ ಬೇರೆಯವರೂ ಈಗ ಟೀಕಿಸಲಾರಂಭಿಸಿದ್ದಾರೆ. ದಿಲ್ಲಿಯ ಸ್ವಯಂಸೇವಾ ಸಂಸ್ಥೆ 'ವಿಜ್ಞಾನ ಮತ್ತು ಪರಿಸರ ಕೇಂದ್ರ ಎರಡು ದೇಶಗಳ ನಡುವಿನ ವಿದ್ಯುತ್ ಶಕ್ತಿ ಒಪ್ಪಂದವನ್ನು ಬಲವಾಗಿ ಟೀಕಿಸುತ್ತಾ ಇದು ಭಾರತದ ಹಿತಾಸಕ್ತಿಗಳನ್ನು ಅಮೇರಿಕಾದ ಪ್ರಯೋಜನಕ್ಕೆ ಮಾರಿಕೊಂಡಿದೆ ಎಂದಿದೆ.

ಪೋಖ್ರಾನ್ ಸ್ಫೋಟದ ಮೊದಲಾಗಲಿ, ನಂತರವಾಗಲೀ ಭಾರತಕ್ಕೆ ತಂತ್ರಜ್ಞಾನ ವರ್ಗಾವಣೆಗಳ ಮೇಲೆ ಅಮೇರಿಕಾ ಹೇರಿದ್ದ ನಿರ್ಬಂಧಗಳ ಬಗ್ಗೆ ಕ್ಲಿಂಟನ್ ಏನೂ ಹೇಳದಿದ್ದರೂ ಒಂದು ಅಸಮಾನ ಭಾರತ-ಅಮೇರಿಕಾ ತಂತ್ರಜ್ಞಾನ ಒಪ್ಪಂದಕ್ಕೆ ಸಹಿಹಾಕಲಾಯಿತು. ಹಿಂದೆ ವಿದೇಶಾಂಗ ಕಾರ್ಯದರ್ಶಿಯಾಗಿದ್ದ ಜೆ.ಎನ್. ದೀಕ್ಷಿತ್‌ರವರು ಅಮೇರಿಕಾ ಇನ್ನಷ್ಟು ನಿರ್ಬಂಧಗಳನ್ನು ಹೇರಬಹುದು, ಮಾನವ ಹಕ್ಕು, ಕಾರ್ಮಿಕ ಮಾನದಂಡಗಳು ಎಂಬಿತ್ಯಾದಿ ಹೆಸರಿನಲ್ಲಿ ಹೇರಬಹುದು ಎಂದು ಶಂಕೆ ವ್ಯಕ್ತಪಡಿಸಿದ್ದಾರೆ.

ನಿಜವಾದ ಅಪಾಯ

ಒಟ್ಟಿನಲ್ಲಿ ಕ್ಲಿಂಟನ್ ನಮ್ಮ ಆರ್ಥಿಕವನ್ನು ಇನ್ನಷ್ಟು ತೆರೆಯಬೇಕು, ಜಾಗತೀಕರಿಸಬೇಕು ಎಂದು ನಂಬಿಸಲು ಪ್ರಯತ್ನಿಸಿದರು. ನಮ್ಮ ಜನಗಳ ಉದಾರೀಕರಣ, ಖಾಸಗೀಕರಣ, ಜಾಗತೀಕರಣದ ನೀತಿಗಳು ಜಗತ್ತಿನ ಜನಗಳಿಗೆ ಉಂಟುಮಾಡುವ ಕಹಿ ಪರಿಣಾಮಗಳನ್ನು ನೇರವಾಗಿ ಅನುಭವಿಸುತ್ತಿರುವಾಗಲೇ ಅದೇ ಜಾಗತೀಕರಣದ ಹೆಸರಲ್ಲಿ ಭಾರತಕ್ಕೆ ಅಮೇರಿಕನ್ ಆಹಾರಧಾನ್ಯಗಳ ಆವುದಿಗೆ ದಾರಿ ಸುಗಮಗೊಳಿಸಲಾಗುತ್ತಿದೆ.

ಇಂದು ಸಣ್ಣ ಸಂಗತಿಯೇನಲ್ಲ. ಅಮೇರಿಕಾ ತನ್ನ ಗೋಧಿ ಮತ್ತು ಅಕ್ಕಿ ರಫ್ತುಗಳಿಗೆ ಭಾರೀ ಸಬ್ಸಿಡಿ ನೀಡುತ್ತಿದೆ. ಎಂಬುದನ್ನು ಗಮನಿಸಬೇಕು. ಅಮೇರಿಕಾ ಮತ್ತು ಯುರೋಪಿಯನ್ ಒಕ್ಕೂಟದ ನಡುವೆ ಶಾಶ್ವತ ತಿಕ್ಕಾಟಕ್ಕೂ ಇದು ಕಾರಣವಾಗಿದೆ. ವಿಶ್ವ ವ್ಯಾಪಾರ ಸಂಸ್ಥೆಗಳ ನಿಯಮಗಳನ್ನು ಈ ವಿಷಯದಲ್ಲಿ ಅಮೇರಿಕಾ ಉಲ್ಲಂಘಿಸುತ್ತಿದೆ. ಈ ನಿಯಮಗಳು ದುರ್ಬಲ ದೇಶಗಳಿಗೆ ಮಾತ್ರ ಇದ್ದಂತಿದೆ. ಇವೆಲ್ಲದರ ಒಟ್ಟು ಪರಿಣಾಮವೆಂದರೆ ಆಮದಾದ ಅಮೇರಿಕಾದ ಅಕ್ಕಿ, ಗೋಧಿ ನಮ್ಮ ರೈತರು ಬೆಳೆದ ಅಕ್ಕಿ, ಗೋಧಿಗಿಂತ ಬಹಳ ಅಗ್ಗವಾಗಿರುತ್ತದೆ. ಅಂದರೆ ನಮ್ಮ ರೈತರನ್ನು ಈ ಆಮದುಗಳು ನಾಶ ಮಾಡಿಬಿಡುತ್ತವೆ. ಅದೇವೇಳೆಗೆ ನಮ್ಮ ಸಾಗುವಳಿ ಪ್ರದೇಶದಲ್ಲಿ ದೊಡ್ಡ ಭಾಗ ಆಹಾರಧಾನ್ಯಗಳಲ್ಲದ ಇತರ ಬೆಳೆಗಳಿಗೆ ಹೋಗುತ್ತದೆ.

ಇದೀಗ ಈ ಆಮದಿನಿಂದಾಗುವ ನಿಜವಾದ ಅಪಾಯ ದೇಶ ಆಹಾರಧಾನ್ಯಗಳ ಉತ್ಪಾದನೆಯಲ್ಲಿ ಹೊಂದಿರುವ ಸ್ವಾವಲಂಬನೆಯನ್ನು ಕಳೆಕೊಳ್ಳುತ್ತದೆ. ನಮ್ಮ ರೈತರು ಭಾರೀ ಬೆಲೆ ತೆತ್ತು ಈ ಸ್ವಾವಲಂಬನೆಯನ್ನು ಸಾಧಿಸಿದ್ದರು. ಆದರೆ ಈಗ ಭಾರತ ತನ್ನ ಆಹಾರದ ಅವಶ್ಯಕತೆಗಳಿಗಾಗಿ ಅಮೇರಿಕಾವನ್ನು ಅವಲಂಬಿಸುವ, ಹಿಂದಿನ ಪಿ.ಎಲ್. 480 ರೀತಿಯ ಸಾಮ್ರಾಜ್ಯಶಾಹಿ ಬ್ಲಾಕ್‌ಮೇಲ್‌ಗಳಿಗೆ ಒಳಗಾಗುವ ಸಂದರ್ಭ ಮತ್ತೆ ಮೂಡಿಬರುತ್ತಿದೆ. ಆರ್ಥಿಕವಾಗಿ ಬಲಿಷ್ಟವಾದ ಜಪಾನ್ ಕೂಡಾ ವಿದೇಶಗಳಿಂದ ಅಕ್ಕಿ ಆಮದಿಗೆ ಅವಕಾಶ ಕೊಡುತ್ತಿಲ್ಲ ಎಂಬುದನ್ನು ಭಾರತ ಸರಕಾರ ನೆನಪಿಸಿಕೊಳ್ಳುವದು ಒಳ್ಳೆಯದು.

ಇದು ಭಾರತೀಯ ಜನತೆಯ ಮುಂದಿರುವ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳ ಮೇಲಿರುವ ನಿಜವಾದ ಸವಾಲು. ನಮ್ಮ ದೇಶಕ್ಕೆ ಸಾಮ್ರಾಜ್ಯಶಾಹಿ ಶಕ್ತಿಗಳು ಒಡ್ಡಿರುವ ಬೆದರಿಕೆಯ ವಿರುದ್ಧ ಜನಗಳನ್ನು ಸಂಘಟಿಸುವ ಗುರುತರ ಹೊಣೆ ಈ ಶಕ್ತಿಗಳ ಮೇಲಿದೆ. ಇಲ್ಲಿಯ ಪ್ರಶ್ನೆ ಕೇವಲ ಸಂಬಳ, ಬೋನಸ್ ಅಥವಾ ಇತರ ಇಂತಹ ಭಾಗಶಃ ಬೇಡಿಕೆಗಳದ್ದಲ್ಲ, ಇಡೀ ದೇಶದ ಸಾರ್ವಭೌಮತ್ವವನ್ನೇ ರಕ್ಷಿಸುವ ಪ್ರಶ್ನೆ ಇದು. ನಮ್ಮ ಪ್ರಮುಖ ಹೋರಾಟಗಾರರ ಹಲವ ಪೀಳಿಗೆಗಳ ಅಸಂಖ್ಯ ತ್ಯಾಗ- ಬಲಿದಾನಗಳಿಂದ ಗಳಿಸಿದ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವ ಪ್ರಶ್ನೆ ಇದು. ಇದಕ್ಕೆ ಜನಗಳ ಬೆಂಬಲ ಖಂಡಿತ. ಆದರೆ ಅದಕ್ಕಾಗಿ ಮುಂದಿರುವ ಅಪಾಯಗಳ ಬಗ್ಗೆ ಅವರನ್ನು ಪ್ರಜ್ಞಾಶೀಲರಾಗಿ ಮಾಡಬೇಕಾಗಿದೆ, ಜಾಗೃತಗೊಳಿಸಬೇಕಾಗಿದೆ.

'ಫಿರ್ ಭಿ ದಿಲ್ ಹೈ ಹಿಂದೂಸ್ತಾನಿ'

ಗ್ರಾಹಕ ಸಂಸ್ಕೃತಿ, ಖಾಸಗೀ ಟೀವಿ ಚಾನೆಲ್‌ಗಳ ಪ್ರಬಲ ಲೇವಡಿ

ಶಾರೂಖ್ ಖಾನ್, ಜೂಹಿ ಚಾವ್ಲಾ ನಟನೆ ಹಾಗೂ ನಿರ್ಮಾಪನೆ ಎರಡೂ ಮೂಲಕ, ಅಜೀಜ್ ಮಿರ್ಜಾ ನಿರ್ದೇಶನ ಮತ್ತು ನಿರ್ಮಾಪನೆ ಎರಡೂ ಮಾಡುವ ಮೂಲಕ ಕುತೂಹಲ ಕೆರಳಿಸಿದ ಚಿತ್ರ ಫಿರಾ ಭಿ ದಿಲ್ ಹೈ ಹಿಂದೂಸ್ತಾನಿ ಉತ್ತಮ ಚಿತ್ರವಾದರೂ ಹಿಟ್ ಆಗಿಲ್ಲ. ವಿಭಿನ್ನ ರೀತಿಯ ಕಥೆ ಹೊಂದಿ ಈಗ ಗುಲ್ಲೆಬ್ಬಿಸುತ್ತಿರುವ ಖಾಸಗಿ ಟೀವಿ ಚಾನೆಲ್‌ಗಳ ಹಾಗೂ ಗ್ರಾಹಕ ಸಂಸ್ಕೃತಿಯನ್ನು ಜೋರಾಗಿ ಲೇವಡಿ ಮಾಡುವುದು ಚಿತ್ರದ ತಿರುಳು.

'ಕೆ' ಟಿವಿ 'ಗ್ಯಾಲಾಕ್ಸಿ ಟೀವಿ ಪೈಪೋಟಿ:

ಅಜಯ್ ಭಕ್ಷಿ (ಶಾರೂಖ್) ರಿಮಾ ಬ್ಯಾನರ್ಜಿ (ಜೂಹಿ) ಪರಸ್ಪರ ಪೈಪೋಟಿಯಲ್ಲಿರುವ ಖಾಸಗಿ ಟೀವಿ ಚಾನೆಲ್ಗಳ ಪ್ರಧಾನ ವರದಿಗಾರ ಕೆ ಮತ್ತು ಗ್ಯಾಲಾಲಾಕ್ಸೀ ಪ್ರಸ್ತುತ ಪಡಿಸುವವರು ಮಾಲಿಕರಂತೆ ಇವರೂ ತೀವ್ರ ಪೈಪೋಟಿಗಿಳಿದು, ಒಬ್ಬರು ಇನ್ನೊಬ್ಬರ ಕಾಲೆಳೆಯುತ್ತಾ ಇಲ್ಲದ ಹರಕತ್ತುಗಳನ್ನು ನಡೆಸುತ್ತಾರೆ. ಶಾರೂಖ್ ಬಹುಮಹಡಿ ಕಟ್ಟಡವೊಂದರಲ್ಲಿ ಇಡಲಾದ ಬಾಂಬ್‌ನ ಲೈವ್‌ಕವರ್ ಮಾಡಲು ಹೋಗಿ ಆಕಸ್ಮಿಕವಾಗಿ ಬೆಕ್ಕು ಒಂದನ್ನು ಬಚಾವ್ ಮಾಡಿ ಜನಪ್ರಿಯ ಹಿರೋ ಪತ್ರಕರ್ತನಾಗುವುದರೊಂದಿಗೆ ಚಿತ್ರ ಆರಂಭವಾಗುತ್ತದೆ! ಇದರಿಂದ ಉತ್ತೇಜಿತನಾದ ಎದುರಾಳಿ ಟಿವಿ ಚಾನೆಲ್ ಮಾಲಿಕ, ಇನ್ನೊಂದು ಟೀವಿಯಲ್ಲಿ ಪ್ರಸಿದ್ಧರಾದ ಜೂಹಿಯನ್ನು ಪೈಪೋಟಿ ನಡೆಸಲು ತರುತ್ತಾನೆ. ಆಕೆಯ ಹೆಗ್ಗಳಿಕೆ ಭಾರಿ ನೆರೆಯನ್ನು ಲೆಕ್ಕಿಸದೆ, ನೆರೆಪೀಡಿತ ಪ್ರದೇಶದಿಂದ ಲೈವ್ ವರದಿ ಮಾಡಿದ್ದು ನೆರೆಪೀಡಿತ ಪ್ರದೇಶದ ಇಡೀ ಲೈವ್‌ವರದಿ ನಗರದಲ್ಲಿ ಹಾಕಲಾದ ಸೆಟ್‌ನಲ್ಲಿ ನಟನೆ ಮಾಡಿದ್ದು ಎಂದು ತೋರಿಸುವ ಮೂಲಕ ಎಲ್ಲಾ ಖಾಸಗೀ ಟೀವಿ ಚಾನೆಲ್‌ಗಳು ಗುಲ್ಲೆಬ್ಬಿಸಲು ಉತ್ತೇಜಕ ವರದಿ ಮಾಡಲು ಏನೂ ಮಾಡಲು ರೆಡಿ ಎಂಬ ಧೋರಣೆಯಿಂದಲೇ ಚಿತ್ರ ಆರಂಭವಾಗುತ್ತದೆ.

ಎರಡೂ ಟೀವಿ ಚಾನೆಲ್‌ಗಳ, ಅದರ ಮಾಲಿಕರ, ಶಾರೂಖ್-ಜೂಹಿಗಳ ಪೈಪೋಟಿ ಆರಂಭವಾಗುತ್ತದೆ. ಈ ನಡುವೆ ಅವರ ಪೈಪೋಟಿ ಆಳುವ ಪಕ್ಷದ ಮುಖ್ಯಮಂತ್ರಿ ಮತ್ತು ಭಿನ್ನಮತೀಯ ನಾಯಕರ ಕಿತ್ತಾಟದಲ್ಲಿ ಸೇರಿಕೊಂಡು ಬಿಡುತ್ತಾರೆ. ಮುಖ್ಯಮಂತ್ರಿಯ ಬೆಂಬಲಿಗ ಭೂಗತ ದೊರೆಯೊಬ್ಬನ ಜೈಲಿನೊಳಗೆ ಲೈವ್ ಇಂಟರ್ವ್ಯೂಗೆ ಪೈಪೋಟಿ ನಡೆಸಿ ರಿಯಾ (ಜೂಲಿ) ಗೆಲ್ಲುತ್ತಾಳೆ. ಅಜಯ (ಶಾರುಖ್)ಗೆ ಮುಖ್ಯ ಮಂತ್ರಿ ಬೆಂಬಲವಿದ್ದರೂ. ಭಿನ್ನಮತೀಯ ನಾಯಕ ಚುನಾವಣೆಗೆ ಪೂರ್ವದಲ್ಲಿ ಯಾತ್ರೆಗೆ ಬಾರಿ ಪ್ರಚಾರ ಗಿಟ್ಟಿಸಲು ರಿಯಾ (ಜೂಲಿ)ಳ ಗ್ಯಾಲಕ್ಸಿ ಟಿವಿ ಬಳಸಲು ಪ್ರಯತ್ನಿಸುತ್ತಾನೆ. ಪೈಪೋಟಿಯಲ್ಲಿ ಏಟು ತಿಂದ ಅಜಯ್ ಜಿದ್ದಿನಿಂದ ಈ ಯಾತ್ರೆ ಕೆಡಿಸಲು ಪ್ರಯತ್ನಿಸುತ್ತಾನೆ. ಇದಕ್ಕಾಗಿ ಪ್ರಚಾರಪ್ರಿಯ ಮಾಫಿಯಾ ದೊರೆಯೊಬ್ಬನನ್ನು ಬಳಸುತ್ತಾನೆ. ಆದರೆ ಆ ಗಲಾಟೆಯಲ್ಲಿ ಭಿನ್ನಮತೀಯ ನಾಯಕನ ನೆಂಟನ ಕೊಲೆಯಾಗುತ್ತದೆ. ಆತ ಕೆಲಸ ಕೊಡಿಸುತ್ತೇನೆಂದು ರೇಪ್ ಮಾಡಿದ ಹುಡುಗಿಯ ತಂದೆ ಆತನನ್ನು ಕೊಲೆ ಮಾಡುತ್ತಾನೆ. ಈ ಘಟನೆಯನ್ನು ರಾಜಕೀಯವಾಗಿ ಬಳಸಲು ಪುನ: ಆಳುವ ಮತ್ತು ಭಿನ್ನಮತೀಯರು ಇಬ್ಬರೇ ಪೋಲಿಸರ ಮೇಲೆ ಒತ್ತಡ ಹೇರುತ್ತಾರೆ. ಪೋಲಿಸರು ಒತ್ತಡ ತಾಳಲಾರದೆ ಆತನೊಬ್ಬ ವಿದೇಶಿ ಶಕ್ತಿಗಳಿಗೆ ಕೆಲಸ ಮಾಡುತ್ತಿರುವ ಭಯೋತ್ಪಾದಕ ಎಂದು ಹೇಳುತ್ತಾರೆ. ಇಂತಹ ಭಯಾನಕ ಭಯೋತ್ಪಾದಕ ನಮ್ಮ [illegible] ಪ್ರಚಾರ ಗಳಿಸಬಹುದೆಂಬ [illegible]ಯಲ್ಲಿ ನಮ್ಮ ಮಾಫಿಯಾ ದೊರೆ ಆತನನ್ನು ಅಪಹರಿಸಲು ಪ್ರಯತ್ನಿಸಿ, ಬದಲಿಗೆ ಹುಸಿ 'ಭಯೋತ್ಪಾದಕ' ಅಜಯ್ ರಿಯಾರ ಕಾರಿನಲ್ಲಿ ಅಡಗಿಕೊಂಡು ಪಾರಾಗಲು ಪ್ರಯತ್ನಿಸುತ್ತಾನೆ. ಅಷ್ಟು ಹೊತ್ತಿಗೆ ಅಜಯ್ ರಿಯಾರ ಪೈಪೋಟಿ-ತಿಕ್ಕಾಟ ಅನುರಾಗಕ್ಕೆ ತಿರುಗಿರುತ್ತದೆ.

'ಭಯೋತ್ಪಾದಕ' ನೇಣುಗಂಬಕ್ಕೆ ದೇಶಭಕ್ತಿ ಬಡಿದೆಬ್ಬಿಸಲು

ಭಯೋತ್ಪಾದಕ ತನ್ನ ನಿಜ ಕಥೆ ಹೇಳಿದಾಗ, ಇಬ್ಬರೂ ತಮ್ಮ ಪೈಪೋಟಿ ಮರೆತು, ಈ ಬಡಪಾಯಿಯ ಹಕ್ಕುಗಳಿಗಾಗಿ ಹೋರಾಡಬೇಕು ಆತನ ಸಂಕಷ್ಟಗಳಿಗೆ ಕಾರಣರಾದ ರಾಜಕಾರಣಿಗಳನ್ನು ತಮ್ಮ ಮಾಧ್ಯಮದ ಮೂಲಕ ಬಯಲಿಗೆಳೆಯಬೇಕು ಎಂದು ನಿರ್ಧರಿಸುತ್ತಾರೆ. ಆತನ ಕಥೆಯನ್ನು ಟೇಪ್ ಮಾಡುತ್ತಾರೆ.ಹಿಗೆಯೇ ಭಾರಿ ಪ್ರಚಾರದ ಅದರಿಂದ ಭಾರಿ ಲಾಭದ ಆಮಿಷತೋರಿ ಇಬ್ಬರೂ ಜಂಟಿಯಾಗಿ ಈ ಇಂಟರ್‌ವ್ಯೂ ಪ್ರಸಾರ ಮಾಡಲು ಒಪ್ಪಿಸುತ್ತಾರೆ ಆದರೆ ಈ ಟೇಪ್ ಇಬ್ಬರಿಗೂ ಅಪಾಯವೆಂದು ಕಂಡು ಟೀವಿ ದೊರೆಗಳಿಗೆ 24 ಗಂಟೆ ಚಾನೆಲ್ ಪರ್ಮಿಟ್ ಇತ್ಯಾದಿ ಆಮಿಷ ತೋರಿಸಿ ಟೇಪ್ ಪ್ರಸಾರ ಆಗದಂತೆ ನೋಡಿಕೊಳ್ಳುತ್ತಾರೆ. ತನ್ನ ನಿಜ ಕಥೆ ಹೇಳಿ ನಿರಪರಾಧಿ ಎಂದು ಸಾಧಿಸಬೇಕಿದ್ದವನ್ನು ಟಿವಿ ದೊರೆಗಳು ಆಳುವವರೊಂದಿಗೆ ಕೈ ಮಿಲಾಯಿಸಿ ತಮ್ಮ ಲಾಭಕ್ಕೆ ಜೈಲಿಗೆ ಅಟ್ಟುತ್ತಾರೆ. ಆತನನ್ನು ಸಾರ್ವಜನಿಕವಾಗಿ ಭಯೋತ್ಪಾದನೆಯ ಅಪರಾಧಕ್ಕೆ ನೇಣಿಗೆ ಹಾಕಿ ಅದನ್ನು ಲೈವ್ ಪ್ರಸಾರ ಮಾಡಬೇಕು ಆ ಮೂಲಕ ಚುನಾವಣಾ ಸಮಯದಲ್ಲಿ ದೇಶಭಕ್ತಿಯ ಹೊಳೆ ಹರಿಸಬೇಕು ಆ ಮೂಲಕ ಚುನಾವಣ ಸಮಯದಲ್ಲಿ ದೇಶ ಭಕ್ತಿಯ ಹೊಳೆ ಹರಿಸಬೇಕು ಎಂದು ರಾಜಕಾರಣಿಗಳು ಟಿವಿ ದೊರೆಗಳು ನಿರ್ಧರಿಸುತ್ತಾರೆ. ಈ ನೇಣುಗಂಬಕ್ಕೆ ಹಾಕುವುದನ್ನು ಸ್ಪಾನ್ಸರ್ ಶಿಪ್ ಜಾಹೀರಾತುಗಳೊಂದಿಗೆ ಭಾರಿ ಲಾಭಕಾರಿಯಾಗಿ ದೊರೆಗಳು ಪರಿವರ್ತಿಸುತ್ತಾರೆ.

ಆದರೆ ಅಜಯ್ -ರಿಯಾ ಬೇರೆ ಟಿವಿ ಚಾನೆಲ್‌ಗಳಲ್ಲಿ ಪತ್ರಿಕೆಗಳಲ್ಲಿ ಭಯೋತ್ಪಾದಕನ ನಿಜ ಕಥೆ ಸಾರ್ವಜನಿಕರಿಗೆ ತಿಳಿಸಲು, ಆಮೂಲಕ ನೇಣು ಹಾಕುವುದನ್ನು ತಪ್ಪಿಸಲು ಹೆಣಗುತ್ತಾರೆ. ಪುನ: [illegible]ಯ ಮೊರೆ ಹೋಗಿ ಟೇಪ್ ವಾಪಸ್ ಪಡೆದು, ನೇಣುಗಂಬಕ್ಕೆ ಹಾಕುವ ಕೆಲವೇ ನಿಮಿಷಗಳ ಮೊದಲು ಟಿವಿ ಸ್ಟೇಶನ್‌ಗೆ ನುಗ್ಗಿ ಟೇಪ್ ಪ್ರಸಾರದ ಮೂಲಕ ಜನರನ್ನು ಬಡಿದೆಬ್ಬಿಸಿ ಜನ ಈ ದೇಶಭಕ್ತಿಯ ತಮಾಷೆ ಪ್ರದರ್ಶನವನ್ನು ನಿಲ್ಲಿಸುವಂತೆ ಮಾಡುವುದರಲ್ಲಿ ಸಿನಿಮಾ ಕೊನೆಗೊಳ್ಳುತ್ತದೆ

ಪ್ರಬಲ ಲೇವಡಿ:

ಫಿರ್‌ಭಿಯ ನಿಜವಾದ ಸಕಾರಾತ್ಮಕ ಅಂಶ ಟಿವಿ ಚಾನೆಲ್‌ಗಳು, ಅವುಗಳ ಖಾಸಗೀ ಒಡೆಯರ ಲಾಭಕೋರತನ, ರಾಜಕಾರಣಿಗಳ ಜತೆ ಶಾಮೀಲು, ಅವು ಹರಡುತ್ತಿರುವ ಭಯಂಕರ ಕೊಳ್ಳುಬಾಕ ಗ್ರಾಹಕ ಸಂಸ್ಕೃತಿಯನ್ನು ಪ್ರಬಲವಾಗಿ ಲೇವಡಿ ಮಾಡುವುದು ನೇಣುಗಂಬಕ್ಕೆ ಹೋಗುವ ದಾರಿ ಉದ್ದಕ್ಕೂ ಜಾಹೀರಾತುಗಳು, ನೇಣುಗಂಬಕ್ಕೆ ಹೋಗುವವನ ಮೈಮೇಲೆಲ್ಲಾ ಜಾಹೀರಾತುಗಳು ನೇಣು ಗಂಬದವರೆಗೂ ಲೈವ್ ವರದಿ ಮಧ್ಯೆ ಮಧ್ಯೆ ಜಾಹೀರಾತುಗಳು ಇವು ಖಾಸಗಿ ಟಿವಿಗಳು ಗುಲ್ಲು ಉದ್ದೇಶ ಭರಿತ ವರದಿಗಳ ಮೂಲಕ ಹೇಗೋ ಸುದ್ದಿ ಮಾಡುವ ಜಾಯಮಾನವನ್ನು ಚೆನ್ನಾಗಿ ಲೇವಡಿ ಮಾಡಿದೆ. ಕಥೆ ಅಂಥ ಹೊಸತು ಅಲ್ಲದಿದ್ದರೂ ಈ ಲೇವಡಿ ಈ ಫಿಲಮ್‌ಗೆ ಹೊಸ ಮೆರಗು ಕೊಟ್ಟಿದೆ. ಅಲ್ಲದೆ ಫಿಲಂ ಉದ್ದಕ್ಕೂ ಲವಲವಿಕೆ ನವಿರಾದ ಹಾಸ್ಯ ಇದೊಂದು ಕಮರ್ಶಿಯಲ್ ಫಾರ್ಮೂಲ ಚಿತ್ರಕ್ಕಿಂತ ಸ್ವಲ್ಪ ಭಿನ್ನವಾದ ಚಿತ್ರವಾಗಿಸಿದೆ. ಝಿ, ಸ್ಟಾರ್ ಟೀವಿಯ ವ್ಯಕ್ತಿಗಳನ್ನು ಹೋಲುವ ಪಾತ್ರಗಳು, ಕಾರ್ಗಿಲ್ ಹುಸಿ ದೇಶಭಕ್ತಿ ಬಡಿದೆಬ್ಬಿಸುವುದು ರಾಜಕಾರಣಿ ಟಿವಿ ಮೂಲಕ ಶಾಮೀಲು ನೆನಪಿಸುವವು ಪ್ರಬಲ ರಾಜಕೀಯ ವಿಡಂಬನೆಯಾಗಿದೆ. ಅಲ್ಲದೆ ಕೊನೆಯ ದೃಶ್ಯದಲ್ಲಿ ಹಿರೊ-ಹಿರೊಯಿನ್ ಸೂಪರ್‌ಮ್ಯಾನ್‌ಗಳಂತೆ ತಾವು ಶೂರತನ ತೋರದೆ ಜನರನ್ನು ಬಡಿದೆಬ್ಬಿಸಿ, ಜನ ಬಲದ ಮೂಲಕ ಸಾಧಿಸುವುದು ಜನಬಲ ಮುಂದೆ ಬಂದಾಗ ಪೋಲಿಸು ಆಡಳಿತ, ಆಳುವವರು ನಡುಗುವುದು ಈ ಮೂಲಕ ಫಿಲಂ ಒಟ್ಟಾರೆ ಸಕಾರಾತ್ಮಕ ರಾಜಕೀಯ ನಿಲುವು ತೆಗೆದುಕೊಂಡಿದೆ

ಇದರರ್ಥ ಈ ಫಿಲಂನಲ್ಲಿ ದೋಷಗಳಿಲ್ಲವೆಂದಲ್ಲ. ಶಾರೂಖ್- ಜೂಹಿ-ಅಜೀಜ್‌ಮಿರ್ಜಾ ನಟ-ನಟಿ ನಿರ್ದೇಶಕರೇ ನಿರ್ಮಾಪಕರಾಗಿರುವ ಫಿಲಂನಿಂದ ಇನ್ನು ಹೆಚ್ಚಿನ ಗುಣಮಟ್ಟದ ನಿರೀಕ್ಷೆ ಹುಸಿಯಾಗಿದೆ. ಜನರಲ್ಲಿ ಸಕಾರಾತ್ಮಕ ಮೌಲ್ಯಗಳನ್ನು ಮೂಡಿಸುವಲ್ಲಿ ಜನರನ್ನು ಆಕರ್ಷಿಸುವ ಕನಿಷ್ಠ ಕಮರ್ಶಿಯಲ್ ಅಂಶಗಳ ಉತ್ತಮ ಕಥೆಯ ಮಧ್ಯಮ ದಾರಿ ಅಗತ್ಯವಾದರೂ ಈ ಫಿಲಂನಲ್ಲಿ ಕಮರ್ಶಿಯಲ್ ಮಸಾಲೆಗಳು ಅತಿಯಾಗಿ ಮುಖ್ಯ ಸಾರ ಮುಳುಗಿ ಹೋಗುವಂತಾಗಿದೆ. ಫಿಲಂನ ಸಂಗೀತದಲ್ಲೂ ಹೇಳಿಕೊಳ್ಳುವಂಥದ್ದೇನೂ ಇಲ್ಲ. ಇದೇ ತ್ರಿವಳಿಗಳ ಹಿಂದಿನ ಫಿಲಂಗಳಾದ 'ರಾಜು ಬನ್‌ಗಯಾ ಜಂಟಲ್‌ಮನ್' ಮತ್ತು 'ಯೆಸ್ ಬಾಸ್'ಗೆ ಹೋಲಿಸಿದರೂ ಈ ಫಿಲಂ ಅರ್ಭಟಕ್ಕೆ ಬಂದಿಲ್ಲ ಎನ್ನಬಹುದು. ಇತ್ತೀಚೆಗೆ ಕೊಕೊ ಕೋಲಾದಿಂದ ಪೆಪ್ಸಿಯುವರೆಗೆ ಎಲ್ಲಾದರ ಜಾಹೀರಾತಿನಲ್ಲಿ ಕಾಣಿಸಿಕೊಳ್ಳುವ ಶಾರೂಖ್‌ನ ಇಮೇಜ್ ಗ್ರಾಹಕ ಸಂಸ್ಕೃತಿಯನ್ನು ಗಂಭೀರವಾಗಿ ಲೇವಡಿ ಮಾಡುವ ಚಿತ್ರದಲ್ಲಿ ಪರಕೀಯನಂತೆ ಕಾಣುತ್ತಾರೆ. ಆದರೂ ಶಾರೂಖ್- ಜೂಹಿ, ಅಜಿಜ್ ಮಿರ್ಜಾ ಪಾಲುದಾರಿಕೆ ಇರುವ ಹೊಸ ಕಂಪನಿ 'ಡ್ರೀಮ್ಸ್ ಅನ್‌ಲಿಮಿಟೆಡ್' ಇಂತಹ ಇನ್ನೂ ಜನಪರ ಸದಭಿರುಚಿಯ ಚಿತ್ರ ಕೊಡುವಂತಾಗಲಿ ಎಂದು ಹಾರೈಸಬೇಕಾಗಿದೆ. ಬೇರೆ ಯಾವುದೇ ನಿರ್ಮಾಪಕರಿಗಿಂತ ಇವರಿಗೆ ಹೆಚ್ಚಿನ ಇಂತಹ ಸಾಧ್ಯತೆ ಇದೆ.

PRB DECR 319-79/79 AIKYARANGA WEEKLY Reg. No. 17015/64 KRNM/BGS-405 MAG (2)

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್.ನಾಗರಾಜ್, ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India(Marxist), Karnataka State Committee. Editor : G.N. NAGARAJ